ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 3 ಗುರುವಾರ 2022

43

ಸಂಪುಟ: 43 | ಸಂಚಿಕೆ: 196 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಬೆಂಗಳೂರಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ; ಪ್ರಧಾನಿ ಮೋದಿ ಚಾಲನೆ

ಬಂಡವಾಳ ಹೂಡಿಕೆಗೆ ಪೂರಕವಾಗಿ ಕಾನೂನುಗಳಲ್ಲಿ ಸಾಕಷ್ಟು ಮಾರ್ಪಾಡು

- ರಕ್ಷಣೆ, ಬಾಹ್ಯಾಕಾಶ, ಭೌಗೋಳಿಕ ನಕ್ಷೆ, ಡ್ರೋಣ್ ಇನ್ನಿತರೆ ಕ್ಷೇತ್ರಗಳಲ್ಲಿ ಹೂಡಿಕೆಗೆ ಆಹ್ವಾನ
- ಬಂಡವಾಳ ಹೂಡಿಕೆದಾರರಿಗೆ ಕಠಿಣ ನಿಯಮಗಳ ಒಡ್ಡಬೇಡಿ; ಪ್ರಧಾನಿ ಮೋದಿ





ಬೆಂಗಳೂರು, ನ. 2(ಕೆಎಂಶಿ)– ರಾಷ್ಟ್ರದಲ್ಲಿ ಬಂಡವಾಳ ಹೂಡಿಕೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಕಾನೂನುಗಳನ್ನು ಸಡಿಲಗೊಳಿಸಲಾಗಿದೆ. ಇದನ್ನು ರಾಜ್ಯ ಸರ್ಕಾರಗಳು ಬಳಕೆ ಮಾಡಿಕೊಂಡು ನಿರುದ್ಯೋಗ ಸಮಸ್ಯೆ ಬಗೆಹರಿಸಿ, ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತು ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಜಾಗತಿಕ ಹೂಡಿಕೆದಾರರ ಸಮಾವೇಶವನ್ನು ವರ್ಚುವಲ್ ಮಾದರಿಯಲ್ಲಿ ಉದ್ಘಾಟಿಸಿ ಮಾತನಾಡಿದ ಅವರು, ಭಾರತದಲ್ಲಿ ಹೂಡಿಕೆದಾರರಿಗೆ ರೆಡ್ ಟೇಪಿಸಂನಿಂದ ವಿಮುಕ್ತಿ ನೀಡಿ ಮುಕ್ತ ಅವಕಾಶಗಳನ್ನು ಕಲ್ಪಿಸಲಾಗಿದೆ. ರಕ್ಷಣೆ, ಬಾಹ್ಯಾಕಾಶ, ಭೌಗೋಳಿಕ ನಕ್ಷೆ, ಡ್ರೋಣ್ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಖಾಸಗಿ ಹೂಡಿಕೆಗಳಿಗೆ ಉತ್ತೇಜನ ನೀಡಲಾಗುತ್ತಿದೆ ಎಂದು ಹೇಳಿದರು. ವೆಲ್‌ಕಂ ಟು ನಮ್ಮ ಕರ್ನಾಟಕ, ವೆಲ್‌ಕಂ ಟು ನಮ್ಮ ಬೆಂಗಳೂರು ಎಂದು ಉದ್ಯಮಿಗಳಿಗೆ ಸ್ವಾಗತ ಕೋರಿದ ಪ್ರಧಾನಿಯವರು, ಕನ್ನಡಿಗರು ಕನ್ನಡ ರಾಜ್ಯೋತ್ಸವ ಆಚರಿಸಿಕೊಂಡಿದ್ದಾರೆ. ಕರ್ನಾಟಕದ ಪ್ರಕೃತಿ, ತಂತ್ರಜ್ಞಾನ, ಉದ್ಯಮ ಅತ್ಯುತ್ತಮ ಬ್ರ್ಯಾಂಡ್ ಬೆಂಗಳೂರಿಗೆ ಜಾಗತಿಕವಾಗಿ ಆದ್ಯತೆ, ಪರಿಗಣನೆ ಇದೆ. ಕರ್ನಾಟಕದ ಸಂಸ್ಕೃತಿ ಉನ್ನತ ಮಟ್ಟದ್ದು, ಕನ್ನಡಿಗರ ಸ್ವಾಭಿಮಾನ ದೊಡ್ಡದು ಎಂದು ವಿಶ್ಲೇಷಿಸಿದರು. ಭಾರತದ ಪ್ರಗತಿಯಾಗಲು ರಾಜ್ಯಗಳು ಮೊದಲು ಪ್ರಗತಿ ಹೊಂದಬೇಕಿದೆ. ಜಗತ್ತಿನ ದೊಡ್ಡ ದೊಡ್ಡ ಕಂಪನಿಗಳು ಈ ಸಮಾವೇಶದಲ್ಲಿ ಪಾಲ್ಗೊಂಡಿವೆ. ಸಮಾವೇಶದಿಂದ ಉದ್ಯೋಗ ಸೃಷ್ಟಿಯಾಗಲಿದೆ, ಸಾವಿರಾರು ಕೋಟಿ ಹೂಡಿಕೆ ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಬಂಡವಾಳ ಹೂಡಿಕೆದಾರರಿಗೆ ಕಠಿಣ ನಿಯಮಗಳನ್ನೊಡ್ಡಬೇಡಿ

▶ 9ನೇ ಪುಟಕ್ಕೆ

ಮೈಸೂರು–ಚೆನ್ನೈ ಪ್ರಯಾಣಿಕರಿಗೆ ಶತಾಬ್ಧಿ, ವಂದೇ ಭಾರತ್ ಎಕ್ಸ್‌ಪ್ರೆಸ್

ಡಬಲ್ ಧಮಾಕ

- ಮೈಸೂರು–ಬೆಂಗಳೂರು ನಡುವೆ ಗಂಟೆಗೆ 77.53 ಕಿ.ಮೀ, ಬೆಂಗಳೂರು–ಚೆನ್ನೈ ನಡುವೆ ಇನ್ನೂ ವೇಗದಲ್ಲಿ ಸಾಗಲಿದೆ 'ವಂದೇ ಭಾರತ್'
- 6 ಗಂಟೆ 40 ನಿಮಿಷದಲ್ಲಿ 504 ಕಿ.ಮೀ. ಕ್ರಮಿಸುವ ರೈಲು; ಬೆಂಗಳೂರು, ಕಟ್ಪಾಡಿಯಲ್ಲಿ ಮಾತ್ರ ನಿಲುಗಡೆ



ಮೈಸೂರು, ನ. 2(ಆರ್‌ಕೆ)– ಮೈಸೂರಿನಿಂದ ಬೆಂಗಳೂರು ಮಾರ್ಗವಾಗಿ ಚೆನ್ನೈ ನಗರಕ್ಕೆ ತೆರಳುವ ಪ್ರಯಾಣಿಕರಿಗೆ ಡಬಲ್ ಧಮಾಕ ಅವಕಾಶ. ಪ್ರಸ್ತುತ ಚಾಲ್ತಿಯಲ್ಲಿರುವ ವೇಗದ ಶತಾಬ್ದಿ ಎಕ್ಸ್‌ಪ್ರೆಸ್ ಜೊತೆಗೆ ಇದೀಗ 'ವಂದೇ ಭಾರತ್' ರೈಲು ಸೇರ್ಪಡೆಯಾಗಿರುವುದರಿಂದ ಮೈಸೂರು–ಚೆನ್ನೈ ನಡುವೆ ಸಂಚರಿಸುವ ಪ್ರಯಾಣಿಕರಿಗೆ ವರದಾನವಾಗಿ ಪರಿಣಮಿಸಿದೆ. ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಸಂಸದ ಪ್ರತಾಪ್ ಸಿಂಹ, ಮೂರೂ ನಗರಗಳ ನಡುವೆ ವಂದೇ ಭಾರತ್ ರೈಲು ತ್ವರಿತ ಸಂಪರ್ಕ ಕಲ್ಪಿಸಲಿದೆ ಎಂದರು.



ಬೆಂಗಳೂರು–ಚೆನ್ನೈ ನಡುವೆ ಟ್ರ್ಯಾಕ್ ಬಹುತೇಕ ಪ್ರಮಾಣದಲ್ಲಿ ನೇರವಾಗಿರುವುದರಿಂದ ವಂದೇ ಭಾರತ್ ರೈಲು ಅತೀ ವೇಗವಾಗಿ ಚಲಿಸಲಿದೆ. ಆದರೆ ಮೈಸೂರು–ಬೆಂಗಳೂರು ನಡುವೆ ಅನೇಕ ಕಡಿದಾದ ತಿರುವುಗಳಿರುವುದರಿಂದ ರೈಲು ಸ್ವಲ್ಪ ಮಟ್ಟಿಗೆ ವೇಗ ತಗ್ಗಿಸಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ಆರಂಭಿಕ ಹಂತದಲ್ಲಿ ನಿಗದಿಪಡಿಸಿರುವ ವಂದೇ ಭಾರತ್ ರೈಲಿನ ವೇಳಾಪಟ್ಟಿ, ನಿಲುಗಡೆ ಹಾಗೂ ವಿರಾಮದ ದಿನವನ್ನು ನಂತರ ರೈಲ್ವೆ ಅಧಿಕಾರಿಗಳು ಇನ್ನಿತರ ರೈಲುಗಳ ವೇಳಾಪಟ್ಟಿ ಹೊಂದಾಣಿಕೆಯಂತೆ ಮಾರ್ಪಡಿಸಲಿದ್ದಾರೆ ಎಂದರು.

ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಚಾಲನೆಯಾದ ನಂತರ ಚಾಲ್ತಿಯಲ್ಲಿರುವ ಶತಾಬ್ದಿ ಎಕ್ಸ್‌ಪ್ರೆಸ್ ರೈಲು ಗಾಡಿಯ ಸಂಚಾರ ರದ್ದಾಗಲಿದೆ ಎಂಬ ಊಹಾಪೋಹವನ್ನು ಅಲ್ಲಗಳೆದ ಅವರು, ಈ ಎರಡೂ ರೈಲುಗಳು ಸಹ ಮೈಸೂರು–ಚೆನ್ನೈ ನಡುವೆ ಬೆಂಗಳೂರು ಮಾರ್ಗ ಸಂಚರಿಸಲಿವೆ ಎಂದು ಸ್ಪಷ್ಟಪಡಿಸಿದರು. ಶತಾಬ್ದಿ ಎಕ್ಸ್‌ಪ್ರೆಸ್ ಜೊತೆಗೆ ವಂದೇ ಭಾರತ್ ರೈಲು ಸೇವೆಯು ಪ್ರಯಾಣಿಕರಿಗೆ

▶ 6ನೇ ಪುಟಕ್ಕೆ


ಮೊದಲ ದಿನವೇ 4.34 ಲಕ್ಷ ಕೋಟಿ ಬಂಡವಾಳ ಖಾತರಿ

ವಿವಿಧ ಕ್ಷೇತ್ರದಲ್ಲಿ ಹಣ ತೊಡಗಿಸಲು ದೈತ್ಯ ಸಂಸ್ಥೆಗಳ ಉತ್ಸುಕತೆ

ಬೆಂಗಳೂರು, ನ. 2 (ಕೆಎಂಶಿ) – ನಿರೀಕ್ಷೆಯಂತೆ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಮೊದಲ ದಿನವೇ ರಾಜ್ಯಕ್ಕೆ ನಿರೀಕ್ಷೆಗೂ ಮೀರಿದ ಬಂಡವಾಳ ಹೂಡಿಕೆ ಒಪ್ಪಂದವೇರ್ಪಟ್ಟಿದ್ದು, ಸುಮಾರು 4.34 ಲಕ್ಷ ಕೋಟಿ ಬಂಡವಾಳ ಹೂಡಿಕೆಗೆ ರಾಜ್ಯ ಸರ್ಕಾರ ಒಪ್ಪಂದ ಮಾಡಿಕೊಂಡಿದೆ. ವಿಶ್ವದ ಮುಂಚೂಣಿಯಲ್ಲಿರುವ ಅದಾನಿ ಗ್ರೂಪ್, ಕಿರ್ಲೋಸ್ಕರ್, ಜೆಎಸ್‌ಡಬ್ಲ್ಯೂ, ಭಾರ್ತಿ ಏರ್‌ಟೇಲ್ ಸೇರಿದಂತೆ ಜಾಗತಿಕ ಕಂಪನಿಗಳು ಮೊದಲ ದಿನವೇ ಉತ್ಪಾದನೆ, ರಕ್ಷಣೆ, ಬಂದರು, ವಿದ್ಯುತ್, ವೈಮಾನಿಕ ಸೇರಿದಂತೆ ವಿವಿಧ ವಲಯಗಳಲ್ಲಿ 4.34 ಲಕ್ಷ ಕೋಟಿ ಬಂಡವಾಳವನ್ನು ಹೂಡಿಕೆ ಮಾಡಿವೆ. ಬೆಂಗಳೂರು ಅರಮನೆಯಲ್ಲಿ ನಡೆದ ಮೂರು ದಿನಗಳ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ರಾಜು ಚಂದ್ರಶೇಖರ್, ಪ್ರಹ್ಲಾದ್ ಜೋಷಿ, ರಾಜ್ಯ ಸಚಿವರಾದ ಅಶ್ವಥ್ ನಾರಾಯಣ, ಎಂ.ಟಿ.ಬಿ.ನಾಗರಾಜ್, ಮುರುಗೇಶ್ ನಿರಾಣಿ ಸೇರಿದಂತೆ ಮತ್ತಿತರ ಸಮ್ಮುಖದಲ್ಲಿ ಹೂಡಿಕೆಯ ಪ್ರಸ್ತಾವನೆಗೆ ಸಹಿ

▶ 9ನೇ ಪುಟಕ್ಕೆ

ನಿಮ್ಮ ವಾಹನ ಕಳೆದು ಹೋಗಿದೆಯೇ?: ಚಿಂತೆ ಬೇಡ, ಆನ್‌ಲೈನ್‌ನಲ್ಲಿ ದೂರು ಸಲ್ಲಿಸಿ



ಬೆಂಗಳೂರು, ನ.2– ರಾಜ್ಯದ ಯಾವುದೇ ಭಾಗದಲ್ಲಿ ನಿಮ್ಮ ವಾಹನ ಕಳೆದುಹೋಗಿದೆ ಎಂದರೆ ಇನ್ನು ಮುಂದೆ ದೂರು ದಾಖಲಿಸಲು ಪೊಲೀಸ್ ಠಾಣೆಗಳಿಗೆ ಅಲೆಯಬೇಕಿಲ್ಲ. ಕರ್ನಾಟಕ ಪೊಲೀಸ್ ವೆಬ್‌ಸೈಟ್ www.ksp.karnataka.gov.inಗೆ ಲಾಗ್ ಇನ್ ಆಗಿ ಆನ್‌ಲೈನ್‌ನಲ್ಲಿ ದೂರು ಸಲ್ಲಿಸಿ, ಎಫ್‌ಐಆರ್ ಪಡೆಯಬಹುದು.

ತಮ್ಮ ವಾಹನಗಳನ್ನು ಕಳೆದುಕೊಂಡಾಗ ಎಫ್‌ಐಆರ್‌ಗಳ ನೋಂದಣಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಬರುತ್ತಿದ್ದವು. ಸರಿಯಾಗಿ ದೂರು ಸಲ್ಲಿಸಲು ಆಗುತ್ತಿಲ್ಲ ಎನ್ನುತ್ತಿದ್ದರು. ಯಾವ ಠಾಣೆ ವ್ಯಾಪ್ತಿಗೆ ಒಳಪಡುತ್ತದೆ, ಎಲ್ಲಿ ದೂರು ದಾಖಲಿಸಬೇಕು ಎಂಬುದು ಬಹಳ ದೊಡ್ಡ ಸಮಸ್ಯೆಯಾಗಿತ್ತು. ಮಾತ್ರವಲ್ಲ, ಎಫ್‌ಐಆರ್ ದಾಖಲಿಸಲು ಸಾಕಷ್ಟು ಸಮಯ ಹಿಡಿಯುತ್ತಿತ್ತು. ವಾಹನ ಕಳೆದುಕೊಂಡವರು ಒಂದು

▶ 9ನೇ ಪುಟಕ್ಕೆ

ಒಳಪುಟಗಳಲ್ಲಿ



ಮೈಸೂರು ರಮಾವಿಲಾಸ್ ರಸ್ತೆಯಲ್ಲಿರುವ ಉದ್ಯಮಿ ಎ.ಪಿ.ನಾಗೇಶ್ ಅವರ ಎಪಿಎನ್ ಪ್ರಾಪರ್ಟೀಸ್ ಕಚೇರಿಗೆ ಸಂಸದ ಪ್ರತಾಪಸಿಂಹ ಭೇಟಿ ನೀಡಿ, ಶುಭ ಕೋರಿದರು. ಈ ವೇಳೆ ಸಂಸ್ಥೆಯ ಎ.ಪಿ.ನಾಗೇಶ್, ಸ್ವೀಟ್ ಮಹೇಶ್, ಪುಟ್ಟರಾಜಪ್ಪ, ವಸಂತಕುಮಾರ್, ಮೂಗೂರು ನಂಜುಂಡಸ್ವಾಮಿ, ಸತೀಶ್, ಹೇಮಂತ್‌ಗೌಡ, ಅವಿನಾಶ್, ಸಚಿನ್, ನಿತಿನ್, ಮಂಡಕಳ್ಳಿ ಕುಮಾರ್, ಹರೀಶ್, ಮಂಜುನಾಥ್ ಸಿದ್ದರಾಮನಹುಂಡಿ ಹಾಗೂ ಇತರರು ಉಪಸ್ಥಿತರಿದ್ದರು.



ರಂಗಭೂಮಿ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಹುಯಿಲಾಳು ರಾಮಸ್ವಾಮಿ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ, ಗೌರವಿಸಿದರು. ಈ ಸಂದರ್ಭದಲ್ಲಿ ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ತನ್ವೀರ್ ಸೇಠ್, ಮುಖಂಡರಾದ ಮೂಗೂರು ನಂಜುಂಡಸ್ವಾಮಿ, ಸಾಹುಕಾರ್‌ಹುಂಡಿ ಗೋಪಾಲ್‌ಗೌಡ, ಎಳನೀರು ಜಯರಾಮು, ಮಂಜುನಾಥ್, ಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.



ಬಡವರ ಬಂಧು ಕನ್ನಡ ಯುವಕರ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಸರಸ್ವತಿಪುರಂ ಇನ್‌ಸ್ಪೆಕ್ಟರ್ ರವೀಂದ್ರ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಪಡುವಾರಹಳ್ಳಿ ಪಾಪಣ್ಣ, ರಮೇಶ್, ಭರತ್, ಶಿವು, ಧನಂಜಯ, ಅಚ್ಚುತ್, ಭಾರಧ್ವಾಜ್, ಮೋಹನ್‌ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.



ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಟೀರಿಂಗ್ ಕಮಿಟಿ ಸದಸ್ಯರಾಗಿ ನೇಮಕಗೊಂಡ ಮಾಜಿ ಕೇಂದ್ರ ಸಚಿವ ಕೆ.ಹೆಚ್.ಮುನಿಯಪ್ಪ ಅವರನ್ನು ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ನೇತೃತ್ವದಲ್ಲಿ ಆದಿಜಾಂಬವ ಸಮಾಜದ ಮುಖಂಡರು ಅಭಿನಂದಿಸಿದರು. ರಾಜ್ಯ ಆದಿ ಜಾಂಬವ ಸಂಘದ ವಿಭಾಗೀಯ ಅಧ್ಯಕ್ಷ ಹಾಗೂ ಡಿಸಿಸಿ ಮಾಧ್ಯಮ ವಕ್ತಾರ ಎಡತೊರೆ ನಿಂಗರಾಜ್, ಕಾರ್ಯದರ್ಶಿ ಹುಣಸೂರು ಬಸವಣ್ಣ, ಜಿಲ್ಲಾ ಕಾಂಗ್ರೆಸ್ ಮುಖಂಡರಾದ ಡಿ.ಕುಮಾರ್, ನಂಜನಗೂಡು ಮಾಜಿ ಕೌನ್ಸಿಲರ್ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ತಾಲೂಕಿನ ಇಲವಾಲ ಹೋಬಳಿಯ ಈರಪ್ಪನಕೊಪ್ಪಲು ಗ್ರಾಮದಲ್ಲಿ ನೂತನ ಹಾಲಿನ BMC ಘಟಕವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು. ಈ ವೇಳೆ ಒಕ್ಕೂಟದ ನಿರ್ದೇಶಕರಾದ ಕೆ.ಉಮಾಶಂಕರ್, ಎಸ್.ಸಿ.ಅಶೋಕ್, ಲೀಲಾ ನಾಗರಾಜ್, ಮುಖಂಡ ಬೆಳವಾಡಿ ಶಿವಮೂರ್ತಿ, ವ್ಯವಸ್ಥಾಪಕ ನಿರ್ದೇಶಕ ವಿಜಯ್‌ಕುಮಾರ್, ಸಣ್ಣತಮ್ಮೇಗೌಡ, ದಿವಾಕರ್ ಇನ್ನಿತರರು ಉಪಸ್ಥಿತರಿದ್ದರು.

ನ.4, 5ರಂದು ಬಿಲ್ಡ್‌ಟೆಕ್ ರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು,ನ.2(ಎಂಟಿವೈ)– ಮೈಸೂರಿನ ವಿಶ್ವೇಶ್ವರನಗರದ ಎಂಬಿಸಿಟಿ ಸಭಾಂಗಣದಲ್ಲಿ ನ.4 ಮತ್ತು 5ರಂದು ಕಟ್ಟಡ ನಿರ್ಮಾಣ ಉದ್ಯಮಕ್ಕೆ ಸಂಬಂಧಿಸಿದಂತೆ 'ಬಿಲ್ಡ್‌ಟೆಕ್' ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕದ ಅಧ್ಯಕ್ಷ ವಿ.ಗುರುದತ್ತ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕ ಹಾಗೂ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ. ನಿರ್ಮಾಣ ಉದ್ಯಮಕ್ಕೆ ಸಂಬಂಧಿಸಿದಂತೆ ಕಟ್ಟಡದಲ್ಲಿನ ಇತ್ತೀಚಿನ ತಂತ್ರಜ್ಞಾನ, ಸಮಯದ ಅವಶ್ಯಕತೆ ಎಂಬುದು ವಿಚಾರ ಸಂಕಿರಣದ ವಿಷಯವಾಗಿದೆ. ನಿರ್ಮಾಣ ಉದ್ಯಮದಲ್ಲಿ ಯಾಂತ್ರೀಕರಣ ಮತ್ತು ವಿಶ್ಲೇಷಣೆ, ಕಟ್ಟಡ ನಿರ್ಮಾಣ ವಸ್ತುವಾಗಿ ಬಿದಿರಿನ ಸಂಭಾವ್ಯತೆ ಇನ್ನಿತರ ವಿಷಯಗಳ ಬಗ್ಗೆ ತಜ್ಞರು ಮಾಹಿತಿ ನೀಡಲಿದ್ದಾರೆ ಎಂದರು.

ನ.4ರಂದು ಬೆಳಗ್ಗೆ 10ಕ್ಕೆ ವಿಚಾರ ಸಂಕಿರಣವನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸದಸ್ಯ ಆರ್.ಕೆ.ಪಾಂಡೆ ಉದ್ಘಾಟಿಸಲಿದ್ದು, ಬಿಲ್ಡರ್ಸ್ ಅಸೋಸಿಯೇಷನ್ ಇಂಡಿಯಾ ಸಂಸ್ಥೆಯ ಅಧ್ಯಕ್ಷ ಆರ್.ಬಿ.ದಯಾನಂದ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. 300ಕ್ಕೂ ಹೆಚ್ಚು ಮಂದಿ ಬಿಲ್ಡರ್ಸ್, ಡೆವಲಪರ್ಸ್, ವಾಸ್ತುಶಿಲ್ಪಿಗಳು, ಸಲಹೆಗಾರರು, ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸೇರಿದಂತೆ ನಿರ್ಮಾಣ ಉದ್ಯಮದಲ್ಲಿ ತೊಡಗಿಸಿಕೊಂಡಿರುವವರು ಪಾಲ್ಗೊಳ್ಳಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಬಿಲ್ಡರ್ಸ್ ಅಸೋಸಿಯೇಷನ್ ಪದಾಧಿಕಾರಿಗಳಾದ ಚಂದ್ರಶೇಖರ ಭಾರದ್ವಾಜ್, ಆರ್.ರಘುನಾಥ್, ವಿ.ಶ್ರೀನಾಥ್ ಇದ್ದರು.

ನಿಧನ

ಕೈಗಾರಿಕೋದ್ಯಮಿ ಸಿ.ಎನ್. ರೆಡ್ಡಿ



ಮೈಸೂರು,ನ.2–ಕೈಗಾರಿಕೋದ್ಯಮಿಗಳು, ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಶ್ರೀ ಕರ್ನಾಟಕ ವಿನೀರಿಂಗ್ ಇಂಡಸ್ಟ್ರೀಸ್‌ನ ಪಾಲುದಾರರು ಹಾಗೂ ಜಯಲಕ್ಷ್ಮೀಪುರಂ ನಿವಾಸಿಗಳಾದ ಸಿ.ಎನ್.ರೆಡ್ಡಿ ಅವರು ಮಂಗಳವಾರ ನಿಧನರಾದರು.

ರೆಡ್ಡಿ ಅವರು ರೋಟರಿ ವೆಸ್ಟ್ ಮೈಸೂರು ಅಧ್ಯಕ್ಷರಾಗಿ, ಸೌತ್ ಇಂಡಿಯನ್ ಪ್ಲೈವುಡ್ ಮ್ಯಾನ್ಯುಫ್ಯಾಕ್ಚರರ್ಸ್ ಅಸೋಸಿಯೇಷನ್ ಅಧ್ಯಕ್ಷರಾಗಿ, ತೆಲುಗು ಸಾಂಸ್ಕೃತಿಕ ಸಮಿತಿ ಅಧ್ಯಕ್ಷರಾಗಿ, ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ ಮತ್ತು ಮೈಸೂರು ಇಂಡಸ್ಟ್ರೀಸ್ ಅಸೋಸಿಯೇಷನ್ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಹಲವಾರು ಸಾಂಸ್ಕೃತಿಕ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಮೃತರು ಪತ್ನಿ ರೇವತಿ ರೆಡ್ಡಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನಾಳೆ (ನ.3) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಿ.6ಕ್ಕೆ, ಬೆಂಗಳೂರಲ್ಲಿ ದಲಿತ ಸಂಘಟನೆಗಳ ಐಕ್ಯತಾ ಸಮಾವೇಶ

● ಸಂವಿಧಾನ, ಪ್ರಜಾಪ್ರಭುತ್ವ ರಕ್ಷಣೆ ಧ್ಯೇಯ ● ಜಾತ್ಯಾತೀತ ರಾಜಕಾರಣ ಮಾಡುವವರ ಬೆಂಬಲಿಸುವ ನಿಟ್ಟಿನಲ್ಲಿ ಐಕ್ಯತಾ ನಿಲುವು

ಮೈಸೂರು, ನ.2 (ಎಂಟಿವೈ)– ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿ ಬೆಂಗಳೂರಲ್ಲಿ ಡಿಸೆಂಬರ್ 6ರಂದು ದಲಿತರ ಸಾಂಸ್ಕೃತಿಕ ಪ್ರತಿರೋಧ ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶ ಆಯೋಜಿಸಲಾಗಿದೆ ಎಂದು ದಸಂಸ ಮುಖಂಡ ಇಂಧೂದರ ಹೊನ್ನಾಪುರ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರ 66ನೇ ಪರಿನಿಬ್ಬಾಣ ದಿನದ ಅಂಗವಾಗಿ ಈ ಸಮಾವೇಶ ಆಯೋಜಿಸಲಾಗಿದೆ. ಸಾಂಸ್ಕೃತಿಕ ಪ್ರತಿರೋಧವಾಗಿ ಸಮಾವೇಶ ನಡೆಯಲಿದೆ. ಜಾತ್ಯಾತೀತ ರಾಜಕಾರಣ ಮಾಡುವವರಿಗೆ ನಮ್ಮ ಬೆಂಬಲ ಘೋಷಿಸುವ ನಿಟ್ಟಿನಲ್ಲಿ ಈ ಸಮಾವೇಶದಲ್ಲಿ ಚರ್ಚಿಸಲಾಗುತ್ತದೆ. ಅಲ್ಲದೇ, 1970ರ ನಂತರ ವಿವಿಧ ಬಣಗಳಾಗಿರುವ ದಸಂಸ ಒಂದೇ ಉದ್ದೇಶದೊಂದಿಗೆ ಹೋರಾಟ ನಡೆಸುತ್ತ ಬಂದಿದೆ. ಈಗ ಅನಿವಾರ್ಯವಾಗಿ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಹತ್ತು ಬಣಗಳು ಒಂದಾಗಿದ್ದು, ಮುಂದಿನ ದಿನಗಳಲ್ಲಿ ಉಳಿದ ಬಣಗಳನ್ನು ಒಗ್ಗೂಡಿಸಿಕೊಂಡು ಹೋರಾಟ ನಡೆಸುವ ಉದ್ದೇಶವಿದೆ ಎಂದು ಹೇಳಿದರು.



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಮಾವೇಶದ ಕರಪತ್ರ ಅನಾವರಣ ಮಾಡಲಾಯಿತು.

ಸಾವಿರಾರು ವರ್ಷಗಳಿಂದ ಭಾರತೀಯ ಸಮಾಜವನ್ನು ತುಳಿದು ಆಳಿದ ಬ್ರಾಹ್ಮಣ್ಯ ಮತ್ತೆ ತನ್ನ ಕರಾಳ ಹಿಡಿತ ಸಾಧಿಸುತ್ತಿದೆ. ಜನರನ್ನು ಜಾಗೃತಗೊಳಿಸಿ ಜಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಅನಿವಾರ್ಯತೆ ಇದೆ. ಜನಪರ ಚಳವಳಿಗಳು ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ದುರ್ಬಲಗೊಂಡಂತೆ ಕಾಣಿಸುತ್ತಿದೆ ಎಂದು ತಿಳಿಸಿದರು.

ಮುಖಂಡ ಡಾ.ಡಿ.ಜಿ.ಸಾಗರ್ ಮಾತನಾಡಿ, ಬೆಂಗಳೂರಿನ ಸಮಾವೇಶದಲ್ಲಿ ಲಕ್ಷಾಂತರ ಮಂದಿ ಪಾಲ್ಗೊಳ್ಳುತ್ತಿದ್ದು, ಪ್ರತಿಯೊಬ್ಬ ದಲಿತರು ಇದರಲ್ಲಿ ಪಾಲ್ಗೊಳ್ಳಬೇಕು. ಭಾರತ ಹಸಿವಿನ ಸೂಚ್ಯಂಕದಲ್ಲಿ ಕೊನೆಯಲ್ಲಿದೆ. ಇದುವರೆಗೂ ಉದ್ಯೋಗ ಸೃಷ್ಟಿಗೆ ಅವಕಾಶ ನೀಡದೆ ಕಾರ್ಪೊರೇಟ್ ಕಂಪನಿಗಳ ಪರವಾದ ನಿಲುವು ತಳೆದ ಸರ್ಕಾರ, ಈಗ ಏನು ಮಾಡುತ್ತಿದೆ ಎಂದು ಕಿಡಿಕಾರಿದರು.

ದಸಂಸ ಮುಖಂಡ ಗುರುಪ್ರಸಾದ್ ಕೆರಗೋಡು ಮಾತನಾಡಿ, ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲಕ ಶೈಕ್ಷಣಿಕ ಹಕ್ಕನ್ನು ಕಸಿಯಲಾಗುತ್ತಿದೆ. ಎಸ್‌ಸಿಪಿ, ಟಿಎಸ್‌ಪಿ ಹಣ ಕಡಿತ ಮಾಡಲಾಗಿದೆ. ಇಡೀ ದೇಶವೇ ಮತಿಭ್ರಮಣೆಗೆ ಒಳಗಾದಂತೆ ವರ್ತಿಸುತ್ತಿದೆ. ರೈತರು, ಶೂದ್ರ ಸಮುದಾಯವನ್ನು ಒಳಗೊಂಡು ಐಕ್ಯತಾ ಸಮಾವೇಶ ಮಾಡಲಾಗುತ್ತಿದೆ ಎಂದು ತಿಳಿಸಿದರು.

ದಸಂಸ ಮುಖಂಡ ಎನ್.ವೆಂಕಟೇಶ್ ಮಾತನಾಡಿ, ಬಿಜೆಪಿ ಮತ್ತು ಸಂಘ ಪರಿವಾರ ನ್ಯಾಯಾಂಗ ಮತ್ತು ಸಂವಿಧಾನಾತ್ಮಕ ಸಂಸ್ಥೆಗಳನ್ನು ದುರ್ಬಲಗೊಳಿಸಿವೆ. ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳು ಚಳವಳಿಗಾರರು, ಸಮಾನತೆ, ಸಂವಿಧಾನದ ಪರವಾಗಿ ಹೋರಾಟಗಾರರ ವಿರುದ್ಧ ದಮನಕಾರಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿದರು.

ಮುಖಂಡ ಮಾವಳ್ಳಿ ಶಂಕರ್ ಮಾತನಾಡಿ, ದೇಶದಲ್ಲಿ ಪಂಚಾಂಗವಲ್ಲ ರಾಜ್ಯಾಂಗ ಉಳಿಯಬೇಕು. ಅದಕ್ಕಾಗಿ ಬಣಗಳು ಒಂದಾಗಿ ಹೋರಾಟ ರೂಪಿಸಲಿದ್ದೇವೆ. ಅಭಿವೃದ್ಧಿ ಭ್ರಮೆಯನ್ನು ಸೃಷ್ಟಿಸಲಾಗಿದೆ. ಧರ್ಮದ ಹೆಸರಲ್ಲಿ ಜನರ ವಿಭಜನೆ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಅಲೆಮಾರಿ ಜನರು ಪ್ರತಿಭಟನೆ ನಡೆಸುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲ ಎಂದಿರುವ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಗುರವಾಗಿ ಮಾತನಾಡಬಾರದು. ಪ್ರತಿಭಟನೆ ನಡೆಯುತ್ತಿರುವ ವಿಚಾರವೇ ತಿಳಿದಿಲ್ಲ ಎಂದ ಸಚಿವರು ರಾಜೀನಾಮೆ ಕೊಡಬೇಕು. ಅಲೆಮಾರಿ ಜನರ ಹೋರಾಟಕ್ಕೆ ದಸಂಸ ಬೆಂಬಲ ಮುಂದುವರೆಸುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ದಸಂಸ ವಿವಿಧ ಬಣಗಳ ಮುಖಂಡರಾದ ಅಣ್ಣಯ್ಯ, ಎನ್.ವೆಂಕಟೇಶ್, ವಿ.ನಾಗರಾಜ್, ಎನ್.ಮುನಿಸ್ವಾಮಿ, ಬೆಟ್ಟಯ್ಯಕೋಟೆ, ಆಲಗೂಡು ಶಿವಕುಮಾರ್ ಪಾಲ್ಗೊಂಡಿದ್ದರು.

ಪೂರ್ವಭಾವಿ ಸಭೆ: ಬೆಂಗಳೂರಲ್ಲಿ ನಡೆಯಲಿರುವ ಸಮಾವೇಶದ ಪೂರ್ವಭಾವಿಯಾಗಿ ದಸಂಸ ವಿವಿಧ ಬಣಗಳ ನಾಯಕರು ಮೈಸೂರಿನಲ್ಲಿ ಒಗ್ಗಟ್ಟು ಪ್ರದರ್ಶಿಸಿದರು. ಸಮಾವೇಶದ ಕರಪತ್ರ ಅನಾವರಣ ಮಾಡಿದರು.

ವಿಭಾಗೀಯ ಮಟ್ಟದ ಸಮಾವೇಶ ನಡೆಸಿ ಸಮಾವೇಶದ ಯಶಸ್ಸಿಗೆ ಕೋರಿದರು. ಅಲ್ಲದೇ ಎಲ್ಲಾ ಬಣಗಳ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಸಮಾವೇಶದಲ್ಲಿ ಪಾಲ್ಗೊಂಡು ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಸಮಾಲೋಚಿಸಿದರು.

ಜಾಗತಿಕ ಹೂಡಿಕೆದಾರರ ಸಮಾವೇಶ ವಿರೋಧಿಸಿ ಪ್ರತಿಭಟನೆ



ಮೈಸೂರು,ನ.2(ಪಿಎಂ)–ರಾಜ್ಯ ಸರ್ಕಾರ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಮೂಲಕ ರೈತರ ಭೂಮಿಯನ್ನು ಕಬಳಿಸಲು ಹೊರಟಿದೆ ಎಂದು ಆರೋಪಿಸಿ, ಸದರಿ ಸಮಾವೇಶ ರದ್ದುಪಡಿಸಲು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಡಿಸಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ರೈತರ ಭೂಮಿ ಸೇರಿದಂತೆ ವಿದ್ಯುತ್, ನೀರು ಮೊದಲಾದ ಸಂಪನ್ಮೂಲಗಳನ್ನು ಕಾರ್ಪೊರೇಟ್ ಕಂಪನಿಗಳಿಗೆ ಧಾರೆ ಎರೆಯಲು ರಾಜ್ಯ ಸರ್ಕಾರ, ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸುತ್ತಿದೆ. ಇದೊಂದು ರೈತ ಹಾಗೂ ಜನ ವಿರೋಧಿ ಸಮಾವೇಶ ಎಂದು ಆರೋಪಿಸಿದರು.

ರೈತ ಸಮುದಾಯ ಹಾಗೂ ಗ್ರಾಮೀಣ ಜನತೆ ಮೇಲೆ ಈ ಸಮಾವೇಶ ಅಗಾಧವಾದ ದುಷ್ಪರಿಣಾಮ ಉಂಟು ಮಾಡಲಿದೆ. ಈ ರೈತ ವಿರೋಧಿ ಸಮಾವೇಶ ರದ್ದುಪಡಿಸಬೇಕು. ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಸಂಸತ್ತಿನಲ್ಲಿ ಹಿಂಪಡೆಯಲು ರಾಜ್ಯ ಸರ್ಕಾರ ಆಗ್ರಹಿಸಬೇಕು. ಅತಿವೃಷ್ಟಿಯಿಂದ ಮನೆ–ಬೆಳೆ ಕಳೆದುಕೊಂಡ ರೈತ–ಕೂಲಿಕಾರರಿಗೆ ಸೂಕ್ತ ಪರಿಹಾರ ನೀಡಬೇಕು. ಗ್ರಾಮೀಣ ಬಡ ಜನತೆ ಎಲ್ಲಾ ರೀತಿಯ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. ಬಗರ್‌ಹುಕುಂ, ಅರಣ್ಯ ಭೂಮಿ ಸಾಗುವಳಿಯನ್ನು ಸಕ್ರಮಗೊಳಿಸಬೇಕು. ರೈತರ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ ನೀಡಬೇಕು ಎಂದು ಒತ್ತಾಯಿಸಿದರು. ಸಂಘದ ಜಿಲ್ಲಾಧ್ಯಕ್ಷ ಚಿಕ್ಕಣ್ಣೇಗೌಡ, ಪ್ರಧಾನ ಕಾರ್ಯದರ್ಶಿ ಜಗದೀಶ್ ಸೂರ್ಯ, ಉಪಾಧ್ಯಕ್ಷ ಕೆ.ಬಸವರಾಜ್, ಮುಖಂಡರಾದ ಚಂದ್ರಶೇಖರ್, ಸಿದ್ದಯ್ಯ, ಕನಕನಾಯಕ, ಮೂರ್ತಿ, ಮಹದೇವಸ್ವಾಮಿ, ಮಹೇಶ್, ಬಾಲರಾಜ್, ಚಾಮುಂಡಮ್ಮ, ಸೋಮಶೇಖರ್ ಗುಂಚಳ್ಳಿ, ಕೆಂಪಮ್ಮ, ಅಭಿಮಾನ್, ಜವರೇಗೌಡ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರು ವಿಜಯನಗರದ ಹೆಬ್ಬಾಳು ಬಡಾವಣೆಯ ಭೈರವಿ ಗೌಡ್ತಿಯರ ಬಳಗವನ್ನು ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಆದಿಚುಂಚನಗಿರಿಯ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಶ್ರೀ ಸೋಮನಾಥ ಸ್ವಾಮೀಜಿ ಜ್ಯೋತಿ ಬೆಳಗುವುದರ ಮೂಲಕ ಉದ್ಘಾಟಿಸಿದರು. ಚಿತ್ರದಲ್ಲಿ ಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ, ಕವಯತ್ರಿ ಲತಾ ರಾಜಶೇಖರ್, ಹೇಮಾ ನಂದೀಶ್, ರೇಣುಕಾ, ಕೋಮಲಾ ವೆಂಕಟೇಶ್, ಸುಶೀಲಾ ಬಸವರಾಜು, ರಾಧಾ ಜಯರಾಮ್ ಸೇರಿದಂತೆ ಇತರರಿದ್ದಾರೆ.

ಕಬ್ಬು ಬೆಳೆಗಾರರ ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನೆ; ಮೂರನೇ ದಿನವೂ ಮುಂದುವರಿಕೆ

ಮೈಸೂರು, ನ.2 (ಪಿಎಂ)–ಕಬ್ಬಿಗೆ ಎಫ್‌ಆರ್‌ಪಿ ದರ ಹೆಚ್ಚಿಸಬೇಕು ಎಂಬುದೂ ಸೇರಿ ದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನಾ ಧರಣಿ ಮೂರನೇ ದಿನವಾದ ಬುಧವಾರವೂ ಮುಂದುವರೆಯಿತು.



ನಿನ್ನೆ ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸುತ್ತಲು ಅರೆಬೆತ್ತಲೆ ಪ್ರತಿಭಟನಾ ಮೆರವಣಿಗೆ ನಡೆಸಿದ್ದ ಕಬ್ಬು ಬೆಳೆಗಾರರು, ಇಂದು ಪೊರಕೆ ಚಳವಳಿ ನಡೆಸಿ, ಜಿಲ್ಲಾಡಳಿತ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವರು ಮೈಸೂರಿಗೆ ಭೇಟಿ ನೀಡಿಯೂ ರೈತರ ಸಮಸ್ಯೆ ಆಲಿಸುವ ಸೌಜನ್ಯವನ್ನೂ ತೋರದೇ ನಿರ್ಲಕ್ಷ್ಯದಿಂದ ವರ್ತಿಸಿದ್ದಾರೆ. ನಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೂ ಯಾವುದೇ ಕಾರಣಕ್ಕೂ ಹೋರಾಟ ಕೈಬಿಡುವುದಿಲ್ಲ ಎಂದು ಎಚ್ಚರಿಸಿದರು. ಪ್ರತಿಭಟನೆ ಮುಂದುವರೆದಿದ್ದು, ಸಂಘದ ಜಿಲ್ಲಾಧ್ಯಕ್ಷ ಪಿ.ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಮುಖಂಡರಾದ ಚುಂಚರಾಯನಹುಂಡಿ ಮಂಜು, ಬಸವರಾಜು, ಮೂಕಳ್ಳಿ ಮಹದೇವಸ್ವಾಮಿ, ಪಟೇಲ್ ಶಿವಮೂರ್ತಿ, ನಾಗರಾಜ್, ಹಾಡ್ಯ ರವಿ, ಕೆರೆಹುಂಡಿ ರಾಜಣ್ಣ, ಕುರುಬೂರು ಸಿದ್ದೇಶ್, ನಂಜುಂಡಸ್ವಾಮಿ, ಪ್ರದೀಪ್ ಕುರುಬೂರು, ಅಂಬಳೆ ಮಹದೇವಸ್ವಾಮಿ, ಮಂಜುನಾಥ್, ದೇವನೂರು ವಿಜಯೇಂದ್ರ, ಮಲಿಯೂರು ಪ್ರವೀಣ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಿವೇಶನ ಕೊಡುವುದಾಗಿ 4.50 ಲಕ್ಷ ರೂ. ಪಡೆದು ವಂಚನೆ: ಅಮರಾವತಿ ನಾಗರಾಜ್ ವಿರುದ್ಧ ಕೇಸ್

ಮೈಸೂರು,ನ.2–ನಿವೇಶನ ನೀಡುವುದಾಗಿ 4.50 ಲಕ್ಷ ರೂ. ಪಡೆದು ವಂಚಿಸಿರುವುದಾಗಿ ಮಂಡ್ಯದ ಅಮರಾವತಿ ಹೋಟೆಲ್ ಮಾಲೀಕ ಸಿ. ನಾಗರಾಜು ಅಲಿಯಾಸ್ ಅಮರಾವತಿ ನಾಗರಾಜ್ ವಿರುದ್ಧ ಮೈಸೂರಿನ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ವಾಸವಿರುವ ನಿವೃತ್ತ ಸೈನಿಕ ಎ.ಜಿ.ಅನಿಲ್‌ಕುಮಾರ್(41) ಅವರು ನಿವೇಶನ ಖರೀದಿ ಮಾಡಲು ದೇವರಾಜ ಅರಸು ರಸ್ತೆಯಲ್ಲಿರುವ ಸ್ಟೈಕರ್ ಬಟ್ಟೆ ಅಂಗಡಿ ಮಾಲೀಕರು ಹಾಗೂ ಜೈ ಕರ್ನಾಟಕ ಸಂಘಟನೆಯ ಜಿಲ್ಲಾಧ್ಯಕ್ಷರೂ ಆದ ಹೆಚ್.ಎನ್.ಸತೀಶ ಅಲಿಯಾಸ್ ಸತೀಶ್ ಗೌಡ್ರು ಮೂಲಕ ಅಮರಾವತಿ ನಾಗರಾಜ್ ಅವರನ್ನು ಸಂಪರ್ಕಿಸಿ ನಿವೇಶನ ಖರೀದಿಸುವ ಬಗ್ಗೆ ಮಾತುಕತೆ ನಡೆಸಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ.

ಮೈಸೂರು ತಾಲೂಕು ಮಲ್ಲಹಳ್ಳಿ ಬೀರಿಹುಂಡಿ ಗ್ರಾಮ ವ್ಯಾಪ್ತಿಯ ಸರ್ವೇ ನಂ.114/1 ಹಾಗೂ 114/2ರಲ್ಲಿ ನೂತನವಾಗಿ ನಿರ್ಮಿಸಿರುವ ಅಮರಾವತಿ ಎನ್‌ಕ್ಲೇವ್ ಬಡಾವಣೆಯಲ್ಲಿ 30x40 ಅಳತೆಯ ನಿವೇಶನ ಸಂಖ್ಯೆ 25 ಅನ್ನು ಅನಿಲ್‌ಕುಮಾರ್ ಅವರಿಗೆ 6.75 ಲಕ್ಷ ರೂ.ಗಳಿಗೆ ಮಾರಾಟ ಮಾಡುವುದಾಗಿ ಮಾತುಕತೆ ನಡೆದು, ಅಮರಾವತಿ ನಾಗರಾಜ್ 4.50 ಲಕ್ಷ ರೂ.ಗಳನ್ನು ಮುಂಗಡವಾಗಿ ಪಡೆದಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

2020ರ ಡಿಸೆಂಬರ್ 29ರಂದು ನಿವೇಶನವನ್ನು ನೋಂದಣಿ ಮಾಡಿಕೊಡುವುದಾಗಿ ಮೈಸೂರು ಪೂರ್ವ ಸಬ್ ರಿಜಿಸ್ಟ್ರಾರ್ ಕಚೇರಿಗೆ ಅನಿಲ್‌ಕುಮಾರ್ ಅವರನ್ನು ಅಮರಾವತಿ ನಾಗರಾಜ್ ಕರೆಸಿಕೊಂಡಿದ್ದಾರೆ. ಆದರೆ, ನಿವೇಶನ ನೋಂದಣಿ ಮಾಡದೇ ಬಡಾವಣೆ ಜಂಟಿ ಖಾತೆಯಲ್ಲಿರುವ ಕಾರಣ ತಮ್ಮ ಪತ್ನಿ ಶ್ರೀಮತಿ ರೇಖಾ ಅವರ ಸಹಿಯೂ ಬೇಕಾಗಿದೆ. ಅವರು ಕಾರಣಾಂತರಗಳಿಂದ ಇಂದು ಬರಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ನಾಳೆ (2020ರ ಡಿಸೆಂಬರ್ 30) ನಿವೇಶನ ನೋಂದಣಿ ಮಾಡಿಕೊಡುವುದಾಗಿ ಅಮರಾವತಿ ನಾಗರಾಜ್ ತಿಳಿಸಿದರಾದರೂ, ಈವರೆವಿಗೂ ನಿವೇಶನವನ್ನು ನೋಂದಣಿ ಮಾಡಿಕೊಟ್ಟಿಲ್ಲ. ಈ ಮಧ್ಯೆ, 2022ರ ಸೆಪ್ಟೆಂಬರ್ 17ರಂದು ಅನಿಲ್‌ಕುಮಾರ್ ಅವರು ಅಮರಾವತಿ ಹೋಟೆಲ್‌ಗೆ ತೆರಳಿ ನಾಗರಾಜ್ ಅವರನ್ನು ಸಂಪರ್ಕಿಸಿದಾಗ, ಅವರಿಗೆ ಕೊಲೆ ಬೆದರಿಕೆ ಹಾಕಿ ಕಳುಹಿಸಿದ್ದಾರೆ ಎಂದು ನೀಡಿದ ದೂರನ್ನು ಭಾರತೀಯ ದಂಡ ಸಂಹಿತೆ 406, 420, 506 ರಡಿ ದಾಖಲಿಸಿಕೊಂಡಿರುವ ದೇವರಾಜ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ನಕಲಿ ದಾಖಲೆ ಸಲ್ಲಿಸಿ ಬ್ಯಾಂಕ್‌ನಿಂದ 4 ಕೋಟಿ ರೂ. ಸಾಲ ಪಡೆದು ವಂಚನೆ

ಗುತ್ತಿಗೆದಾರ ದಂಪತಿ ಜಾಮೀನುದಾರನ ವಿರುದ್ಧ ಕೇಸ್ ದಾಖಲು


ಮೈಸೂರು,ನ.2–ನಕಲಿ ದಾಖಲೆಗಳನ್ನು ಸಲ್ಲಿಸಿದ ದಂಪತಿ ಕೋ–ಆಪರೇಟಿವ್ ಬ್ಯಾಂಕ್‌ನಿಂದ 4 ಕೋಟಿ ರೂ. ಸಾಲ ಪಡೆದು ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಮೈಸೂರಿನ ಜಯನಗರ ನಿವಾಸಿಗಳಾದ ಗುತ್ತಿಗೆದಾರ ಎಲ್.ಬಿ. ಹರೀಶ್ ಮತ್ತು ಅವರ ಪತ್ನಿ ಇಂಟೀರಿಯರ್ ಡಿಸೈನರ್ ಜ್ಯೋತಿ ಬ್ಯಾಂಕ್‌ಗೆ ವಂಚಿಸಿದವರಾಗಿದ್ದು, ಇವರಿಗೆ ಜಾಮೀನು ನೀಡಿದ ಚಾಮರಾಜಪುರಂನ ಎಂ.ಸಿ. ಬಾಲುಪ್ರಕಾಶ್ ಅವರು ಕೂಡ ಆರೋಪಕ್ಕೆ ಗುರಿಯಾಗಿದ್ದಾರೆ.

ವಿವರ: ಮೈಸೂರಿನ ಕೆ.ವಿ.ರಸ್ತೆಯಲ್ಲಿರುವ ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ಗೆ 2017ರ ಏ.28ರಂದು ಭೇಟಿ ನೀಡಿದ ಹರೀಶ್ ಮತ್ತು ಜ್ಯೋತಿ ದಂಪತಿ ಮಳವಳ್ಳಿ ಟೌನ್‌ನ ವಾಣಿಜ್ಯ ಕಟ್ಟಡ ಮತ್ತು ನಿವೇಶನವೊಂದರ ದಾಖಲೆ ಪತ್ರಗಳನ್ನು ಸಲ್ಲಿಸಿ, ಜಂಟಿಯಾಗಿ 4 ಕೋಟಿ ಸಾಲಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಬ್ಯಾಂಕ್‌ನ ಆಡಳಿತ ಮಂಡಳಿಯಿಂದ ಸಾಲ ಮಂಜೂರಾತಿಯಾಗಿ 2017ರ ಮೇ 16ರಂದು ಗುತ್ತಿಗೆ ಕಾಮಗಾರಿಗಳನ್ನು ಪೂರ್ಣಗೊಳಿಸುವ ಉದ್ದೇಶಕ್ಕೆಂದು 4 ಕೋಟಿ ಸಾಲ ಪಡೆದಿದ್ದಾರೆ. ನಂತರ ಈ ದಂಪತಿಯಾಗಲೀ, ಜಾಮೀನು ನೀಡಿದ ವ್ಯಕ್ತಿಯಾಗಲೀ ಸಾಲ ಮರುಪಾವತಿ ಮಾಡದೇ ಇದ್ದಾಗ ಬ್ಯಾಂಕ್ ಅಧಿಕಾರಿಗಳು ಮುಂದಿನ ಕ್ರಮಕ್ಕಾಗಿ ದಾಖಲೆಗಳನ್ನು ಪರಿಶೀಲಿಸಿದಾಗ ಅವು ನಕಲಿ ಎಂಬುದು ಗೊತ್ತಾಗಿದೆ. ಈ ಸಂಬಂಧ ಬ್ಯಾಂಕ್‌ನ ಸಿಬ್ಬಂದಿ ನಮಿತಾ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ನ.14ರಂದು ದಿಶಾ ಸಮಿತಿ ಸಭೆ

ಮೈಸೂರು,ನ.2–ಸಂಸದ ಪ್ರತಾಪಸಿಂಹ ಅಧ್ಯಕ್ಷತೆಯಲ್ಲಿ 2022–23ನೇ ಸಾಲಿನ ತ್ರೈ ಮಾಸಿಕದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ (ದಿಶಾ ಸಮಿತಿ) ಸಭೆಯನ್ನು ಜಿಪಂ ಸಭಾಂಗಣದಲ್ಲಿ ನ.14ರಂದು ಬೆಳಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ ಎಂದು ಜಿಪಂ ಯೋಜನಾ ನಿರ್ದೇಶಕರು ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.11.2022 ಗುರುವಾರ, ಮಳೆ ನಕ್ಷತ್ರ: ಸ್ವಾತಿ, 24.10.2022 ರಿಂದ 07.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ದಶಮಿ, ನಕ್ಷತ್ರ : ಶತಭಿಷ, ರಾಹುಕಾಲ: ಮಧ್ಯಾಹ್ನ 1.30 ರಿಂದ 3ರವರೆಗೆ

■ **ಸದ್ವಿದ್ಯಾ ಸಂಯುಕ್ತ ಪದವಿಪೂರ್ವ ಕಾಲೇಜು:** ಸಮರ್ಥ ಸದ್ವಿದ್ಯಾ–2022, ಅಂತರ ಕಾಲೇಜು ಸಂಗೀತ, ಸಾಹಿತ್ಯ ಸ್ಪರ್ಧೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಸದ್ವಿದ್ಯಾ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಹಿರಿಯಣ್ಣ, ಅಧ್ಯಕ್ಷತೆ: ಪ್ರೊ.ಗೋಪಾಲಚಾರ್, ಸ್ಥಳ: ವಿವೇಕಾನಂದ ಸಭಾಂಗಣ, ಬೆಳಗ್ಗೆ 8.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಗ್ರೇಟ್ ಬಾಂಬೆ ಸರ್ಕಸ್ :** ಮೂರು ಪ್ರದರ್ಶನಗಳು, ಸ್ಥಳ: ಮೈಸೂರು ಮೃಗಾಲಯ ಹಿಂಭಾಗ, ಕಾರಂಜಿ ಕೆರೆ ಹತ್ತಿರ, ಮಧ್ಯಾಹ್ನ 1, 4 ಮತ್ತು 7 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.10 ಗೀತಾರಾಧನ, 6.30 ಕವಿ ನುಡಿ ಸವಿನುಡಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ–ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಗಾಯನ – ಕೆ.ಬಿ.ಸುನೀತಾ ಆಚಾರ್ಯ, ಬಿ.ಶ್ರೀರಾಂ ಭಟ್, ವ್ಯಾಖ್ಯಾನ– ಮೊರಬದ ಮಲ್ಲಿಕಾರ್ಜುನ, 10.00 ಡಾ.ಆರ್.ಎನ್.ತ್ಯಾಗರಾಜನ್ ಮತ್ತು ಡಾ.ಆರ್.ಎನ್. ತಾರಾನಾಥನ್–ಯುಗಳ ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆಗಳು– ಮಧುರಾ ದೀಕ್ಷಿತ್, ಸಂಗೀತಾ ಕಟ್ಟಿ, 4.00 ಜನಪದ ಸಂಗೀತ–ಮೈಸೂರು ಜಿ.ಗುರುರಾಜ್ ಮತ್ತು ಸಂಗಡಿಗರು, 4.30 ಸಂಧ್ಯಾರಾಗ–ಲೇಖಕಿ, ನಿರೂಪಕಿ ಹಾಗೂ ಅಧ್ಯಾಪಕರಾಗಿ ನಿವೃತ್ತ ಜೀವನ ನಡೆಸುತ್ತಿರುವ ಗಾಯತ್ರಿ ಚಂದ್ರಶೇಖರ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ –ಹೈನುಗಾರಿಕೆಯಲ್ಲಿ ಕಂಡ ಯಶಸ್ಸು ಕುರಿತು ಎ. ಪ್ರಭಾಕರ್ ಹಾಗೂ ಮಹಾಲಕ್ಷ್ಮಿ ಅವರೊಂದಿಗೆ ಮಾತುಕತೆ, 9.00 ಯುವವಾಣಿ–ಯುವಪ್ರತಿಭೆ–ಬಹುಮುಖ ಪ್ರತಿಭೆಯ ಕಲಾವಿದೆ ಹಾಗೂ ಸಾಹಸ ಕ್ರೀಡಾಪಟು ವೃಂದಾ ಎಸ್. ಅವರೊಂದಿಗೆ ಮಾತುಕತೆ, 10.00 ನಾಟಕ, 10.30 ಸವಿನೆನಪು

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** 45ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಪೂಜಾ ಮಹೋತ್ಸವ, 24ನೇ ವರ್ಷದ ಮಹಾ ಕುಂಭಾಭಿಷೇಕ ಮತ್ತು 8ನೇ ವರ್ಷದ ಹಾಲರವಿ ಸೇವೆ, ಶ್ರೀ ಸ್ವರ್ಣಗೌರಿ ಭಜನಾ ಮಂಡಳಿ ಅವರಿಂದ ಭಜನಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ, ಸಂಜೆ 7 ಗಂಟೆಗೆ.

ಶ್ರೀ ಸುತ್ತೂರು ಕ್ಷೇತ್ರ

ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ : ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಈ ಬಾರಿಯ ಮೈಸೂರು ದಸರೆಗೆ 28.75 ಕೋಟಿ ಖರ್ಚು

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್‌ರಿಂದ ನಾಡಹಬ್ಬದ ಲೆಕ್ಕ-ಪತ್ರ ಪ್ರಕಟ



ಮೈಸೂರು, ನ.2(ಆರ್‌ಕೆ)– 2022ರ ಮೈಸೂರು ದಸರಾ ಮಹೋತ್ಸವಕ್ಕೆ 28,74,49,058 ರೂ. ಖರ್ಚಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

ಮಂಗಳವಾರ ಮೈಸೂರಿನ ಅರಮನೆ ಮಂಡಳಿ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿ ನಾಡಹಬ್ಬದ ಖರ್ಚು-ವೆಚ್ಚಗಳ ಬಾಬ್ತಿನ ಲೆಕ್ಕ ಪ್ರಕಟಿಸಿದ ಅವರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ 10 ಕೋಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 15 ಕೋಟಿ, ಪ್ರಾಯೋಜಕತ್ವದಿಂದ 32.5 ಲಕ್ಷ, ಟಿಕೆಟ್ ಮತ್ತು ಗೋಲ್ಡ್ ಕಾರ್ಡ್ ಮಾರಾಟದಿಂದ 76.39 ಲಕ್ಷ ಹಾಗೂ ಮೈಸೂರು ಅರಮನೆ ಮಂಡಳಿಯಿಂದ ಭರಿಸಲಾದ 5 ಕೋಟಿ ಸೇರಿ ದಸರಾ ಮಹೋತ್ಸವಕ್ಕೆ ಒಟ್ಟು 31,08,88,819 ಕೋಟಿ ರೂ. ಸ್ವೀಕೃತಿಯಾಗಿತ್ತು ಎಂದರು.

ಆ ಪೈಕಿ ವಿವಿಧ ದಸರಾ ಉಪ ಸಮಿತಿಗಳಿಂದ 26,54,49,058 ರೂ.ಗಳನ್ನು ಖರ್ಚು ಮಾಡಲಾಗಿದ್ದು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳಿಗೆ 2,20,00,000 ರೂ. ಅನುದಾನ ಬಿಡುಗಡೆ ಮಾಡಲಾಗಿದೆ. 2022ರ ಅದ್ಧೂರಿ ದಸರಾ ಮಹೋತ್ಸವಕ್ಕೆ ಒಟ್ಟು 28,74,49,058 ರೂ. ಖರ್ಚಾಗಿದೆ ಎಂದು ವಿವರಿಸಿದರು.

ರಾಜವಂಶಸ್ಥರಿಗೆ 47.20 ಲಕ್ಷ ರೂ. ಗೌರವ ಧನ ನೀಡಲಾಗಿದ್ದು, ಇನ್ನು 1.26 ಕೋಟಿ ರೂ. ಉಳಿದಿದೆ. ಉಳಿದಂತೆ 21 ಉಪ ಸಮಿತಿಗಳು 26,54,49,058 ರೂ. ಅನುದಾನ ಖರ್ಚು ಮಾಡಿವೆ. ಸ್ವಾಗತ, ಆಮಂತ್ರಣ ಸಮಿತಿಗೆ 78,57,630 ರೂ., ಗಣ್ಯರು, ಕಲಾವಿದರ ಸ್ಥಳಾವಕಾಶ, ಸಾರಿಗೆ ವ್ಯವಸ್ಥೆಗೆ 3,77,25,604 ರೂ., ಮೆರವಣಿಗೆ ಉಪಸಮಿತಿಗೆ 2,22,75,198 ರೂ., ಪಂಜಿನ ಕವಾಯತು ಪ್ರದರ್ಶನಕ್ಕೆ 1,17,85,588 ರೂ., ಸ್ತಬ್ಧ ಚಿತ್ರಗಳಿಗೆ 29,88,497 ರೂ., ರೈತ ದಸರಾಗೆ 51,66,015 ರೂ., ಕ್ರೀಡಾ ಕೂಟಕ್ಕೆ 22,02,975 ರೂ., ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ 1,61,51,652 ರೂ., ಲಲಿತ ಕಲೆ ಮತ್ತು ಕರಕುಶಲ ಉಪ ಸಮಿತಿಗೆ 17,90,131 ರೂ., ಕವಿಗೋಷ್ಠಿಗೆ 41,69,623 ರೂ., ಯೋಗ ದಸರಾಗೆ 18,94,460 ರೂ., ಯುವ ಸಂಭ್ರಮ, ಯುವ ದಸರಾ ಕಾರ್ಯಕ್ರಮಗಳಿಗೆ 6,36,00,000 ರೂ., ಮಹಿಳಾ ಮತ್ತು ಮಕ್ಕಳ ದಸರೆಗೆ 31,07,364 ರೂ., ಸ್ವಚ್ಛತೆಗೆ 29,08,759 ರೂ., ಚಲನಚಿತ್ರ ಉಪ ಸಮಿತಿಗೆ 25,50,000 ರೂ., ಕುಸ್ತಿಗೆ 34,47,863 ರೂ., ಪ್ರಚಾರಕ್ಕೆ 7,40,699 ರೂ., ದಸರಾ ದರ್ಶನಕ್ಕೆ 18,50,000 ರೂ., ಅರಣ್ಯ ಇಲಾಖೆಗೆ 1,46,00,000 ರೂ., ರಂಗಾಯಣಕ್ಕೆ 10 ಲಕ್ಷ ರೂ. ಅನುದಾನ ನೀಡಲಾಗಿದೆ ಎಂದರು.

ಅಲ್ಲದೆ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳಿಗಾಗಿ ಮುಡಾಗೆ 1,88,50,000 ರೂ., ಲೋಕೋಪಯೋಗಿ ಇಲಾಖೆಗೆ 1,86,87,000 ರೂ. ಹಾಗೂ ಮೈಸೂರು ಮಹಾನಗರ ಪಾಲಿಕೆಗೆ 2,01,00,000 ರೂ. ಹಣ ನೀಡಲಾಗಿದೆ ಎಂದು ಹೇಳಿದರು. ಮೇಯರ್ ಶಿವಕುಮಾರ್, ಸಂಸದ ಪ್ರತಾಪ್ ಸಿಂಹ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಕಮೀಷ್ನರ್ ಡಾ. ಚಂದ್ರಗುಪ್ತ, ಎಸ್ಪಿ ಆರ್.ಚೇತನ್, ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಅಡಿಷನಲ್ ಡಿಸಿ ಡಾ. ಬಿ.ಎಸ್.ಮಂಜುನಾಥಸ್ವಾಮಿ ಉಪವಿಭಾಗಾಧಿಕಾರಿ ಕಮಲಾಬಾಯಿ ಇನ್ನಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಆಮ್ ಆದ್ಮಿ ಪಾರ್ಟಿ ಸದಸ್ಯತ್ವ ನೋಂದಣಿ

ಮೈಸೂರು, ನ.2(ಜಿಎ)– ಆಮ್ ಆದ್ಮಿ ಪಾರ್ಟಿ ನಗರದ ನರಸಿಂಹರಾಜ ಕ್ಷೇತ್ರದಲ್ಲಿ ಮನೆ ಮನೆ ಅಭಿಯಾನದ ಜೊತೆಗೆ ಸದಸ್ಯತ್ವ ನೋಂದಣಿ ಆರಂಭಿಸಿದೆ.



ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ಸನ್ನಿಹಿತವಾಗುತ್ತಿರುವ ಹಿನ್ನೆಲೆಯಲ್ಲಿ ರಾಜಕೀಯ ಚಟುವಟಿಕೆಗಳು ಗರಿಗೆದರಿವೆ. ಅದರಂತೆ ಆಮ್ ಆದ್ಮಿ ಪಾರ್ಟಿಯೂ ಮಂಗಳವಾರ ಸಂಜೆಯಿಂದ ಪಕ್ಷ ಸಂಘಟನೆಗಾಗಿ ಅಭಿಯಾನ ಆರಂಭಿಸಿದೆ.

ಪಾರ್ಟಿಯ ಮುಖಂಡರು ಕನ್ನಡ ರಾಜ್ಯೋತ್ಸವದ ಅಂಗವಾಗಿ ನರಸಿಂಹರಾಜ ಕ್ಷೇತ್ರದ ವಾರ್ಡ್ ನಂ. 37ರ ರಾಘವೇಂದ್ರನಗರದ ಮನೆ ಮನೆಗಳಿಗೆ ಭೇಟಿ ನೀಡಿ ಪಕ್ಷದ ಕಾರ್ಯವೈಖರಿ ಬಗ್ಗೆ ಜನಸಾಮಾನ್ಯರಿಗೆ ತಿಳಿಸಿಕೊಟ್ಟರು. ಪಕ್ಷದ ಸದಸ್ಯತ್ವ ನೋಂದಣಿಗೆ ವಿಶೇಷ ಅಭಿಯಾನವನ್ನು ಹಮ್ಮಿಕೊಂಡಿದ್ದು, 50ಕ್ಕೂ ಹೆಚ್ಚು ಮನೆಗಳಿಗೆ ಭೇಟಿ ನೀಡಿ, 16ಕ್ಕೂ ಅಧಿಕ ಮಂದಿಗೆ ಆಮ್ ಆದ್ಮಿ ಪಾರ್ಟಿಯ ಸದಸ್ಯತ್ವ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಈ ಕ್ಷೇತ್ರದ ಎಲ್ಲಾ ವಾರ್ಡ್‌ಗಳಿಗೂ ಭೇಟಿ ನೀಡುವ ಗುರಿಯನ್ನು ಹೊಂದಿದ್ದಾರೆ. ಎಎಪಿ ಮುಖಂಡರಾದ ಧರ್ಮಶ್ರೀ, ಮೊಹಮ್ಮದ್ ಇಸ್ಮಾಯಿಲ್, ರಾಜಮ್ಮ, ಫೈಜಾ ರೆಹಮಾನ್, ಕೀರ್ತಿ, ಸಾದಿಕ್ ಹುಸೈನ್, ಗೌಸ್ ಪೀರ್, ಶಹಾಬ್ ರಹಮಾನ್, ರಿಜವಾನ ಖಾನ್, ಸಿ.ಆರ್.ಜುಬೇರ್ ಅಹಮ್ಮದ್, ಇರ್ಫಾನ್ ಬೇಗ್, ತನ್ವೀರ್ ಸೇರಿದಂತೆ ವಾರ್ಡ್ ಅಧ್ಯಕ್ಷ ಎನ್.ನಿರಂಜನ್ ಇದರಲ್ಲಿ ಭಾಗಿಯಾಗಿದ್ದರು.

ಏರ್‌ಏಷ್ಯಾ ಇಂಡಿಯಾ ಸಂಪೂರ್ಣವಾಗಿ ಟಾಟಾ ತೆಕ್ಕೆಗೆ

ನವದೆಹಲಿ: ಏರ್‌ಏಷ್ಯಾ ಇಂಡಿಯಾ ಕಂಪನಿಯಲ್ಲಿ ತಾನು ಹೊಂದಿರುವ ಪಾಲನ್ನು ಏರ್ ಇಂಡಿಯಾ ಕಂಪನಿಗೆ ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿರುವುದಾಗಿ ಮಲೇಷ್ಯಾದ ಏರ್‌ಏಷ್ಯಾ ಬುಧವಾರ ತಿಳಿಸಿದೆ.

ಟಾಟಾ ಸಮೂಹ ಮತ್ತು ಏರ್‌ಏಷ್ಯಾ ಮಾಲೀಕತ್ವದ 'ಏರ್‌ಏಷ್ಯಾ ಇಂಡಿಯಾ' ವಿಮಾನಯಾನ ಕಂಪನಿಯು 2014ರ ಜೂನ್‌ನಲ್ಲಿ ಆರಂಭವಾಗಿದೆ. ಈ ಕಂಪನಿಯಲ್ಲಿ ಟಾಟಾ ಸನ್ಸ್ ಶೇ 83.67ರಷ್ಟು ಷೇರುಗಳನ್ನು ಹಾಗೂ ಏರ್‌ಏಷ್ಯಾ ಶೇ.16.33 ರಷ್ಟು ಷೇರುಗಳನ್ನು ಹೊಂದಿದೆ. ಏರ್ ಇಂಡಿಯಾ, ಏರ್ ಇಂಡಿಯಾ ಎಕ್ಸ್‌ಪ್ರೆಸ್, ವಿಸ್ತಾರಾ, ಏರ್‌ಏಷ್ಯಾ ಇಂಡಿಯಾ ವಿಮಾನಯಾನ ಕಂಪನಿಗಳು ಟಾಟಾ ಸಮೂಹಕ್ಕೆ ಸೇರಿವೆ. ವಿಸ್ತಾರಾ ಕಂಪನಿಯಲ್ಲಿ ಸಿಂಗಪುರ ಏರ್‌ಲೈನ್ಸ್ ಕೂಡ ಪಾಲು ಹೊಂದಿದೆ.

ನಕ್ಕರೆ ಅದೇ ಸ್ವರ್ಗ

ಆತ : ಟಿವಿ ಬೆಲೆ ಕಡಿಮೆ ಆಗಿದೆಯಲ್ಲ,
ಮದುವೆ ಗಂಡಿಗೆ ಟಿವಿ ಪ್ರೆಸೆಂಟ್ ಮಾಡಿದೆ

ಈತ : ಮದುವೆ ಹೆಣ್ಣಿಗೆ?

ಆತ : ರಿಮೋಟ್ ಕಂಟ್ರೋಲ್ ಕೊಟ್ಟೆ
ಕಂಟ್ರೋಲು ಒಬ್ಬರ ಬಳಿಯೇ ಇರಲಿ ಅಂತ!

ಮೈಸೂರು ಮಿತ್ರ

ಗುರುವಾರ, 3 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಯಾವನೊಬ್ಬನನ್ನಾಗಲೀ ಯಶದ ಹಾದಿಗೆ ಒಯ್ಯುವ ಮೂರು ಮುಖ್ಯ ಅಂಶಗಳೆಂದರೆ ಆತ್ಮವಿಶ್ವಾಸ, ನಿಶ್ಚಿತ ಗುರಿ ಮತ್ತು ಸಂಯಮ. – ಟೆನಿಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು	ಕಂಡರೆ ಸೇರದವನಿಗೆ ಉಂಡರೆ ಸೇರೀತೆ?

ನಿಮ್ಮ ಪತ್ರಗಳು

ಸೂಯೇಜ್ ಫಾರ್ಮ್ ದುರ್ವಾಸನೆಯಿಂದ ಪಾರು ಮಾಡಿ

ಮಾನ್ಯರೆ,

ಮೈಸೂರು ನಗರದ ಇತರ ಕಡೆಗಳಿಂದ ಕಸ ತಂದು ಸೂಯೇಜ್ ಫಾರ್ಮ್‌ನಲ್ಲಿರುವ ಘನ ತ್ಯಾಜ್ಯ ಘಟಕಕ್ಕೆ ಸುರಿಯುತ್ತಿದ್ದು, ಇದರಿಂದ ಹರಡುವ ದುರ್ವಾಸನೆಯಿಂದ ಸೂಯೇಜ್ ಫಾರ್ಮ್ ಸುತ್ತಮುತ್ತಲ ಪ್ರದೇಶಗಳಾದ ವಿಶ್ವೇಶ್ವರನಗರ, ಜೆ.ಪಿ. ನಗರ ಹಾಗೂ ವಿದ್ಯಾರಣ್ಯಪುರಂಗಳಲ್ಲಿ ವಾಸಿಸುತ್ತಿರುವ ನಾಗರಿಕರು ನರಕಯಾತನೆ ಅನುಭವಿಸುವಂತಾಗಿದೆ.

ದಸರಾ ಹಾಗೂ ದೀಪಾವಳಿ ಹಬ್ಬ ಹರಿದಿನಗಳ ಸಂದರ್ಭಗಳಲ್ಲಿ ಅಸಾಧ್ಯವಾದ ಹಾಗೂ ಸಹಿಸಲಾಗದಂತ ದುರ್ವಾಸನೆ. ಈ ಬಗ್ಗೆ ಇಲ್ಲಿಯ ನಾಗರಿಕರು ತಮ್ಮ ಬವಣೆಯನ್ನು ಸಂಬಂಧಪಟ್ಟ ಶಾಸಕರಿಗೆ, ನಗರಸಭಾ ಸದಸ್ಯರ ಗಮನಕ್ಕೆ ಹಲವಾರು ಬಾರಿ ತಂದರೂ ಈ ಯಾತನೆ ಅನುಭವಿಸುವ ಪರಿಸ್ಥಿತಿ ಯಾರಿಂದಲೂ ತಪ್ಪಿಸಲು ಸಾಧ್ಯವಾಗಲಿಲ್ಲ. ಈ ಪ್ರದೇಶದಲ್ಲಿ ಹಲವಾರು ಪ್ರತಿಷ್ಠಿತ ಶಾಲಾ ಕಾಲೇಜುಗಳು, ಕಲ್ಯಾಣ ಮಂಟಪಗಳು, ಅಪಾರ್ಟಮೆಂಟ್‌ಗಳು, ಹಲವು ಕೈಗಾರಿಕೆಗಳಿದ್ದು, ಎಲ್ಲರಿಗೂ ಈ ಕೆಟ್ಟ ದುರ್ವಾಸನೆ ಸಹಿಸಿಕೊಂಡು ಜೀವನ ಸಾಗಿಸುವುದೇ ಒಂದು ಸಾಹಸವಾಗಿದೆ.

ಸಂಸದರಾದ ಪ್ರತಾಪ ಸಿಂಹ ಅವರು ಈ ಬಗ್ಗೆ ಸುಮಾರು ಎರಡು ಮೂರು ವರ್ಷಗಳಿಂದ ತುಂಬಾ ಕಾಳಜಿ ವಹಿಸಿ ಈ ಘನ ತಾಜ್ಯ ಘಟಕವನ್ನು ಬೇರೆಡೆಗೆ ಸ್ಥಳಾಂತರಿಸುವ ಸಂಬಂಧ ನಿರಂತರವಾಗಿ ತಮ್ಮ ಪ್ರಯತ್ನವನ್ನು ಮುಂದುವರೆಸಿದ್ದಾರೆ. ಈ ಪ್ರದೇಶದ ನಾಗರಿಕರು ಈ ಯಾತನೆಯಿಂದ ಹೊರಬಂದು ನೆಮ್ಮದಿಯ ಜೀವನ ನಡೆಸುವಂತಾಗಲು ಆದಷ್ಟು ಬೇಗ ಈ ಘನ ತ್ಯಾಜ್ಯ ಘಟಕ ಬೇರೆ ಕಡೆಗೆ ಸ್ಥಳಾಂತರಿಸಲು ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಈ ಪ್ರದೇಶದ ನಾಗರಿಕರ ಕಳಕಳಿಯ ಮನವಿ.

– ಜಿ.ಎಸ್.ಗಣೇಶ್ ರಾವ್, ವಿಶ್ವೇಶ್ವರ ನಗರ, ಮೈಸೂರು.

ಮೈಸೂರು ಬಾಲಭವನ ಹೆಚ್ಚು ಕ್ರಿಯಾಶೀಲವಾಗಲಿ

ಮಾನ್ಯರೆ,

ಮೈಸೂರಿನ ಬನ್ನಿ ಮಂಟಪದ ಆವರಣದಲ್ಲಿರುವ ಬಾಲ ಭವನ ಈ ಹಿಂದೆ ಹಲವಾರು ಕಾರಣಗಳಿಂದಾಗಿ ವಿಶಿಷ್ಟವಾಗಿತ್ತು. 1977 ರಲ್ಲಿ ಸ್ಥಾಪನೆಗೊಂಡ ಮೈಸೂರಿನ ಬಾಲಭವನ, ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಅನಾವರಣಗೊಳಿಸುವ ತಾಣವಾಗಿತ್ತು ಬೇಸಿಗೆ ಶಿಬಿರ, ನಾಟ್ಯ, ಸಂಗೀತ, ಕಲಾ ಪ್ರದರ್ಶನ, ಮುಂತಾದ ಹತ್ತು ಹಲವು ಕಾರ್ಯಕ್ರಮಗಳ ಮೂಲಕ ಮಕ್ಕಳ ಪಾಲಿಗೆ ಅತ್ಯಂತ ನೆಚ್ಚಿನ ತಾಣವಾಗಿತ್ತು ಈ ಹಿಂದೆ ಪುಟ್ಟ ಮಕ್ಕಳನ್ನು ತನ್ನತ್ತ ಆಕರ್ಷಿಸಲು "ಟಾಯ್ ಟ್ರೈನ್" ಅಂದರೆ ಪುಟಾಣಿ ರೈಲುಗಳನ್ನು ಓಡಿಸುವ ಮೂಲಕ ಮಕ್ಕಳಿಗೆ ವಿಶೇಷವಾದ ಮನರಂಜನೆ ಒದಗಿಸಲಾಗುತ್ತಿತ್ತು. ದುರದೃಷ್ಟವಶಾತ್, ಕಳೆದ ಕೆಲವಾರು ವರ್ಷಗಳಿಂದ ಈ ರೈಲು ಓಡಾಟವನ್ನು ನಿಲ್ಲಿಸಲಾಗಿದೆ. ಅದೇ ರೀತಿ ಬಾಲರನ್ನು ಆಕರ್ಷಿಸುವ ಇತರೆ ಚಟುವಟಿಗೆಗಳು ಕೂಡ ಸ್ತಬ್ಧಗೊಂಡಿದೆಯೆಂದು ಹೇಳಲಾಗಿದೆ. ವಾಸ್ತವವಾಗಿ, ಬಾಲ ಭವನ ಸರ್ಕಾರದ ಅಧೀನಕ್ಕೆ ಒಳಪಟ್ಟ ಸಂಸ್ಥೆಯಾಗಿದ್ದು, ಅದು ಹೆಚ್ಚು ಹೆಚ್ಚು ಕ್ರಿಯಾಶೀಲವಾಗಬೇಕಾಗಿದೆ. ಸಂಬಂಧಪಟ್ಟವರು ಇದರ ಬಗ್ಗೆ ಗಮನ ಹರಿಸಿ ಮಕ್ಕಳಿಗೆ ಮನರಂಜನೆ ಒದಗಿಸಲು ಕಡೆಯ ಪಕ್ಷ ಪುಟಾಣಿ ರೈಲುಗಳನ್ನಾದರೂ ಓಡಿಸಲು ತುರ್ತು ಕ್ರಮ ಗೈಗೊಳ್ಳಲಿ..

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಹೈಡ್ರೋಜನ್ ಕಾರುಗಳ ಬಳಕೆ ಬೇಗ ಬರಲಿ

ಮಾನ್ಯರೆ,

ಈಗಾಗಲೇ ಮುಂದುವರಿದ ರಾಷ್ಟ್ರಗಳು ಹೈಡ್ರೋಜನ್ ಕಾರ್‌ಗಳ ಬಳಕೆ ಪ್ರಾರಂಭಿಸಿವೆ. ಇಂತಹದೇ ವಾಯುಮಾಲಿನ್ಯ ರಹಿತ ಹೈಡ್ರೋಜನ್ ಕಾರ್ ಉತ್ಪಾದನೆಯ ಪ್ರಕ್ರಿಯೆ ಭಾರತದಲ್ಲಿ ತ್ವರಿತವಾಗಿ ಆರಂಭಗೊಳ್ಳಬೇಕು.

ಭಾರತದಲ್ಲಿ, ಹೈಡ್ರೋಜನ್ ಇಂಧನದಿಂದ ಓಡುವ ವಾಹನಗಳನ್ನು ನೋಡುವ ಕಾಲ ಸನ್ನಿಹಿತವಾಗಬೇಕು. ಇದಕ್ಕೆ ಸರಕಾರಗಳು ತಡಮಾಡದೆ ಅಗತ್ಯ ಕ್ರಮ ಕೈಗೊಳ್ಳಬೇಕು. ಪ್ರಸ್ತುತ ಭಾರತದಲ್ಲಿ ಹೈಡ್ರೋಜನ್ ಇಂಧನವನ್ನು ಒಟ್ಟು ಮೂರು ವಿಧದಲ್ಲಿ ತಯಾರಿಸಲು ಪ್ರಯತ್ನ ಮಾಡಲಾಗುತ್ತಿದೆ. ಒಂದನೇ ವಿಧ ಕಲ್ಲಿದ್ದಲಿನಿಂದ ತಯಾರಿಸಿದ ಕಪ್ಪು ಹೈಡ್ರೋಜನ್. ಎರಡನೇ ವಿಧ ಪೆಟ್ರೋಲಿಯಂನಿಂದ ತಯಾರಿಸಲ್ಪಡುವ ಬ್ರೌನ್ ಹೈಡ್ರೋಜನ್ ಮತ್ತು ಮೂರನೇ ವಿಧವೆಂದರೆ ಹಸಿರು ಹೈಡ್ರೋಜನ್. ಹಸಿರು ಹೈಡ್ರೋಜನ್ ಅನ್ನು ತ್ಯಾಜ್ಯ, ಕೊಳಚೆ ನೀರು ಅಥವಾ ನೀರಿನಿಂದ ತಯಾರಿಸ ಬಹುದಾಗಿದೆ ಮತ್ತು ಕೃಷಿ ತ್ಯಾಜ್ಯದಿಂದ ಹಸಿರು ಹೈಡ್ರೋಜನ್ ತಯಾರಿಸಬಹುದು. ಕೇಂದ್ರ ಮತ್ತು ರಾಜ್ಯ ಸರಕಾರ ಪುರಸಭೆಯ ತ್ಯಾಜ್ಯದಿಂದ ಹಸಿರು ಇಂಧನವನ್ನು ತಯಾರಿಸಲು ಉತ್ತೇಜನ ನೀಡಬೇಕು. ಇದರಿಂದ ಕಡಿಮೆ ಖರ್ಚಿನಲ್ಲಿ ಹೈಡ್ರೋಜನ್ ಉತ್ಪಾದಿಸ ಬಹುದು. ಭಾರತದಲ್ಲಿ ಜನಸಾಮಾನ್ಯರಿಗೆ ಹೈಡ್ರೋಜನ್ ಕಾರುಗಳು ಯಾವಾಗ ಲಭ್ಯವಾಗಲಿವೆ ಎಂಬ ಮಾಹಿತಿ ಇಲ್ಲ. ಸರಕಾರಗಳು ಹೈಡ್ರೋಜನ್ ಕಾರ್‌ಗಳ ಬಗ್ಗೆ ಮಾಹಿತಿ ನೀಡಬೇಕು. ಭಾರತದಲ್ಲಿ ಒಂದೂವರೆ ಎರಡು ವರ್ಷಗಳಲ್ಲಿ ಜನರು ಹೈಡ್ರೋಜನ್ ಕಾರುಗಳನ್ನು ಓಡಿಸಲು ಸಾಧ್ಯವಾದರೆ ಒಳಿತು. ಪ್ರತಿ ಕೆಜಿ ಹೈಡ್ರೋಜನ್‌ಗೆ 80 ರಿಂದ 100 ರೂಪಾಯಿವರೆಗೆ ಸಿಗುವಂತೆ ಮಾಡುವುದು ಕೇಂದ್ರ ಸರಕಾರದ ಪ್ರಯತ್ನವಾಗಬೇಕು. ಒಂದು ಕೆಜಿ ಹೈಡ್ರೋಜನ್‌ನಲ್ಲಿ ಯಾವುದೇ ವಾಯು ಮಾಲಿನ್ಯವಿಲ್ಲದೆ ಕಾರು 400 ರಿಂದ 500 ಕಿಲೋಮೀಟರ್ ಓಡಬಲ್ಲದು ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ.

– ವಿಜಯಕುಮಾರ್, ರಾಯಚೂರು.

ಶಾಲಾ–ಕಾಲೇಜು ಪಠ್ಯಗಳಲ್ಲಿ 'ಅಪ್ಪು' ಇರಲಿ

ಮಾನ್ಯರೆ,

ಪವರ್ ಸ್ಟಾರ್ ಅಪ್ಪು ಅಜರಾಮರ. ನಾಯಕ, ಗಾಯಕ, ನಿರ್ಮಾಪಕರಾದ ಇವರನ್ನು ರಾಜಕುಮಾರ ನೀನೆ ಎಂದು ಅಭಿಮಾನಿಗಳ ಬಳಗ ಕರೆದಿದೆ. ಚಿಕ್ಕ ವಯಸ್ಸಿನಲ್ಲೇ ಅಪಾರ ಕೀರ್ತಿ ಗಳಿಸಿ ಜನಮನ್ನಣೆ ಪಡೆದು ಅನೇಕ ಪ್ರಶಸ್ತಿಗಳನ್ನು ಇವರು ಮುಡಿಗೇರಿಸಿಕೊಂಡಿದ್ದಾರೆ. ಇವರಲ್ಲಿ ಹಮ್ಮು–ಬಿಮ್ಮು ಇರಲೇ ಇಲ್ಲ. ಇವರ ಡ್ಯಾನ್ಸ್ ಗೆ ಹುಚ್ಚೆದ್ದು ಅಭಿಮಾನಿಗಳು ಕುಣಿದಿದ್ದರು. ಇವರ ಸರಿಸಾಟಿ ಯಾರು ಇಲ್ಲ. ರಾಜಕುಮಾರ ಇಲ್ಲದೆ ವರುಷ ಕಳೆದರೂ ಮಾಸಲಿಲ್ಲ ನೆನಪು. ನಿರಂತರವಾಗಿ ಅಪ್ಪು ನೆನಪಿನಲ್ಲಿ ಮಿಂದೆದ್ದ ಜನರು ವಯಸ್ಸಿನ ಅಂತರವಿಲ್ಲದೆ ಅಪ್ಪುವಿನ ಸ್ಮರಣೆ ಎಲ್ಲೆಡೆ ನಡೆಯಿತು. ಗಂಧದ ಗುಡಿಯ ಚಿತ್ರದಿಂದ ಪರಿಸರ, ಹಸಿರು ಕ್ರಾಂತಿ, ಕಾಡಿನ ಪ್ರೀತಿಯನ್ನು ಜನರಿಗೆ ಬಿತ್ತಿದ್ದಾರೆ. ಅಭಿಮಾನಿಗಳ ಆರಾಧ್ಯ ದೈವವಾಗಿರುವ ಅವರು ಜನರಿಗೆ ಅವರ ಗುಣಗಳನ್ನು ಧಾರೆ ಎರೆದಿದ್ದಾರೆ. ಅವರ ಸದ್ಗುಣಗಳಿಂದ ಎಲ್ಲರಿಗೂ ಹತ್ತಿರವಾಗಿದ್ದಾರೆ. ಅವರು ಎಂದಿಗೂ ಎಲ್ಲರ ಮನೆಯ ಮುತ್ತಿನ ರತ್ನ. ಕರ್ನಾಟಕ ರತ್ನ ಪ್ರಶಸ್ತಿ ಗಳಿಸಿದ ಇವರು ಎಲ್ಲರ ಮನೆಯ ಪುತ್ರರಾಗಿದ್ದಾರೆ. ಇವರ ಜೀವನ ಚರಿತ್ರೆ ಶಾಲಾ ಕಾಲೇಜು ಪಠ್ಯಕ್ರಮದಲ್ಲಿ ಇದ್ದರೆ ಇವರ ಸದ್ಗುಣಗಳಿಂದ ಎಲ್ಲರಿಗೂ ಮಾದರಿಯಾಗಿ ಮುಂದಿನ ಪೀಳಿಗೆಗೆ ಸಮಾಜ ಸೇವೆಯಲ್ಲಿ ನಿರಂತರವಾಗಿ ತೊಡಗಿಕೊಳ್ಳುವುಧರಲ್ಲಿ ಸಂದೇಹವಿಲ್ಲ.

–ಎಂ. ಎಸ್. ಉಷಾ ಪ್ರಕಾಶ್, ಲೇಖಿಕಿ ಹಾಗೂ ಕವಯಿತ್ರಿ, ಮೈಸೂರು.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಮಹಿಳಾ ಮೀಸಲಾತಿಗೆ ಮೂರು ದಶಕ



ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಇತಿಹಾಸದಲ್ಲಿ, 1992ರಲ್ಲಿ ಜಾರಿಗೆ ಬಂದ 73 ಮತ್ತು 74ನೇ ಸಂವಿಧಾನಾತ್ಮಕ ತಿದ್ದುಪಡಿಗಳಿಗೆ ಒಂದು ವಿಶೇಷ ಸ್ಥಾನವಿದೆ. ಗ್ರಾಮೀಣ ಮತ್ತು ನಗರ ರಾಜಕಾರಣದಲ್ಲಿ, ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡಾ 33ರಷ್ಟು ಮೀಸಲಾತಿಯನ್ನು ನೀಡುವ ಮೂಲಕ ಭಾರತೀಯ ರಾಜಕಾರಣದ ಇತಿಹಾಸದಲ್ಲಿ ಈ ತಿದ್ದುಪಡಿಗಳು ಒಂದು ಹೊಸ ಅಧ್ಯಾಯವನ್ನೇ ಬರೆದವು.

73ನೇ ಸಂವಿಧಾನಾತ್ಮಕ ತಿದ್ದುಪಡಿಯ ಅನ್ವಯ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ನೀಡಿದರೆ, 74 ನೇ ಸಂವಿಧಾನಾತ್ಮಕ ತಿದ್ದುಪಡಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅವರಿಗೆ ಮೀಸಲಾತಿಯನ್ನು ನಿಗದಿಪಡಿಸಿತು. ಈ ಎರಡು ಸಂಸ್ಥೆಗಳಲ್ಲಿ ಆಯ್ದ ಹುದ್ದೆಗಳನ್ನು ಮಹಿಳೆಯರಿಗೆ ಕಾದಿರಿಸಲಾಯಿತು. ಲಭ್ಯ ಮಾಹಿತಿಯ ಪ್ರಕಾರ ಭಾರತದಲ್ಲಿ ಈ ಹೊತ್ತು ಸುಮಾರು 3700 ನಗರ ಸ್ಥಳೀಯ ಸಂಸ್ಥೆಗಳೂ 2.56 ಲಕ್ಷ ಪಂಚಾಯತ್‌ರಾಜ್ ಸಂಸ್ಥೆಗಳೂ ಇವೆ.

2010 ರಲ್ಲಿ ದೇಶದ 20 ರಾಜ್ಯಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯ ಪ್ರಮಾಣವನ್ನು ಶೇಕಡಾ 50ಕ್ಕೆ ಏರಿಸಲಾಗಿ ಮಹಿಳೆಯರಿಗೆ ನ್ಯಾಯವಾಗಿ ಸಲ್ಲಬೇಕಾದ ಅರ್ಧದಷ್ಟು ಅವಕಾಶಗಳನ್ನು ಅವರು ಪಡೆಯಲು ಅನುವು ಮಾಡಿಕೊಡಲಾಯಿತು. ಪ್ರಸಕ್ತ ವರ್ಷದಲ್ಲಿ ಈ ತಿದ್ದುಪಡಿಗಳು ಮೂರು ದಶಕಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ, ಮೀಸಲಾತಿ ಎನ್ನುವುದು ಕೇವಲ ಸಂಖ್ಯಾತ್ಮಕ ಸಾಧನೆಯೇ ಅಥವಾ ಮಹಿಳೆಯರ ಅರ್ಥಪೂರ್ಣ ಭಾಗವಹಿಸುವಿಕೆಗೆ ಈ ಪ್ರಯತ್ನಗಳು ಅವಕಾಶವನ್ನು ಕಲ್ಪಿಸಿದವೇ ಎನ್ನುವ ಪ್ರಶ್ನೆಯನ್ನು ಎತ್ತಿ ಅದಕ್ಕೆ ಉತ್ತರಗಳನ್ನು ಹುಡುಕಲು ಇದು ಸೂಕ್ತ ಸಮಯ.

ದೇಶದ ಸಂವಿಧಾನವೇ ಸಾರ್ವಜನಿಕ ಜೀವನದಲ್ಲಿ ಭಾಗವಹಿಸಲು ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡಿರುವಾಗ ಮಹಿಳೆಯರಿಗೆ ವಿಶೇಷ ಮೀಸಲಾತಿ ಅನಗತ್ಯ, ಅವರು ಅರ್ಹತಾನುಸಾರ ರಾಜಕಾರಣದಲ್ಲಿ ಪ್ರವೇಶ ಪಡೆಯಲು ಯಾವ ಅಡ್ಡಿಯೂ ಇಲ್ಲ ಎಂಬ ವಾದವನ್ನು ಮಾಡುವವರು ಇಂದಿಗೂ ಇದ್ದಾರೆ. ಚುನಾವಣೆಗಳಲ್ಲಿ ಸ್ಪರ್ಧಿಸುವುದು ಪ್ರಜಾಸತ್ತಾತ್ಮಕ ಹಕ್ಕು ಅದನ್ನು ಮಹಿಳೆಯರಿಂದ ಕಿತ್ತು ಕೊಳ್ಳುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ ಎನ್ನುವುದು ನಿಜವೇ ಸರಿ.

ಮಹಿಳೆಯರನ್ನು ಶತಮಾನಗಳಿಂದ ಅಧಿಕಾರ ವಲಯದಿಂದ ದೂರವಿಡಲಾಗಿದ್ದು ಅವರಿಗೆ ರಾಜಕಾರಣದ ಪ್ರವೇಶ ಅಷ್ಟು ಸುಲಭದ ಅನುಭವವಲ್ಲ. ನಮ್ಮ ಸಮಾಜದಲ್ಲಿ ಹಾಸು ಹೊಕ್ಕಾಗಿರುವ ಸಾಮಾಜಿಕ–ಸಾಂಸ್ಕೃತಿಕ–ಆರ್ಥಿಕ ಕಟ್ಟುಪಾಡುಗಳು ಮಹಿಳೆಯರು ಸ್ವತಂತ್ರವಾಗಿ ಸಾರ್ವಜನಿಕ ಜೀವನದಲ್ಲಿ ತಮ್ಮ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅವಕಾಶಗಳನ್ನು ನೀಡುತ್ತಿರಲಿಲ್ಲ. ಅವರಿಗೇ ಮೀಸಲಾದ ಸ್ಥಾನಗಳನ್ನು ನಿಗದಿಪಡಿಸುವುದನ್ನು ಸಂವಿಧಾನಾತ್ಮಕ ಬದ್ಧತೆಯನ್ನಾಗಿ ಮಾಡದಿದ್ದರೆ ಶತಮಾನಗಳು ಕಳೆದರೂ ರಾಜಕಾರಣದಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಲು ಸಾಧ್ಯವೇ ಇಲ್ಲ ಎಂದು ಮನಗಂಡ ಆಗಿನ ಆಡಳಿತಾರೂಢ ವ್ಯವಸ್ಥೆ, ಆರಂಭಿಕ ಹಂತದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಾದರೂ ಅವರಿಗೆ ಶೇಕಡಾ 33ರಷ್ಟು ಸ್ಥಾನಗಳನ್ನು ಮೀಸಲಿಡಬೇಕೆಂಬ ನಿರ್ಧಾರಕ್ಕೆ ಬಂದಿತು.

> **ಮಹಿಳೆಯರನ್ನು ಶತಮಾನಗಳಿಂದ ಅಧಿಕಾರ ವಲಯದಿಂದ ದೂರವಿಡಲಾಗಿದ್ದು ಅವರಿಗೆ ರಾಜಕಾರಣದ ಪ್ರವೇಶ ಅಷ್ಟು ಸುಲಭದ ಅನುಭವವಲ್ಲ. ನಮ್ಮ ಸಮಾಜದಲ್ಲಿ ಹಾಸು ಹೊಕ್ಕಾಗಿರುವ ಸಾಮಾಜಿಕ–ಸಾಂಸ್ಕೃತಿಕ–ಆರ್ಥಿಕ ಕಟ್ಟುಪಾಡುಗಳು ಮಹಿಳೆಯರು ಸ್ವತಂತ್ರವಾಗಿ ಸಾರ್ವಜನಿಕ ಜೀವನದಲ್ಲಿ ತಮ್ಮ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅವಕಾಶಗಳನ್ನು ನೀಡುತ್ತಿರಲಿಲ್ಲ. ಅವರಿಗೇ ಮೀಸಲಾದ ಸ್ಥಾನಗಳನ್ನು ನಿಗದಿಪಡಿಸುವುದನ್ನು ಸಂವಿಧಾನಾತ್ಮಕ ಬದ್ಧತೆಯನ್ನಾಗಿ ಮಾಡದಿದ್ದರೆ ಶತಮಾನಗಳು ಕಳೆದರೂ ರಾಜಕಾರಣದಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಲು ಸಾಧ್ಯವೇ ಇಲ್ಲ ಎಂದು ಮನಗಂಡ ಆಗಿನ ಆಡಳಿತಾರೂಢ ವ್ಯವಸ್ಥೆ, ಆರಂಭಿಕ ಹಂತದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಾದರೂ ಅವರಿಗೆ ಶೇಕಡಾ 33ರಷ್ಟು ಸ್ಥಾನಗಳನ್ನು ಮೀಸಲಿಡಬೇಕೆಂಬ ನಿರ್ಧಾರಕ್ಕೆ ಬಂದಿತು. ಆದರೆ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿಯನ್ನು ಕಲ್ಪಿಸುವ ಮಹಿಳಾ ಮೀಸಲಾತಿ ವಿಧೇಯಕಕ್ಕೆ ಇದುವರೆಗೂ ಸಂಸತ್ತಿನಲ್ಲಿ ಮನ್ನಣೆ ದೊರೆತಿಲ್ಲ ಎನ್ನುವುದು ರಾಜಕಾರಣ ಎಷ್ಟು ಪುರುಷಪ್ರಧಾನ ಮೌಲ್ಯಾಚರಣೆಗಳಿಂದ ಆವೃತ್ತವಾಗಿದೆ ಎನ್ನುವುದಕ್ಕೆ ಸಾಕ್ಷಿ.**

ಆದರೆ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿಯನ್ನು ಕಲ್ಪಿಸುವ ಮಹಿಳಾ ಮೀಸಲಾತಿ ವಿಧೇಯಕಕ್ಕೆ ಇದುವರೆಗೂ ಸಂಸತ್ತಿನಲ್ಲಿ ಮನ್ನಣೆ ದೊರೆತಿಲ್ಲ ಎನ್ನುವುದು ರಾಜಕಾರಣ ಎಷ್ಟು ಪುರುಷಪ್ರಧಾನ ಮೌಲ್ಯಾಚರಣೆಗಳಿಂದ ಆವೃತ್ತವಾಗಿದೆ ಎನ್ನುವುದಕ್ಕೆ ಸಾಕ್ಷಿ.

ಮಹಿಳಾ ಮೀಸಲಾತಿ ಮಸೂದೆ ಜಾರಿಯಾದ ನಂತರ ಗ್ರಾಮೀಣ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಹೆಚ್ಚು ಕಡಿಮೆ ಅರ್ಧದಷ್ಟಾಗಿದೆ. ಈ ಹೆಚ್ಚಳದ ಪ್ರಕ್ರಿಯೆ ಆರಂಭವಾಗಿದ್ದು ಕರ್ನಾಟಕದಲ್ಲೇ ಮೊದಲು ಎನ್ನುವುದು ನಾವು ಹೆಮ್ಮೆ ಪಡುವಂಥ ವಿಚಾರ. 1987ರಲ್ಲಿಯೇ ಜಾರಿಗೆ ಬಂದ ಪಂಚಾಯತ್‌ರಾಜ್ ಕಾಯಿದೆ 25% ಸ್ಥಾನಗಳನ್ನು ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಮೀಸಲಿಡುವ ನಿರ್ಧಾರವನ್ನು ತೆಗೆದುಕೊಂಡದ್ದು 73 ಮತ್ತು 74ನೇ ಸಂವಿಧಾನಾತ್ಮಕ ತಿದ್ದುಪಡಿಗಳಿಗೆ ಪ್ರೇರಣೆ ನೀಡಿತು. ಈ ಹೊತ್ತು ಭಾರತದ ಪಂಚಾಯತ್‌ಗಳಲ್ಲಿ 14,53,973 ಮಹಿಳಾ ಪ್ರತಿನಿಧಿಗಳು ಚುನಾಯಿತರಾಗಿದ್ದಾರೆ ಎಂದರೆ ಇದಕ್ಕೆ ಕರ್ನಾಟಕ ಇಟ್ಟ ಹೆಜ್ಜೆ ಗುರುತುಗಳೇ ಕಾರಣ. ನಗರ ಸಂಸ್ಥೆಗಳಲ್ಲೂ ಇಂದು ಮಹಿಳಾ ಪ್ರಾತಿನಿಧ್ಯ ಸುಮಾರು ಅರ್ಧದಷ್ಟಿರುವುದಕ್ಕೂ ಮಹಿಳಾ ಮೀಸಲಾತಿ ಕಾಯಿದೆಯೇ ಕಾರಣ ಎಂದೇನೂ ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಮಹಿಳಾ ಪ್ರಾಧಾನ್ಯತೆಯ ಬಗ್ಗೆ ಚರ್ಚೆಯಲ್ಲಿ ತೊಡಗುವಾಗ ಸಂಖ್ಯೆಗಳು ಎಷ್ಟು ಮುಖ್ಯ ಎನ್ನುವ ಪ್ರಶ್ನೆ ಬರುವುದು ಸಹಜವೇ. ಸಂಖ್ಯೆಗಳಿಗಿಂತ ಗುಣಮಟ್ಟದ ಭಾಗವಹಿಸುವಿಕೆ ಮುಖ್ಯ, 33% ಆಗಲೀ 50% ಆಗಲಿ ಅದೊಂದು ಸಂಖ್ಯೆಯಷ್ಟೇ ಎಂಬ ಭಾವನೆ ಇಂದಿಗೂ ಅನೇಕರಲ್ಲಿದೆ. ಮೊದಮೊದಲಲ್ಲಿ ನನಗೂ ಹಾಗೆಯೇ ಎನಿಸುತಿತ್ತು. ಆದರೆ ಕಾಲ ಕ್ರಮೇಣ, ಒಂದು ಸಂಸ್ಥೆಯಲ್ಲಿ ಮಹಿಳಾ ಧ್ವನಿಗಳು ಗಟ್ಟಿಯಾಗಿ ಕೇಳಬೇಕಾದರೆ, ಅವರ ಬದುಕನ್ನು ಪ್ರಭಾವಿಸುವ ವಿಚಾರಗಳತ್ತ ಗಮನವನ್ನು ಸೆಳೆಯಬೇಕಾದರೆ ಸಂಖ್ಯೆಗಳೂ ಮುಖ್ಯ ಎಂಬ ಸರಳ ಸತ್ಯ ವೇದ್ಯವಾಗತೊಡಗಿತು. ಮಹಿಳಾ ಮೀಸಲಾತಿ ಜಾರಿಯಲ್ಲಿ ಇರುವುದರಿಂದ ಬಹುತೇಕ ಮಹಿಳೆಯರು ಅಧಿಕಾರ ವಲಯದೊಳಗೆ ಪ್ರವೇಶ ಪಡೆದಿದ್ದಾರೆ, ಅವರು ಸಭೆಗಳಲ್ಲಿ ಮಾತನಾಡುವುದು ಹಾಗಿರಲಿ, ತಲೆಯನ್ನು ಎತ್ತಿ ಕೂಡ ನೋಡುವುದಿಲ್ಲ, ಮಹಿಳೆಯರಿಗೆಲ್ಲಿದೆ ರಾಜಕೀಯ ಅನುಭವ ಎಂದು ಹಗುರವಾಗಿ ಟೀಕೆ ಮಾಡುವವರೂ ಇದ್ದಾರೆ. ಆದರೆ ಅವಕಾಶ ನೀಡಿದರೆ ತಾನೇ ಅನುಭವ ಬರುವುದು...?

ಸ್ಥಳೀಯ ಸಂಸ್ಥೆಗಳ ಸಭೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಇನ್ನೂ ಅನೇಕ ಅಡ್ಡಿಗಳಿವೆ. ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದರಿಂದ ಹಿಡಿದು ಅವರ ಭಾಗವಹಿಸುವಿಕೆಯ ರೀತಿಯವರೆಗೂ ಪ್ರಬಲ ರಾಜಕೀಯ ಪಕ್ಷಗಳ, ಸ್ಥಳೀಯವಾಗಿ ಪ್ರಭಾವಿ ವ್ಯಕ್ತಿಗಳ ಹಸ್ತಕ್ಷೇಪ ನಡೆಯುತ್ತಲೇ ಇದೆ. ಅನೇಕ ಸದಸ್ಯರ ಕುಟುಂಬಗಳ ಪುರುಷರು ಸಭೆಗಳಲ್ಲಿ ತಮಗೆ ಪ್ರತ್ಯೇಕ ಆಸನಗಳನ್ನು ನೀಡಬೇಕೆಂಬ ಒತ್ತಡಗಳನ್ನು ತಂದಿರುವುದು ಹಾಗೂ ಕಡತಗಳನ್ನು ಮನೆಗೆ ತರಿಸಿಕೊಂಡು ತಾವೇ ಸಹಿ ಹಾಕಿರುವುದು– ಇಂಥ ಘಟನೆಗಳು ಕೂಡ ನಡೆದಿವೆ.

ಪ್ರಬಲ ಜಾತಿಗಳ, ಭೂ ಮಾಲೀಕರ ಅಥವಾ ಸಾಂಪ್ರದಾಯಿಕವಾಗಿ ನಾಯಕತ್ವದ ಸ್ಥಾನಗಳಲ್ಲಿ ಇರುವ ಕುಟುಂಬಗಳ ಪ್ರಭಾವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಇದ್ದೇ ಇರುತ್ತದೆ. ಇವೆಲ್ಲ ಅಧಿಕಾರವುಳ್ಳವರು–ಹಂಚಿಕೆಯಾಗುವಾಗ ಜಗತ್ತಿನೆಲ್ಲೆಡೆ ಸೃಷ್ಟಿಯಾಗಿರುವಂಥ ಸಂದರ್ಭಗಳೇ ಆಗಿದ್ದು, ಇಂಥ ನಕಾರಾತ್ಮಕ ಘಟನೆಗಳನ್ನು ಮುಂದಿಟ್ಟುಕೊಂಡು ಮಹಿಳಾ ಮೀಸಲಾತಿಯ ಆಶಯಗಳನ್ನೇ ತಳ್ಳಿ ಹಾಕಲಾಗದು. ಏಕೆಂದರೆ ಮಹಿಳೆಯರ ರಾಜಕೀಯ ಪ್ರವೇಶ ಅನೇಕ ಧನಾತ್ಮಕ ಬದಲಾವಣೆಗಳಿಗೂ ದಾರಿ ಮಾಡಿ ಕೊಟ್ಟಿದೆ. ಅವುಗಳನ್ನು ಗುರುತಿಸಿ, ಗೌರವಿಸುವುದು ಕೂಡ ಬಹು ಮುಖ್ಯ.

ಮಹಿಳೆಯರು ಆಡಳಿತಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗಿಗಳಾದಾಗ ಒಂದು ಸಮುದಾಯದ ಜೀವನದಲ್ಲಿ ಅವರು ತರಬಲ್ಲ ಬದಲಾವಣೆಗಳಾದರೂ ಯಾವುವು? ಎಂಬುದು ಮಹಿಳಾ ಮೀಸಲಾತಿಯನ್ನು ಕುರಿತು ಆಗಾಗ್ಗೆ ಏಳುವ ಪ್ರಶ್ನೆ. ಮಹಿಳೆಯರ ಬದುಕಿನಲ್ಲಿ ಅಭಿವೃದ್ಧಿಯನ್ನು ಸಾಧಿಸಲು ತೀರಾ ಅಗತ್ಯವಾದ ಪರಿಶುದ್ಧ ಕುಡಿಯುವ ನೀರಿನ ಮೂಲಗಳು, ಇಂಧನ, ಶೌಚಾಲಯ, ಕೌಟುಂಬಿಕ ದೌರ್ಜನ್ಯದಿಂದ ಮುಕ್ತಿ, ಮನೆಯ ಸನಿಹದಲ್ಲಿ ಪ್ರಾಥಮಿಕ ಶಾಲೆ– ಇವೇ ಮುಂತಾದ ವಿಚಾರಗಳನ್ನು ಮಹಿಳೆಯರು ಗ್ರಾಮೀಣ ಅಥವಾ ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಸೂಚಿಯಲ್ಲಿ ಸೇರ್ಪಡೆಯಾಗುವಂತೆ ಆಸ್ಥೆ ವಹಿಸುತ್ತಾರೆ. ಈ ಮೂಲಭೂತ ಸೌಕರ್ಯಗಳ ಅಲಭ್ಯತೆಯಿಂದ ಉಂಟಾಗುವ ತೊಂದರೆಗಳನ್ನು ಮಹಿಳೆಯರು ಸ್ವತಃ ಅನುಭವಿಸಿರುವುದರಿಂದ ಅವುಗಳ ಅಗತ್ಯ ಅವರಿಗೆ ತಿಳಿದಿರುತ್ತದೆ.

ಈ ವಿಚಾರಗಳ ಬಗ್ಗೆ ಪುರುಷರಲ್ಲಿ ಸೂಕ್ಷ್ಮತೆ ಇಲ್ಲ ಎಂಬುದು ಇದರ ಅರ್ಥವಲ್ಲ. ಆದರೆ ಸಾಮಾನ್ಯವಾಗಿ ನೀರು, ಗೃಹ ನಿರ್ವಹಣೆಗೆ ಅಗತ್ಯ ವಾದ ವಸ್ತುಗಳು, ಮಕ್ಕಳ ಪಾಲನೆ, ಮನೆಯ ಸಂಪನ್ಮೂಲಗಳ ನಿರ್ವಹಣೆ– ಇವೇ ಮುಂತಾದ ವಿಚಾರಗಳ ಬಗ್ಗೆ ಮಹಿಳೆಯರು ಆಸ್ಥೆ ವಹಿಸುವ ಸಾಧ್ಯತೆಗಳು ಹೆಚ್ಚು. ಹಾಗೆಯೇ ಅನೇಕ ಕುಟುಂಬಗಳಲ್ಲಿ ಮಹಿಳೆಯರ ವಿರುದ್ಧದ ದೌರ್ಜನ್ಯಕ್ಕೆ ಕಾರಣ ವಾಗಿರುವ ಕುಡಿತದ ವಿರುದ್ಧ ದೇಶದ ನಾನಾ ಭಾಗಗಳಲ್ಲಿ ಸಾಮಾಜಿಕ ಚಳವಳಿಯನ್ನು ಸಾರಿದವರು ಮಹಿಳೆಯರು. ಭಾರತದಲ್ಲೇಕೆ, ಇಡೀ ಜಗತ್ತಿನಲ್ಲೇ ಸಾರಾಯಿ ವಲಯ ಪ್ರಬಲ ಬಂಡವಾಳಶಾಹಿ ಉದ್ದಿಮೆಯಾಗಿ ತನ್ನ ಜಾಲವನ್ನು ಪಸರಿಸಿದ್ದು ಅದನ್ನು ಎದುರು ಹಾಕಿಕೊಳ್ಳುವ ಧೈರ್ಯವನ್ನು ತೋರಿದ್ದು ಮಹಿಳೆಯರು.

ಹಾಗೆಯೇ ಬೀದಿ ದೀಪಗಳು, ಬಸ್ ನಿಲ್ದಾಣಗಳು, ರಸ್ತೆಗಳು, ಊರಿಗೆ ಸಾರಿಗೆ ಸೌಲಭ್ಯ, ಸೇತುವೆಗಳು, ಶಾಲಾ ಕಟ್ಟಡಗಳು, ಸಾರ್ವಜನಿಕ ಶೌಚಾಲಯಗಳು, ಇವೇ ಮುಂತಾದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಹಿಳಾ ಸದಸ್ಯರು ರೂಪಿಸಿ–ಕಾರ್ಯರೂಪಕ್ಕೆ ತಂದಂತಹ ನಿದರ್ಶನಗಳು ನಮ್ಮ ಮುಂದೆ ಬಹಳಷ್ಟಿವೆ.

ಮಹಿಳೆಯರಿಗೆ ನ್ಯಾಯಯುತವಾಗಿ ಸಲ್ಲಬೇಕಾದ ಅಧಿಕಾರವನ್ನು73 ಮತ್ತು 74ನೇ ಸಂವಿಧಾನಾತ್ಮಕ ತಿದ್ದುಪಡಿಗಳು ನೀಡಿವೆ. ಇದನ್ನು ಪುರುಷ ವಿರೋಧಿ ನಡೆ ಎಂದು ಅರ್ಥೈಸುವುದನ್ನು ಬಿಟ್ಟು ಸಮಾಜದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರಿಗೆ ಈಗಲಾದರೂ ಪ್ರಜಾಸತ್ತಾತ್ಮಕ ಆಡಳಿತ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ದೊರೆತಿರುವುದನ್ನು ಗೌರವಿಸಿ ಲಿಂಗ ಸೂಕ್ಷ್ಮ ರಾಜಕಾರಣಕ್ಕೆ ನಮ್ಮ ದೇಶ ಇಡೀ ವಿಶ್ವದಲ್ಲೇ ಮಾದರಿಯಾಗಿದೆ ಎಂಬುದನ್ನು ಸಂಭ್ರಮಿಸಬೇಕು. ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಮಹಿಳೆಯರಿಗೆ ಆರಂಭಿಕವಾಗಿ ಯಾದರೂ 33% ಮೀಸಲಾತಿಯನ್ನು ನೀಡುವ ವಿಧೇಯಕಕ್ಕೆ ಮಾನ್ಯತೆಯನ್ನು ಪಡೆಯಲು ಸರ್ಕಾರ ಮತ್ತು ನಾಗರಿಕ ಸಮಾಜಗಳೆರಡೂ ಗಂಭೀರವಾಗಿ ಪ್ರಯತ್ನಿಸಬೇಕು.

ಟಿಇಟಿ ಪರೀಕ್ಷೆಯ ಅಧ್ಯಯನ ಪುಸ್ತಕ ಬಿಡುಗಡೆ

ಮಕ್ಕಳ ಗ್ರಹಿಕೆ ಆಧರಿಸಿ ಬೋಧಿಸಬೇಕು

ಶಿಕ್ಷಕರಿಗೆ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಕಿವಿಮಾತು



ಮೈಸೂರಿನ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಟಿಇಟಿ ಅಧ್ಯಯನ ಪುಸ್ತಕ ಬಿಡುಗಡೆ ಮಾಡಲಾಯಿತು.

ಮೈಸೂರು,ನ.2(ಪಿಎಂ)– ಮಕ್ಕಳ ಗ್ರಹಿಕೆ, ಮನವರಿಕೆ ಮನೋಭಾವ ಅರ್ಥೈಸಿಕೊಂಡು ಅದಕ್ಕನುಗುಣವಾಗಿ ಶಿಕ್ಷಕರು ಬೋಧನೆ ಮಾಡಬೇಕು ಎಂದು ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಹೇಳಿದರು.

ಮೈಸೂರಿನ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಜ್ಞಾನಬುತ್ತಿ ಸಂಸ್ಥೆ ವತಿಯಿಂದ 'ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ)' ಉಚಿತ ತರಬೇತಿ ಶಿಬಿರದ ಶಿಬಿರಾರ್ಥಿಗಳಿಗೆ ಸೋಮವಾರ ಹಮ್ಮಿಕೊಂಡಿದ್ದ ಶುಭಹಾರೈಕೆ ಕಾರ್ಯಕ್ರಮದಲ್ಲಿ ಶುಭ ಹಾರೈಸಿ ಅವರು ಮಾತನಾಡಿದರು.

ಬದುಕಿಗಾಗಿ ಶಿಕ್ಷಣ ಪಡೆಯಬೇಕೇ ಹೊರತು ಉದ್ಯೋಗ ಅಥವಾ ಹಣ ಗಳಿಕೆಗಲ್ಲ. ಶಿಕ್ಷಕರು ಶ್ರದ್ಧೆ ಮತ್ತು ಪ್ರಾಮಾಣಿಕ ಮನೋಭಾವ ಹೊಂದುವ ಜೊತೆಗೆ ವಿದ್ಯಾರ್ಥಿಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವುದು ಅಗತ್ಯ. ಶಿಕ್ಷಕ ವೃತ್ತಿಯಲ್ಲಿ ಆಳವಾಗಿ ತೊಡಗಿಸಿಕೊಂಡಾಗ ಸಂತೋಷ ಕಾಣಸಿಗುತ್ತದೆ. ಮಕ್ಕಳು ಹೇಗೆ ಗ್ರಹಿಸಿಕೊಳ್ಳುತ್ತಾರೆ? ಹೇಗೆ ಮನವರಿಕೆ ಮಾಡಿಕೊಳ್ಳುತ್ತಾರೆ? ಎನ್ನುವುದನ್ನು ಗಮನಿಸಿ ಅದಕ್ಕನುಗುಣವಾಗಿ ಬೋಧಿಸಬೇಕು ಎಂದು ತಿಳಿಸಿದರು. ನಮ್ಮ ವಿಶ್ವವಿದ್ಯಾನಿಲಯಗಳು ಮೂಲ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ತರಬೇತಿಗಳು, ಉದ್ಯೋಗ ಹಾಗೂ ಅದರ ಮೂಲಕ ಹಣವನ್ನು ತಂದು ಕೊಡಬಹುದು. ಆದರೆ ಮೂಲ ಶಿಕ್ಷಣವು ಸಂಸ್ಕಾರ ಮತ್ತು ಸಮಾಜಮುಖಿ ಕೆಲಸಗಳಿಗೆ ಪ್ರೇರಣೆ ನೀಡುತ್ತದೆ ಎಂದರು.

ಜ್ಞಾನಬುತ್ತಿ ಹೊರತಂದಿರುವ ಶಿಕ್ಷಕರ ಅರ್ಹತಾ ಪರೀಕ್ಷೆಯ (ಟಿಇಟಿ) ಅಧ್ಯಯನ ಪುಸ್ತಕ ಬಿಡುಗಡೆ ಮಾಡಿದ ಮುಕ್ತ ವಿವಿ ಪ್ರಭಾರ ಕುಲಪತಿ ಡಾ.ಎ.ಖಾದರ್ ಪಾಷ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಅಗತ್ಯ ಎಂದರಲ್ಲದೆ, ನೂತನ ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಬಗ್ಗೆ ಮಾಹಿತಿ ನೀಡಿದರು.

ಕೆಎಎಸ್ ಹಿರಿಯ ಅಧಿಕಾರಿ ಹಾಗೂ ಜ್ಞಾನಬುತ್ತಿ ಸಂಸ್ಥೆಯ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ವಿಭಾಗದ ಅಧ್ಯಕ್ಷ ಆಶಾದ್ ಆರ್.ಷರೀಫ್ ಮಾತನಾಡಿ, ನಂಬಿಕೆ ಮತ್ತು ಶ್ರಮವೇ ಜೀವನ. ಯಶಸ್ಸಿನ ಗುಟ್ಟು ಪರಿಶ್ರಮ ಮತ್ತು ಅವಕಾಶಗಳು ಎಂದರು. ಸಂಪನ್ಮೂಲವ್ಯಕ್ತಿಗಳಾದ ಡಾ.ಸಿ.ಎನ್.ಸುನೀತ, ಪ್ರೊ.ಹೊನ್ನಯ್ಯ, ಪ್ರೊ. ವಿಜಯಪ್ರಕಾಶ್, ನೆಲ್ವಿನ್ ಪ್ರವೀಣ್‌ಕುಮಾರ್, ಎಸ್.ಎನ್. ಲಿಂಗರಾಜು, ಡಾ.ಉಮೇಶ್ ಬೇವಿನಹಳ್ಳಿ, ಹಾಲಪ್ಪ ಹೆಚ್.ಗೌಡ, ಡಾ.ಪಳನಿಸ್ವಾಮಿ ಮೂಡಗೂರು, ಡಾ.ಈ. ಶಿವಪ್ರಸಾದ್. ಕೃಪ.ಗಣೇಶ, ಕೆ.ವೈ.ನಾಗೇಂದ್ರ, ಸಿ.ಕೆ.ಕಿರಣ್ ಕೌಶಿಕ್, ಜ್ಞಾನಬುತ್ತಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಜೈನಹಳ್ಳಿ ಸತ್ಯನಾರಾಯಣಗೌಡ ಮತ್ತಿತರರು ಹಾಜರಿದ್ದರು.

ಕನ್ನಡದಿಂದ ಎಲ್ಲವನ್ನೂ ಗಳಿಸಬಹುದು ಎನ್ನುವುದಕ್ಕೆ ನಾನೇ ಉದಾಹರಣೆ

ಕನ್ನಡ ನಾಡು–ನುಡಿ ಬಗ್ಗೆ ಧನ್ಯತಾ ಭಾವ ವ್ಯಕ್ತಪಡಿಸಿದ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ

ಮೈಸೂರು,ನ.2(ಪಿಎಂ)–ಕನ್ನಡದಿಂದ ಎಲ್ಲವನ್ನೂ ಗಳಿಸಬಹುದು ಎನ್ನುವುದಕ್ಕೆ ನಾನೇ ಉದಾಹರಣೆ. ವಾಗ್ಮಿ, ಅಂಕಣಕಾರ, ಸೆಲೆಬ್ರಿಟಿ ಎನ್ನಿಸಿಕೊಳ್ಳುವುದಕ್ಕೂ ಇದೇ ಕನ್ನಡ ಭಾಷೆಯೇ ಕಾರಣ ಎಂದು ಹೇಳುವ ಮೂಲಕ 67ನೇ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ಕನ್ನಡ ನಾಡು–ನುಡಿ ಬಗ್ಗೆ ಧನ್ಯತಾ ಭಾವ ವ್ಯಕ್ತಪಡಿಸಿದರು.

ಟಿಇಟಿ ಉಚಿತ ತರಬೇತಿ ಶಿಬಿರದ ಶಿಬಿರಾರ್ಥಿಗಳಿಗೆ ಸೋಮವಾರ ಹಮ್ಮಿಕೊಂಡಿದ್ದ ಶುಭಹಾರೈಕೆ ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳ ಪ್ರಶ್ನೆಗೆ ಉತ್ತರಿಸಿದರು. ನನಗೆ ಕನ್ನಡವೇ ಸರ್ವಸ್ವವಾಗಿದೆ. 65ಕ್ಕಿಂತ ಹೆಚ್ಚು ಬಾರಿ ವಿದೇಶಗಳನ್ನು ಸುತ್ತುವುದಕ್ಕೆ ಅವಕಾಶ ಒದಗಿಸಿಕೊಟ್ಟದ್ದೇ ಈ ಭಾಷೆ. ಕನ್ನಡವು ನನ್ನನ್ನು ವಿಶ್ವಕ್ಕೆ ಪರಿಚಯಿಸಿತು. ಕನ್ನಡದಿಂದಲೇ ನಾನು ಖ್ಯಾತನಾದೆ. ಈ ಭಾಷೆ ನನಗೆ ಎಲ್ಲವನ್ನು ನೀಡಿದೆ. ಕನ್ನಡದಿಂದ ಎಲ್ಲವನ್ನೂ ಗಳಿಸಬಹುದು ಎನ್ನುವುದಕ್ಕೆ ನಾನೇ ಉದಾಹರಣೆ. ಕನ್ನಡ ಏನನ್ನು ಕೊಡುತ್ತದೆ ಎನ್ನುವವರಿಗೆ ನಾನು ದೊಡ್ಡ ನಿದರ್ಶನವಾಗಿದ್ದೇನೆ ಎಂದರು.

ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು, ನ.2– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಬಿ, 3ಎ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ಮೆಟ್ರಿಕ್ ನಂತರದ ಸಾಮಾನ್ಯ ಪದವಿ ಕೋರ್ಸ್ ವಿದ್ಯಾರ್ಥಿಗಳಿಗೆ 2022–23ನೇ ಸಾಲಿಗೆ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ನವೆಂಬರ್ 10ರ ಒಳಗಾಗಿ ಅರ್ಜಿಯನ್ನು ಸಲ್ಲಿಸಲು ತಿಳಿಸಿದೆ. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ವಯೋಮಿತಿ 16 ರಿಂದ 26 ವರ್ಷದೊಳಗಿರಬೇಕು. ವಿದ್ಯಾರ್ಥಿಗಳು ಪೋಷಕರ ಆದಾಯ ಮಿತಿಯು ಪ್ರವರ್ಗ–1 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ 2.50 ಲಕ್ಷದೊಳಗಿರಬೇಕು. ಪ್ರವರ್ಗ–2ಎ, 2ಬಿ, 3ಬಿ, 3ಎ, ಇತರ ಹಿಂದುಳಿದ ವರ್ಗ ಇತರೆ 1 ಲಕ್ಷದೊಳಗಿರಬೇಕು. ಅರ್ಜಿ ಸಲ್ಲಿಸುವ ಆಸಕ್ತ ವಿದ್ಯಾರ್ಥಿಗಳು ಇಲಾಖೆಯ ವೆಬ್‌ಸೈಟ್ www.bcwd.karnataka.gov.in ಸಂಪರ್ಕಿಸಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwd.hostels@karnataka.gov.in ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ ತಾಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದು. ತಾಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ www.bcwd.karnataka.gov.in ನೋಡಬಹುದು. ದೂ. 080–8050370006 ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಜೆಡಿಎಸ್ ಪಂಚರತ್ನ ರಥಯಾತ್ರೆಗೆ ಹೆಚ್.ಡಿ.ದೇವೇಗೌಡರಿಂದ ಚಾಲನೆ

ಮಳೆ ಕಾರಣ ವಾರ ಕಾಲ ಯಾತ್ರೆ ಮುಂದೂಡಿಕೆ



ಕೋಲಾರ, ನ.2– ಜೆಡಿಎಸ್ ಪಂಚರತ್ನ ರಥ ಯಾತ್ರೆಗೆ ಮಾಜಿ ಪ್ರಧಾನಮಂತ್ರಿ ಹೆಚ್.ಡಿ. ದೇವೇ ಗೌಡರು ಮಂಗಳವಾರ ಚಾಲನೆ ನೀಡಿದ್ದಾರೆ. ಆದರೆ ಮಳೆಯ ಕಾರಣ ಯತ್ರೆಯನ್ನು ಒಂದು ವಾರ ಕಾಲ ಮುಂದೂಡಲಾಗಿದೆ. ಮೂಡಣ ಬಾಗಿಲು ಕುರುಡು ಮಲೆಯ ಗಣಪತಿಗೆ ಭಾರೀ ಮಳೆ ನಡುವೆ ಹೋಮ, ಪೂಜೆ ಸಲ್ಲಿಸಿ ಜೆಡಿಎಸ್ ಮಹತ್ವಾಕಾಂಕ್ಷೆಯ ಪಂಚರತ್ನ ರಥಯಾತ್ರೆ ಹಾಗೂ ಚುನಾವಣಾ ಪ್ರಚಾರಕ್ಕೆ ಹೆಚ್.ಡಿ.ದೇವೇಗೌಡ ಅವರು ಅಧಿಕೃತವಾಗಿ ಚಾಲನೆ ನೀಡಿದರು.

ಎಚ್.ಡಿ.ಕುಮಾರಸ್ವಾಮಿ, ಅನಿತಾ ಕುಮಾರಸ್ವಾಮಿ ಸೇರಿದಂತೆ ಪಕ್ಷದ ಶಾಸಕರು, ಟಿಕೆಟ್ ಆಕಾಂಕ್ಷಿಗಳು ಕಾರ್ಯಕ್ರಮದಲ್ಲಿ ಭಾಗಿಯಾದರು. ಪಂಚರತ್ನ ಯೋಜನೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದ್ದು, ಇದಕ್ಕಾಗಿ ಸುಸಜ್ಜಿತ ವಾಹನ ಸಿದ್ದಪಡಿಸಲಾಗಿದೆ. ಯಾತ್ರೆಯ ಉಸ್ತುವಾರಿಯನ್ನು ಆಯಾಯ ಕ್ಷೇತ್ರಗಳ ಅಭ್ಯರ್ಥಿಗಳಿಗೆ ವಹಿಸಲಾಗಿದೆ. 1994ರಲ್ಲಿ ದೇವೇಗೌಡರ ನೇತೃತ್ವದಲ್ಲಿ ಮುಳಬಾಗಿಲು ತಾಲೂಕಿನ ಕುರುಡು ಮಲೆಯ ಗಣಪತಿಗೆ ಪೂಜೆ ಸಲ್ಲಿಸಿ ಚುನಾವಣಾ ಪ್ರಚಾರವನ್ನು ಆರಂಭಿಸಲಾಗಿತ್ತು. ಆಗ ಪಕ್ಷ ಅಧಿಕಾರಕ್ಕೆ ಬಂದಿತ್ತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
Required Salesman for cosmetic and General Goods, Good Salary and Incentives. Age 18 to 25 years. Contact:
9620682983 / 6362105435

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ಓವೆನ್, LED, LCD, AC Sales & Service
Contact: Srinivas
9379699229

Automatic Water Level
SALES & SERVICE
2 YEAR WARRANTY
SUN POWER SOLUTIONS
Yeraganahalli, Mysore
9739804444

ಮನೆ ಮಾರಾಟಕ್ಕೆ /ಭೋಗ್ಯಕ್ಕೆ ಇದೆ
25x30 3 ಫ್ಲೋರ್
ನಂ.182, 4ನೇ ಕ್ರಾಸ್, ನಿಮಿಷಾಂಬ ನಗರ, ಜ್ಯೋತಿ ಸ್ಕೂಲ್ ಹತ್ತಿರ, ಕುವೆಂಪುನಗರ, ಮೈಸೂರು
9880627177
8095152315

ಬೇಕಾಗಿದ್ದಾರೆ
ಅಡುಗೆ ಕೆಲಸ, ಮನೆ ಕೆಲಸ ಮತ್ತು ವೃದ್ಧರನ್ನು ನೋಡಿಕೊಳ್ಳಲು ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
9900901073 / 7795271641

ಹೋಂನರ್ಸಿಂಗ್ ಕೆಲಸ
ಅನುಭವ ಇರುವ / ಇಲ್ಲದಿರುವ ಯುವಕರು, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು 8 hr ಹಾಗೂ 24 hr ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ. ಊಟ, ವಸತಿ ಉಚಿತದೊಂದಿಗೆ ಸಂಬಳ 12000 – 23000 ರವರೆಗೆ (ಆಧಾರ್ ಕಾರ್ಡ್ & ಫೋಟೋ ಕಡ್ಡಾಯ).
ಅಗ್ರಹಾರ : 9035113222

ಬೇಕಾಗಿದ್ದಾರೆ
ಅಕೌಂಟೆಂಟ್
ಟ್ಯಾಲಿ & ಜಿಎಸ್‌ಟಿ ಕಲಿತಿರಬೇಕು
ಸಂಬಳ: 15,000/–
ಅನುಭವ ಇರುವವರಿಗೆ ಆದ್ಯತೆ
ಜೈಭಾರತ್ ಮಾರ್ಕೆಟಿಂಗ್
ಅಶೋಕ ರೋಡ್, ಮೈಸೂರು
Call: 9741825653

TV ಕೆಟ್ಟಿದೆಯೇ?
LCD, LED TV
ಫ್ರಿಡ್ಜ್, ವಾಷಿಂಗ್ ಮೇಷಿನ್, Micro Oven
Doorstep ಸರ್ವೀಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವೀಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

ಮಂಟಪ ಮನೆ
ನಮ್ಮಲ್ಲಿ ಬೀಟೆ, ಹಲಸು ಮರಗಳಿಂದ ತಯಾರಾದ ಮಂದಾಸನ, ಪೂಜಾ ಮಂಟಪಗಳು ಸುಲಭ ಕಂತುಗಳಲ್ಲಿ ದೊರೆಯುತ್ತದೆ.
ಶ್ರೀನಗರ, ಮೈಸೂರು
9448207634
9036742526

ಕಾರ್ನರ್ 2 ಸೈಟು ಮಾರಾಟಕ್ಕಿದೆ
1) ಬೈರವೇಶ್ವರ ನಗರದ ಹತ್ತಿರ,
2) ಅಂಕಮ್ಮನವರ ದೇವಸ್ಥಾನ ಹಿಂದೆ (ಹೆಬ್ಬಾಳ್ 1ನೇ ಹಂತ)
1) 40x20 ಕಾರ್ನರ್ ಸೈಟ್
2) 40x50 ಕಾರ್ನರ್ ಸೈಟ್
ಕೂಡಲೇ ಸಂಪರ್ಕಿಸಿ:
9611135796

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು, ಸಂಬಳ: 16,000+W/o (8hrs) ಊಟ ತಿಂಡಿ ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819
9880727819

ಸೈಟು ಮಾರಾಟಕ್ಕಿದೆ
ರೂಪನಗರದ ಪ್ರಮುಖ ಜಾಗದಲ್ಲಿ ಮೂಲೆ ನಿವೇಶನ South west Facing 40x50 ಮಾರಾಟಕ್ಕಿದೆ. ರೂಪ ಭಂಡಾರ್ ಹತ್ತಿರ.
No Brokers, Contact:
7899593402

ಬೈಕ್ ರೈಡರ್ ಬೇಕಾಗಿದ್ದಾರೆ
rapido BIKE TAXI
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು ಡಿ.ಎಲ್, ವಾಹನದ ದಾಖಲೆಗಳು ಮತ್ತು ಆಧಾರ್ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
04045209698

ಶ್ರೀ ಮಹಾಕಾಳಿ ಜ್ಯೋತಿಷ್ಯರು
ನಿಮ್ಮೆಲ್ಲಾ ಸಮಸ್ಯೆಗಳಿಗೆ ಕಾಳಿದೇವಿಯ ಸರ್ವಸಿದ್ಧಿ ಪೂಜಾ ಶಕ್ತಿಯಿಂದ ಶಾಶ್ವತ ಪರಿಹಾರ. ಮದುವೆ ಸಮಸ್ಯೆ, ಹಣದ ಸಮಸ್ಯೆ, ಪ್ರೀತಿಯ ಸಮಸ್ಯೆ, ಉದ್ಯೋಗದ ಸಮಸ್ಯೆ, ಗಂಡ–ಹೆಂಡತಿ ಕಲಹ.
ಪ್ರಧಾನ ಜ್ಯೋತಿಷಿ ಹನುಮಂತರಾವ್
Mob: 9686487402

GOLDEN OPPORTUNITY
We Hire retired State & Central Govt., officials, homemakers, businessmen for the post of Agency Partner in AAA Grade reputed Organisation, Mysore. Benefits include handful Salary and Incentives. Contact:
7795039992/9448376423

WANTED
Typist, DTP
ಕೆಲಸಕ್ಕೆ
ಇಂಗ್ಲೀಷ್ & ಕನ್ನಡ
ಜಯನಗರ
9844242414

2BHK-10 Sq on 30X40
Proposed Bldg/41 lakhs (ICIC Loans)
Dwn Pmnt-21 Lakhs.
Trimurty Ngr, Nr. St Josheph Central School, HUNSUR Rd.
Only Site Available
9886697052

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 40 ವರ್ಷ, ವಿದ್ಯಾರ್ಹತೆ: 7 ರಿಂದ PUC ಮತ್ತು ITI, ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ರೂಂಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ:
9480404036

ಬೇಕಾಗಿದ್ದಾರೆ
ಸಂಸಾರ ಹೊಂದಿರುವ ನುರಿತ ಡ್ರೈವರ್ ಬೇಕಾಗಿದ್ದಾರೆ. ಉಚಿತ ವಸತಿ ಸೌಲಭ್ಯವಿರುತ್ತದೆ. ಕೆಲಸ ಮಾಡುವ ಸ್ಥಳ ಜಯಲಕ್ಷ್ಮಿಪುರಂ, ಕೂಡಲೇ ಸಂಪರ್ಕಿಸಿ:
9945815778

ಶ್ರೀ ಚನ್ನಿನಾ ಪವಮಲ್ಲೇಶ್ವರಿ ಜ್ಯೋತಿಷ್ಯಾಲಯ ಪಂಡಿತ್. ಭೀಮರಾವ್
ಬೇರೆ ಯಾರಾದರೂ ಮಾಡಿಕೊಟ್ಟಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು. ಸಾಲ ಬಾಧೆ, ದಾಂಪತ್ಯ ಸಮಸ್ಯೆ, ಪ್ರೇಮ ವಿಚಾರ, ಅತ್ತೆ ಸೊಸೆ ಕಲಹ, ಲೈಂಗಿಕ ಸಮಸ್ಯೆ ಇನ್ನೂ ಅನೇಕ ಗುಪ್ತ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ 100% ಶಾಶ್ವತ ಪರಿಹಾರ
9972196728
ವಿಳಾಸ: 806, 3ನೇ ಹಂತ, ಆದಿತ್ಯ ಆಸ್ಪತ್ರೆ ಹತ್ತಿರ, ಗೋಕುಲಂ, ಮೈಸೂರು.

GOLD COMPANY
ಗಿರವಿ ಚಿನ್ನಾಭರಣ ಖರೀದಿ ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ
ಕೂಡಲೇ ಸಂಪರ್ಕಿಸಿ – (T&C)
9964522225

ಬೋಳು ತಲೆಯ ಸಮಸ್ಯೆಯೇ?
ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಶ್ರೀ ಗುರು ದತ್ತಾತ್ರೇಯ ಜ್ಯೋತಿಷ್ಯ ಮಂದಿರ ಪಂಡಿತ ಗುರುದತ್ತ ಭಟ್
ಗುರುವಿನ ದೈವ ಶಕ್ತಿ ಜ್ಯೋತಿಷರು
ನಿಮ್ಮ ಜನ್ಮ ದಿನಾಂಕ ಸಮಯದ ಆಧಾರದಿಂದ ಜಾತಕ ನೋಡಿ ಕುಟುಂಬದ ಸಂಪೂರ್ಣ ಭವಿಷ್ಯ ನುಡಿಯುವ ಏಕೈಕ ಜೋತಿಷ್ಯರು, ನಿಮ್ಮ ಜೀವನದಲ್ಲಿ ಅನುಭವಿಸುವ ಸಂಕಷ್ಟಗಳಿಗೆ ದತ್ತಾತ್ರೇಯ ಸ್ವಾಮಿ ಅನುಗ್ರಹದಿಂದ ಪರಿಹಾರ ಶತಸಿದ್ಧ. ಚಿಂತಿಸ ಬೇಡಿ, ಇಂದೇ ಕರೆ ಮಾಡಿ.
9686315566
ಮನೆ ವಿಳಾಸ: #1381, ಸುಯೋಗ ಆಸ್ಪತ್ರೆ ಪಕ್ಕ, ರಾಮಕೃಷ್ಣನಗರ, ಮೈಸೂರು.
ಇದು ಚಮತ್ಕಾರ ಅಲ್ಲ ಸಿದ್ಧಿ ಸಾಧಕರ ಸಾಧನೆ

ಬೇಕಾಗಿದ್ದಾರೆ
ದಿನಸಿ ಅಂಗಡಿಗೆ ಹುಡುಗರು–2 ಹುದ್ದೆ
ಬಾಲಕೃಷ್ಣ ರೈಸ್ ಕಾರ್ನರ್
23ಎಫ್, 3ನೇ ಹಂತ, ಇಂಡಸ್ಟ್ರಿಯಲ್ ಸಬರ್ಬ್ ದಕ್ಷಿಣ ಮೈಸೂರು, ಮೈಸೂರು–08
Ph.: 9986756866

ತಕ್ಷಣ ಬೇಕಾಗಿದ್ದಾರೆ
ಬನ್ನೂರು ರಸ್ತೆಯ ಮೆಲ್ಲಹಳ್ಳಿ ಮತ್ತು ರಂಗ ಸಮುದ್ರ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು, ಸಂಬಳ: 15,000/–, ESI ಮತ್ತು PF ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620667819
9880727819

ಕಳೆದಿದೆ
ಲಕ್ಕಪ್ಪ.ಬಿ.ಎನ್ ಆದ ನಾನು ಮನೆ ನಂ. 959, 1ನೇ ಕ್ರಾಸ್, ಅಗ್ನಿ ಹಂಸ ರಸ್ತೆ, ಕುವೆಂಪುನಗರ ಮೈಸೂರು ನಲ್ಲಿ ವಾಸವಾಗಿದ್ದು, ಈ ಸ್ವತ್ತಿನ ಮೂಲ ಮಂಜೂರಾತಿ ಪತ್ರ ಕಳೆದುಹೋಗಿದೆ. ಸಿಕ್ಕವರು ಕೂಡಲೇ ಸಂಪರ್ಕಿಸಿ:
9738364823

FARM PLOT DTCP/RERA/Aprvd ತೋಟದ ಮನೆ
100x80 @ Just 36 Lkhs.
On Proposed B'lore-Madikeri-Manglore Highway. (Avail Bank Loan)
Few plots only - 9886697052

ತಕ್ಷಣ ಬೇಕಾಗಿದ್ದಾರೆ
PART TIME /FULL TIME/ HOME -BASED
ecode GAS SAFEಗೆ All Taluk & Dist

EDUCATION ವಿದ್ಯಾರ್ಹತೆ	WORK TIME ಕೆಲಸದ ಸಮಯ	SALARY ಸಂಬಳ
SSLC,PUC any DEEGREE	4 HOURS 8 HOURS	8000/- UP TO 19000/-

ಮೊದಲು ಬಂದವರಿಗೆ ಆದ್ಯತೆ ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226 / 7676779932

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್ & ಸರ್ವಿಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಬೇಕಾಗಿದ್ದಾರೆ
ರೂಂ ಬಾಯ್ಸ್–2 ಹುದ್ದೆ
ಶ್ರೀ ಗಣೇಶ್ ಪ್ರಸಾದ್ ಲಾಡ್ಜ್
1096, ಶಿವರಾಂಪೇಟೆ ಮುಖ್ಯರಸ್ತೆ ಮೈಸೂರು–570001
Ph.: 9986756866

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

ಬೇಕಾಗಿದ್ದಾರೆ
ವೆಜ್ ಹೋಟೆಲ್‌ಗೆ ಕ್ಲೀನಿಂಗ್ ಕೆಲಸಕ್ಕೆ ಹಾಗೂ ಸಪ್ಲೇಯರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ರೂಂ ವ್ಯವಸ್ಥೆ ಇದೆ.
7795518038 / 8884208814

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

HOUSE FOR LEASE
20x30 ಮೊದಲ ಅಂತಸ್ತಿನ ಮನೆ ಬೋಗ್ಯಕ್ಕೆ ಇದೆ. (2 BHK), ವಿಜಯನಗರ 4ನೇ ಸ್ಟೇಜ್, ಮೈಸೂರು. ಸಂಪರ್ಕಿಸಿ:
Mob: 6366001419

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ದೇವಾಂಗ
ಕುಲಬಾಂಧವರನೆಲ್ಲಾ ಒಂದೇ ವೇದಿಕೆಯಲ್ಲಿ ಸೇರಿಸಿ ಪರಿಣಾಮಕಾರಿ ನಿರಂತರ ಕಾರ್ಯಕ್ರಮಗಳನ್ನು ರೂಪಿಸಿ ಸಮಾಜದ ಮುನ್ನಡೆಗೆ ತರುವ ಸಲುವಾಗಿ 12.11.2022 ನೇ ಶನಿವಾರ ಸಭೆ ಕರೆಯಲಾಗಿದ್ದು, ಸಂಘಟನೆಗೆ ಒತ್ತು ನೀಡುವ ಆಸಕ್ತಿಯುಳ್ಳ ಅಭಿವೃದ್ಧಿ ಪರ ಕೆಲಸ ಮಾಡುವ ನಿಷ್ಠಾವಂತ, ಪ್ರಾಮಾಣಿಕತೆಗೆ ಸ್ಪಂದಿಸುವವರು ಸಭೆಗೆ ಆಗಮಿಸಿ ತಮ್ಮ ಸಲಹೆ ನೀಡುವುದು.
9844058155

CHANGE OF NAME
I, Jayanna H.L S/o Lingappa, Resident of # 4/2, 3rd Stage, 2nd Cross, Papanna Layout, Yaraganahalli, Mysore - 570011, have changed my name to Jaidev H.L vide on affidavit sworn on 01-11-2022 before Smt. M.Geetha, Mysore.
Sd/- Jaidev H.L

ಬೇಕಾಗಿದ್ದಾರೆ
40 ಕಿ.ಮೀ. ದೂರವಿರುವ ಹೆಚ್.ಡಿ. ಕೋಟೆ ರಸ್ತೆಯಲ್ಲಿರುವ ರೆಸಾರ್ಟ್‌ಗೆ ನಾರ್ಥ್ / ಸೌತ್ ಇಂಡಿಯನ್ ಅಡುಗೆ ಮಾಡಲು ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 6361240024

ಮನೆ ಭೋಗ್ಯಕ್ಕಿದೆ
3BHK 9 ಲಕ್ಷ, ದಾಸನಕೊಪ್ಪಲು, ರೂಪನಗರ, ಭೋಗಾದಿ. ಕಾರ್ ಪಾರ್ಕಿಂಗ್, ಸೌಲಭ್ಯವಿದೆ.
30x40, W/F 48 ಲಕ್ಷ, ನ್ಯಾಯಾಂಗ ಬಡಾವಣೆ, ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ, ಮೈಸೂರು.
9986856999 / 9845765573

WANTED
Field Technician, ITI Turner, Fitter, PUC, SSLC fresher, two wheeler must. Backend Office Work, female.
M/s. A.P. Solutions, Mysore
9845110140, 0821-2333333

ವಧು ಬೇಕಾಗಿದೆ
ಶಿವಳ್ಳಿ ಬ್ರಾಹ್ಮಣ, ಸ್ವಂತ ಮನೆ, 4 ಎಕರೆ, 4 ಗುಂಟೆ ಅಡಿಕೆ ತೋಟ, 2 ಕಾರುಗಳು, ವಾರ್ಷಿಕ 24 ಲಕ್ಷ ಆದಾಯ ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆಸಿರುವ ವರನಿಗೆ ಬಡತನದ ಅನಾಥ ಮಕ್ಕಳಿಲ್ಲದ 30 ರಿಂದ 35 ವಯಸ್ಸಿನ ಒಳಗಿನ ವೀರಶೈವ ಲಿಂಗಾಯತರು, ಜೈನರು, ಆರ್ಯವೈಶ್ಯರು ವಿಶ್ವಕರ್ಮರು ಬ್ರಾಹ್ಮಣ ಜಾತಿಯ ವಿಧವೆ ಅಥವಾ ವಿಚ್ಛೇದಿತೆ ಮಾತ್ರ ನೇರವಾಗಿ ಸಂಪರ್ಕಿಸತಕ್ಕದ್ದು. ಮದುವೆಯ ಸಂಪೂರ್ಣ ಖರ್ಚು ವೆಚ್ಚಗಳು ವರನ ಮನೆಯಿಂದಲೇ ಭರಿಸಲಾಗುತ್ತದೆ. 30 ರಿಂದ 35 ವಯಸ್ಸಿನ ಒಳಗಿನ ಮಕ್ಕಳಿಲ್ಲದ ಅನಾಥ ಬಡತನದ ವಿಧವೆಯರಿಗೆ ಮೊದಲ ಆದ್ಯತೆ. ಕಡ್ಡಾಯವಾಗಿ ಮಕ್ಕಳಿಲ್ಲದ ಬಡತನದ ಅನಾಥ ವಿಚ್ಛೇದಿತೆ ವಿಧವೆಯರು ಮಾತ್ರ ನೇರವಾಗಿ ಸಂಪರ್ಕಿಸುವುದು.
Mob: 6366125016

20x30 SITE
For Sale - 16.5 Lakhs
20x30 Home - 36 Lakhs
(MUDA, Near Belvadi, Close to Highway).
Mob: 9538525456

ಸೈಟ್ ಫಾರ್ ಸೇಲ್
ಜೆ.ಪಿ.ನಗರ ರಿಂಗ್ ರೋಡ್ ನಿಂದ 5 ಕಿ.ಮೀ ದೂರದ ದಡದಹಳ್ಳಿ ಜ್ಞಾನಭಾರತಿ ಲೇ ಔಟ್ ಮುಡಾ ಖಾತೆ. ಈಸ್ಟ್ ಫೇಸಿಂಗ್ ಸೈಟ್ ರೂ.1900 ಚ.ಅಡಿಗೆ ಮತ್ತು ಸೌತ್ ಈಸ್ಟ್ ಫೇಸಿಂಗ್ ಸೈಟ್ ರೂ.2100 ಚ.ಅಡಿಗೆ
9342123373

ಒಕ್ಕಲಿಗ ಕಲ್ಯಾಣೋತ್ಸವ - 2022
ಮದುವೆ ಈಗ ಸುಲಭ ನಿಮ್ಮ Choice ಗೆ ರೈಟ್ Opportunity ನಿಮ್ಮ ಹುಡುಕಾಟಕ್ಕೆ ಉತ್ತಮ ದಾರಿ ರಾಯಲ್ ಇವೆಂಟ್ ಕಂಪನಿ ರವರ 10ನೇ ಯಶಸ್ವಿ ಮೆಗಾ ಮ್ಯಾಟ್ರಿಮೊನಿ ಮೀಟ್, ಈ ಬಾರಿ ಒಕ್ಕಲಿಗ ಸಮುದಾಯಕ್ಕೆ ಮೈಸೂರಿನಲ್ಲಿ ಒಂದೇ ವೇದಿಕೆಯಲ್ಲಿ ನೂರಾರು ವಧು–ವರರ ಅನ್ವೇಷಣೆ, ಸ್ಥಳದಲ್ಲೇ ಜ್ಯೋತಿಷ್ಯ ನೋಡೋ ಅವಕಾಶ. ದಿನಾಂಕ 11–12–2022, ನೋಂದಣಿ ಪ್ರಾರಂಭವಾಗಿದೆ. ಮೊದಲು ಬಂದವರಿಗೆ ಆದ್ಯತೆ. ಸಂಪರ್ಕಿಸಿ:
8618253781 / 6363517977

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ವಾಣಿಜ್ಯ ಅಂಗಡಿ ಮಳಿಗೆ 30x40 ಅಳತೆ ಬಾಡಿಗೆಗೆ ದೊರೆಯುತ್ತದೆ
80 ಅಡಿ ರಸ್ತೆ – ನಂ. 506, ಹಾಲಿನ ಬೂತ್ ಎದುರು, ದಟ್ಟಗಳ್ಳಿ.
9448959138
9071366589

REQUIRED FOR A RESTAURANT IN MYSORE
Cooks - Indian, Chinese, Tandoor and 1 Allrounder, Kitchen Supervisor, Captain. Interested Candidates can call us on
9880308790

ಕೇರಳ ಶ್ರೀ ಭಗವತಿ ಮಹಾಮಾಂತ್ರಿಕ ಜ್ಯೋತಿಷ್ಯರು ಪಂಡಿತ್ ಗುರುನಂದನ್
ಮೊ.: 9353250462
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ನಿಮ್ಮ ಸಮಸ್ಯೆಗಳಾದ ಪ್ರೇಮ ವಿವಾಹ, ಪತಿ–ಪತ್ನಿ ಕಲಹ, ವ್ಯಾಪಾರ, ಡೈವರ್ಸ್, ಸಾಲಭಾದೆ, ಶತ್ರುಕಾಟ, ಲೈಂಗಿಕ ಸಮಸ್ಯೆ, ಸಂತಾನ ಫಲ, ಮದುವೆ ಕಾರ್ಯದಲ್ಲಿ ವಿಘ್ನ, ಅತ್ತೆ, ಸೊಸೆ ಕಲಹ, ನಿಮ್ಮ ಮನದಾಳದ ಯಾವುದೇ ಗುಪ್ತ ಸಮಸ್ಯೆ ಇದ್ದರೆ ಜೀವನದಲ್ಲಿ ಜಿಗುಪ್ಸೆ ಹೊಂದಿದ್ದರೆ ಕೂಡಲೇ ಸಂಪರ್ಕಿಸಿ 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ನಿಮ್ಮ ಸಮಸ್ಯೆಗಳಿಗೆ ಫೋನಿನ ಮೂಲಕ ಸಂಪರ್ಕಿಸಿ. ವಿಳಾಸ ಮೈಸೂರು

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರಿಗೆ ನೇರ ಸಂಪರ್ಕಿಸಿ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ನಮ್ಮ ಬ್ರ್ಯಾಂಚ್ ಮಾಡಲು & ಏಜೆಂಟರು ಸಮಾಜ ಸೇವಾ ಮನೋಭಾವದವರು ಬೇಕಾಗಿದ್ದಾರೆ. ಬಿಜನೆಸ್ ಪಾರ್ಟ್‌ನರ್ ಬೇಕು ಅಧಿಕ ಲಾಭ ಪಡೆಯಿರಿ.
ನೇರ ಸಂಪರ್ಕಿಸಿ: ಡಾ.ಗುರೂಜಿ ಮೈಸೂರು
6361740552

ಶ್ರೀ ಗೌರಿಶಂಕರ ಟ್ರಾವೆಲ್ಸ್
10–11–22 (4 ದಿನ):– ಬಾಂಬೆ, ಶಿರಡಿ, ನಾಸಿಕ್, ಎಲ್ಲೋರ, ತ್ರಯಂಬಕೇಶ್ವರ, ಘೃಷ್ಣೇಶ್ವರ, ಭೀಮಶಂಕರ.
18–12–22 (1 ದಿನ):– ಕೋಟಿಲಿಂಗ, ಘಾಟಿ ಸುಬ್ರಮ್ಮಣ್ಯ, ಚಿಕ್ಕ ತಿರುಪತಿ.
24–12–22 (6 ದಿನ):– ಗುರುವಾಯೂರು, ಮುನ್ನಾರ್, ತ್ರಿವೆಂಡ್ರಂ, ಆಲಪ್ಪಿ, ಕೊಚಿನ್ ಇತ್ಯಾದಿ.
ವಿಮಾನ / ಬಸ್ / ರೂಂ / ಊಟ
9620002114

HOUSE FOR SALE
20x30 G+ Duplex, East Facing in Srirampura, Mathrushree Badavande, Ring Road, Attached Layout. 75 Lakhs (Nego.)
Contact:
9739703467

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿ ಕೊಡಲಾಗುತ್ತದೆ.
ಒಂದು ಚದರಕ್ಕೆ 1,60,000/–
*ಷರತ್ತು ಅನ್ವಯ
ಸ್ವಾಮಿ ಎಂ. ಸಿವಿಲ್ ಕಂಟ್ರಾಕ್ಟರ್
9945442361
9380885787

IMMEDIATE HIRING
Post : Front Office, Technician, Qualification: 7th, 10th, PUC, Diploma, ITI Any Degree (Pass or Fail), Salary: 15,000 - 30,000, Age Limit: 35 Below, Applicable for Male Candidates Only. Contact:
9880151303 / 6366638189

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸಂಬಳ (8000 ದಿಂದ 10,000 ರವರೆಗೆ) Team Leader ಬೇಕಾಗಿದ್ದಾರೆ (ಕಂಪ್ಯೂಟರ್ ಜ್ಞಾನವುಳ್ಳವರು) ಸಂಬಳ: 10,000. ಸ್ಥಳ: ಎನ್.ಆರ್.ಮೊಹಲ್ಲಾ ಮತ್ತು ಚಾಮುಂಡಿಪುರಂ. GTR Hotel ಹತ್ತಿರ
8150005111

WANTED
For Pharma Distributor
Male Staff - 5
Lady Staff - 5
SSLC / PUC Pass /Fail with or without Experience
9986108208
9739377827

RS CONSTRUCTIONS ENGINEERS & CONTRACTORS
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ
9538575009 / 7019151884

ಬೇಕಾಗಿದ್ದಾರೆ
32 ವರ್ಷದ ಗೌಡ ಸಮುದಾಯದ ವರನಿಗೆ ವಧು ಬೇಕಾಗಿದೆ.
Contact by Ravi Gowda
8762916155

ನಿವೃತ್ತ ನೌಕರರಿಗೆ ಉದ್ಯೋಗವಕಾಶದ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benefits: 1) Fixed Salary + PF+ ESI+ ಇತರೆ ಭತ್ಯೆಗಳು ಲಭ್ಯವಿರುತ್ತದೆ. age above 35 years. ಬೇಕಾಗಿರುವ ದಾಖಲಾತಿಗಳು: 1) ಫೋಟೋ–2, (ಪಾಸ್‌ಪೋರ್ಟ್ ಸೈಜ್), 2) ಪಾನ್ ಕಾರ್ಡ್, 3) ಆಧಾರ್ ಕಾರ್ಡ್, 4) ವಿದ್ಯಾರ್ಹತೆ ದಾಖಲೆಗಳು, 5) ಬ್ಯಾಂಕ್ ಪಾಸ್ ಪುಸ್ತಕ (1st Page) ಸ್ಥಳ: ಮೌರ್ಯ ರೆಸಿಡೆನ್ಸಿ, ಶ್ರೀ ಹರ್ಷ ರಸ್ತೆ, ಮೈಸೂರು. ದಿನಾಂಕ: 05.11.2022, ಸಮಯ: ಬೆಳಿಗ್ಗೆ 11 ಗಂಟೆಗೆ Followed by Lunch
9449068132 / 8073004518

ಬೇಕಾಗಿದ್ದಾರೆ
ಬಲ್ಲಾಳ್ ಸರ್ಕಲ್ ಬಳಿಯ ಪ್ರತಿಷ್ಠಿತ ರೆಸ್ಟೋರೆಂಟ್ ಒಂದಕ್ಕೆ ಪಾರ್ಸೆಲ್ ಕಟ್ಟುವ ಇಡ್ಲಿ ವಡೆ ಹಾಕಲು ಅನುಭವ ಇರುವ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ:
9900661620

ಹೊಸ ಮನೆ ಮಾರಾಟಕ್ಕಿದೆ
1,400 ಅಡಿ ಹೊಸ ಮನೆ ಹಾಗೂ ಸೈಟುಗಳು ಮಾರಾಟಕ್ಕಿವೆ. ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
8050345574

ಮನೆ ಮಾರಾಟಕ್ಕಿದೆ
ದಟ್ಟಗಳ್ಳಿ 3ನೇ ಹಂತದಲ್ಲಿ 20x30 ಅಳತೆಯ 3 ಅಂತಸ್ತಿನ 4 ವಿಶಾಲವಾದ ಬೆಡ್ ರೂಂವುಳ್ಳ ಮನೆ ಮಾರಾಟಕ್ಕಿದೆ.
negotiable
9741134707

ವಿಮಾನದಲ್ಲಿ ಕಾಶಿ & ವೈಷ್ಣೋದೇವಿ ಯಾತ್ರೆ.
24/11/2022. 14 ದಿನಗಳು, ಕಾಶಿ, ಅಲಹಾಬಾದ್, ಅಯೋಧ್ಯ, ರುಶಿಕೇಶ, ಹರಿದ್ವಾರ, ವೈಷ್ಣೋದೇವಿ. ಜಮ್ಮು ಅಮೃತಸರ, ಕುರುಕ್ಷೇತ್ರ, ದೆಹಲಿ, ಮಥುರಾ ಬೃಂದಾವನ ಆಗ್ರಾ ಇತ್ಯಾದಿ ಊಟ, ಎಸಿ ಕೊಠಡಿ. ಎಸಿ ಬಸ್ ಎಲ್ಲಾ ಪ್ರವೇಶ ಟಿಕೇಟ್‌ನಲ್ಲಿ ಸೇರಿದೆ. ಸಂಪರ್ಕಿಸಿ: ಮಾರ್ವೆಲ್ ಟೂರ್ಸ್ & ಟ್ರಾವೆಲ್ಸ್, ನಜರ್‌ಬಾದ್, ಮೈಸೂರು.
9342118682 / 9449128682

PRINT MEDIA SOLUTION COUCHING CENTRE
(Nudi Typing + Corel Draw + Photoshop) for more details contact:
8105363691
9380835891

EXCELLENT OPPORTUNITY
Govt. Recognised Financial Institution looking for hiring Retired officials, Teachers, Bank Employees, House wives, Young and Energetic Unemployeed you can earn handsome amount and rewards without any investement your valueble time & Sincere effacts will take you a long way. "Please Do not Miss" you may please contact: Satish H C
7411259365 / 8861918556

ಕಳೆದಿದೆ
ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ಟೌನ್, 21ನೇ ವಾರ್ಡ್, ದುಂದಾಸನಪುರ ಇಲ್ಲಿ ವಾಸವಾಗಿರುವ ಲೇ॥ಡಿ.ಎನ್.ಮಾದಪ್ಪನವರ ಮಗನಾದ ಎಂ.ಶಿವನಂಜಪ್ಪ ಆದ ನನಗೆ ಸೇರಿದ ಸರ್ವೆ ನಂ. 46/1, 46/2, 47/1, 47/2 ರ ಜಮೀನಿನ ಮೂಲ ಕ್ರಯಪತ್ರಗಳು ಮತ್ತು ವಿಭಾಗಪತ್ರಗಳು ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಕಳೆದು ಹೋಗಿರುತ್ತದೆ. ಸಿಕ್ಕವರು ಮೇಲ್ಕಂಡ ವಿಳಾಸಕ್ಕೆ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಲುಪಿಸುವಂತೆ ಕೋರಲಾಗಿದೆ.
ಸಹಿ/– ಎಂ.ಶಿವನಂಜಪ್ಪ

ತಕ್ಷಣ ಬೇಕಾಗಿದ್ದಾರೆ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree Pass / Fail ಆದವರಿಗೆ Packing, Helper, Checking, Maintenance, Billings, Front office Telephone attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000–39000 (ESI+PF+OT) ಸೇರಿ
7676939277 / 9353753194

WANTED
Lady Computer Operater with PUC Qualification and Office Boy with PUC, at Dattagalli, Mysore Office.
6363743857

ಹೊಸ ಚೀಟಿಗಳ ಪ್ರಾರಂಭ
ಸೀಜಿ ನರಸಿಂಹಸ್ವಾಮಿ ಚಿಟ್ಸ್ (ಕಂ) ಪ್ರೈಲಿ., ಮೈಸೂರು / ಹಾಸನ.

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

ಮೈಸೂರು ಮಿತ್ರ ಗುರುವಾರ 3, ನವೆಂಬರ್ 2022

ಮಂಡ್ಯ ವಿವಿಯಲ್ಲಿ ನಾಲ್ವಡಿ ನೆನಪೋತ್ಸವ



ಮಂಡ್ಯ,ನ.2– ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ನೀಡಿದಂಥ ಆಡಳಿತ ಮರೆಯಲು ಸಾಧ್ಯವಿಲ್ಲ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಮ್ ರಾಯಪುರ ತಿಳಿಸಿದರು.

ನಗರದ ಮಂಡ್ಯ ವಿಶ್ವವಿದ್ಯಾಲಯ ಆವರಣದಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನೆನಪೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಣ್ಣ ಪ್ರಾಂತ್ಯವಾಗಿದ್ದ ಮೈಸೂರು ರಾಜ್ಯವನ್ನು ರಾಜರ ಆಳ್ವಿಕೆಗೆ ನೀಡಲು ಬ್ರಿಟಿಷರು ತಮ್ಮ ನೇರ ಆಡಳಿತಕ್ಕೆ ಒಳಪಡಿಸಿದರು. ಈ ಕಾಲ ಘಟ್ಟದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರು ನೆನಪಿಸಿಕೊಳ್ಳುವಂತಹ ಆಡಳಿತವನ್ನು ಕೊಟ್ಟಿದ್ದನ್ನು ಇಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಸ್ಮರಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸಂಘ–ಸಂಸ್ಥೆಗಳನ್ನು ಹುಟ್ಟು ಹಾಕಿದರು. ಆರೋಗ್ಯ, ಶಿಕ್ಷಣ, ಕೃಷಿಗೆ ಹೆಚ್ಚು ಒತ್ತು ನೀಡಿದ್ದರು. ಕನ್ನಂಬಾಡಿ ಅಣೆಕಟ್ಟೆ ಕಟ್ಟಲು ನಡೆಸಿದ ಪೂರ್ವ ಸಿದ್ಧತೆ ಮರೆಯುವ ಹಾಗಿಲ್ಲ. ಇದರಲ್ಲಿ ಅವರ ಪತ್ನಿಯ ಒಡವೆಗಳನ್ನು ಕೊಡುವುದು ಸೇರಿದಂತೆ ಅವರ ಕುಟುಂಬದ ತ್ಯಾಗ ಜನಮಾನಸದಲ್ಲಿ ಉಳಿಯುವಂತೆ ಮಾಡಿರುವುದು ಶ್ಲಾಘನೀಯ ಎಂದು ಬಣ್ಣಿಸಿದರು.

ಪ್ರಾಂಶುಪಾಲ ಮ.ರಾಮಕೃಷ್ಣ ಮಾತನಾಡಿ, ಮೈಸೂರು ಆಡಳಿತದ ಅವಧಿಯಲ್ಲಿ ಉದ್ಯೋಗವು ಶೇ.70ರಷ್ಟು ಬ್ರಾಹ್ಮಣರಿಗೆ ಸಿಗುತ್ತಿದ್ದದ್ದನ್ನು ಮತ್ತೆ ಪರಿಶೀಲಿಸಿ ಎಲ್ಲ ವರ್ಗದವರಿಗೂ ಸಮಾನ ಅವಕಾಶ ಸಿಗಬೇಕು ಎಂಬುದನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸಮಸಮಾಜ ಕಟ್ಟುವಲ್ಲಿ ನಿರತರಾಗಿದ್ದರು. ಮಹಾರಾಣಿಯರ ಒಡವೆಗಳನ್ನು ಅಂದಿನ ಮುಂಬೈ ಪ್ರಾಂತ್ಯದಲ್ಲಿ ಮಾರಾಟ ಮಾಡುವ ಮೂಲಕ ಕನ್ನಂಬಾಡಿ ಕಟ್ಟೆ ಕಟ್ಟಲು ಹಣ ಸಂಗ್ರಹಿಸಲಾಯಿತು ಎಂದು ನೆನಪಿಸಿಕೊಂಡರು.

ಸಮಾನತೆಯ ತತ್ವ ಸಾರಿದ ಮಹನೀಯ ಎಂದರೆ ಅದು ನಾಲ್ವಡಿ ಕೃಷ್ಣರಾಜ ಒಡೆಯರ್. ಬ್ರಿಟಿಷರ ಸಮನಾಗಿ ಅವರ ಎದುರು ಕುರ್ಚಿಗಳನ್ನು ಹಾಕಿ ಪ್ರಜೆಗಳನ್ನು ಕೂರಿಸುವುದರ ಮೂಲಕ ಸಮಾನತೆ ಸಾರಿದ್ದರು ಎಂದು ತಿಳಿಸಿದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶಗೌಡ, ಟ್ರಸ್ಟ್‌ನ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್, ವಿವಿ ಕುಲಪತಿ ಪುಟ್ಟರಾಜು, ಶಕುಂತಲಾ, ಪ್ರಾಂಶುಪಾಲ ರವಿ, ನೆಲದನಿ ಬಳಗದ ಮಂಗಲ ಲಂಕೇಶ್ ಭಾಗವಹಿಸಿದ್ದರು

ಪಾಂಡವಪುರ ಬಳಿ ಹೆಜ್ಜೇನು ದಾಳಿ

40ಕ್ಕೂ ಹೆಚ್ಚು ಮಂದಿಗೆ ಗಾಯ





ಪಾಂಡವಪುರ, ನ.2– ಶವಸಂಸ್ಕಾರ ಮಾಡುವ ಸಂದರ್ಭದಲ್ಲಿ ಹೆಜ್ಜೇನು ದಾಳಿ ನಡೆಸಿದ ಪರಿಣಾಮ ಮಹಿಳೆಯರು, ಮಕ್ಕಳು ಸೇರಿದಂತೆ ಸುಮಾರು 40ಕ್ಕೂ ಅಧಿಕ ಮಂದಿ ಗಾಯಗೊಂಡ ಘಟನೆ ಪಟ್ಟಣ ಸಮೀಪದ ಹಾರೋಹಳ್ಳಿ ಗ್ರಾಮದ ಹೊರವಲಯದಲ್ಲಿ ಇಂದು ಮಧ್ಯಾಹ್ನ ನಡೆದಿದೆ.

ಹೆಜ್ಜೇನು ದಾಳಿಗೆ ಒಳಗಾದಂತಹ ಗಾಯಾಳುಗಳಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು.

ಪಟ್ಟಣದ ಹಾರೋಹಳ್ಳಿ ಗ್ರಾಮದಲ್ಲಿ ಧರ್ಮರಾಜು ಎಂಬುವರು ಸಾವನ್ನಪ್ಪಿದ್ದರು. ಅವರ ಅಂತ್ಯ ಸಂಸ್ಕಾರ ಮಾಡಲು ಗ್ರಾಮದ ಹೊರವಲಯದ ರುದ್ರಭೂಮಿಗೆ ಶವ ತೆಗೆದುಕೊಂಡು ಹೋಗಲಾಗಿತ್ತು. ಅಂತ್ಯ ಸಂಸ್ಕಾರ ಮಾಡುವ ಸಂದರ್ಭದಲ್ಲಿ ಧೂಪ, ಗಂಧದ ಕಡ್ಡಿ ಹೊಗೆಗೆ ಮರದಲ್ಲಿ ಕಟ್ಟಿದ್ದ ಹೆಜ್ಜೇನು ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡಿದ್ದ ಸಾರ್ವಜನಿಕರ ಮೇಲೆ ದಾಳಿ ನಡೆಸಿದೆ. ಇದರಿಂದ ಆತಂಕಗೊಂಡ ಸಾರ್ವಜನಿಕರು ಶವವನ್ನು ಬಿಟ್ಟು ಓಡಿಹೋಗಿದ್ದಾರೆ. ಹೆಜ್ಜೇನು ದಾಳಿಯಿಂದ ಮಹಿಳೆಯರು, ಮಕ್ಕಳು ಸೇರಿದಂತೆ 40ಕ್ಕೂ ಅಧಿಕ ಮಂದಿ ಗಾಯಗೊಂಡರು. ತಕ್ಷಣ ಇತರರು ಗಾಯಗೊಂಡವರನ್ನು ಪಾಂಡವಪುರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದರು. ಅದೃಷ್ಟವಶಾತ್ ಘಟನೆಯಲ್ಲಿ ಸಾರ್ವಜನಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಮಹಿಳೆಯರು, ಮಕ್ಕಳಿಗೆ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆಕೊಡಿಸಿ ಮನೆಗೆ ಕಳುಹಿಸಲಾಗಿದೆ. ಹೆಜ್ಜೇನು ದಾಳಿಯಲ್ಲಿ ಹಾರೋಹಳ್ಳಿ ಗ್ರಾಮದ ರಮೇಶ್, ಸತ್ಯನಾರಾಯಣ್, ಲಕ್ಷ್ಮೀಗೌಡ, ವೀಣಾ, ವರುಣ್, ಆನಂದ್, ಪ್ರಜ್ವಲ್, ನೂತನ್ ಸೇರಿದಂತೆ ಹಲವು ಮಂದಿ ಗಾಯಗೊಂಡಿದ್ದರು.

ಮಹನೀಯರ ಸೇವೆ ಅವಿಸ್ಮರಣೀಯ



ಶ್ರೀರಂಗಪಟ್ಟಣ, ನ.2–ಕರ್ನಾಟಕ ರಾಜ್ಯದಲ್ಲಿ ಹೋರಾಟ ಮಾಡಿದ ಎಲ್ಲ ಮಹನೀಯರ ಸೇವೆ ಅವಿಸ್ಮರಣೀಯ ಎಂದು ತಹಸಿಲ್ದಾರ್ ಶ್ವೇತಾ ಎನ್ ರವೀಂದ್ರ ತಿಳಿಸಿದರು.

ಪಟ್ಟಣದ ರಂಗನಾಥ ಸ್ವಾಮಿ ಮೈದಾನದಲ್ಲಿ 67ನೇ ಕನ್ನಡ ರಾಜ್ಯೋತ್ಸವ ದಿನಾಚರಣೆ ಸಮಾರಂಭದಲ್ಲಿ ಕನ್ನಡ ನಾಡು ನುಡಿ ಭಾಷೆಯ ಬಗ್ಗೆ ಅಭಿಮಾನ ಬೆಳೆಸಿಕೊಳ್ಳುವುದು ಹಾಗೂ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದಿನ ತಲೆಮಾರಿಗೆ ವರ್ಗಾಯಿಸುವ ದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಧ್ವಜಾರೋಹಣವನ್ನು ಶಾಸಕ ರವೀಂದ್ರ ಶ್ರೀಕಂಠಯ್ಯ ನೆರವೇರಿಸಿದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 12 ಮಂದಿ ಗಣ್ಯರನ್ನು ಗೌರವಿಸಲಾಯಿತು. ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ ಬಲ್ಲೇನಹಳ್ಳಿ ಮಂಜುನಾಥ್ ಮಾತನಾಡಿ, ಕನ್ನಡ ಭಾಷೆಗೆ ಅದರದೇ ಆದ ಮಹತ್ವವಿದ್ದು ವಿಶ್ವದ ಶ್ರೇಷ್ಠ ಬರವಣಿಗೆ ನಿಮ್ಮ ಕನ್ನಡದ್ದಾಗಿದೆ. ಇಂದಿನ ಯುವಜನತೆ ಆಂಗ್ಲ ಭಾಷೆಯ ವ್ಯಾಮೋಹ ಬಿಟ್ಟು ಕನ್ನಡ ಭಾಷೆಯನ್ನು ಗೌರವಿಸಿ ಪೋಷಿಸಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷರಾದ ನಿರ್ಮಲಾ, ಉಪಾಧ್ಯಕ್ಷ ಗಂಜಾಂ ಕೃಷ್ಣಪ್ಪ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಸಿ.ಜೆ. ಶ್ರೀನಿವಾಸ್, ತಾಲೂಕು ವೈದ್ಯಾಧಿಕಾರಿ ಡಾ.ಎನ್.ಕೆ. ವೆಂಕಟೇಶ್, ತಾಪಂ ಕಾರ್ಯ ನಿರ್ವಹಣಾ ಅಧಿಕಾರಿ ವೇಣು, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಆರ್. ಅನಂತರಾಜು, ಪುರಸಭಾ ಮುಖ್ಯಾಧಿಕಾರಿ ರಾಣಿ, ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಚಂದಗಾಲು ಶಂಕರ್, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಲೋಕೇಶ್, ಕೃಷಿ ಅಧಿಕಾರಿ ಕೀಲಾರ ನಿಶಾಂತ್, ಆರೋಗ್ಯ ಶಿಕ್ಷಣಾಧಿಕಾರಿ ಬೆನ್ನೂರ, ವಲಯ ಅರಣ್ಯ ಅಧಿಕಾರಿ ಅನಿತಾ, ಭಾರತೀಯ ರಕ್ಷಣಾ ಪಡೆಯ ಯೋಧ ಮುಂಡುಗದೊರೆ ಬೈರೇಶ್, ಆದರ್ಶ ಕೃಷಿಕ ಬಲ್ಲೇನಹಳ್ಳಿ ರಮೇಶ್, ಪ್ರೀತಮ್ ಗೌಡ ಸೇರಿದಂತೆ ಇತರರು ಹಾಜರಿದ್ದರು.

ರಾಜ್ಯದ ಪ್ರಗತಿಗೆ ಬುನಾದಿ ಹಾಕಿದವರು ದೇವರಾಜ ಅರಸು

ಕನ್ನಡ ರಾಜ್ಯೋತ್ಸವ ಧ್ವಜಾರೋಹಣ ನೆರವೇರಿಸಿದ ಸಚಿವ ಆರ್.ಅಶೋಕ್



ಮಂಡ್ಯ,ನ.2– ಶರಣರಂಥ ವಿಚಾರವಾದಿಗಳಿಂದ ಕನ್ನಡ ನಾಡಿನ ಕಲೆ, ಸಾಹಿತ್ಯ, ಸಂಗೀತ ಶ್ರೀಮಂತಗೊಂಡಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ಶ್ಲಾಘಿಸಿದರು.

ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಜಿಲ್ಲಾಡಳಿತ ವತಿಯಿಂದ ನಡೆದ 67ನೇ ಕನ್ನಡ ರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಕರ್ನಾಟಕದ ಇತಿಹಾಸ ವಿಶಾಲವಾದುದು. ಕದಂಬರು, ರಾಷ್ಟ್ರಕೂಟರು, ಗಂಗರು, ಚಾಲುಕ್ಯರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯ, ಮೈಸೂರಿನ ಒಡೆಯರಂಥ ರಾಜ ಮನೆತನದವರು ಆಳಿದಂಥ ಈ ನಾಡು, ಕೆಂಪೇಗೌಡರು, ವೀರರಾಣಿ ಚೆನ್ನಮ್ಮ, ಓನಕೆ ಓಬವ್ವ, ಬೆಳವಾಡಿ ಮಲ್ಲಮ್ಮ, ರಾಯಣ್ಣರಂತಹ ವೀರರಿಗೆ ಜನ್ಮ ನೀಡಿದ ನಾಡಾಗಿದೆ ಎಂದರು.

ರಾಜ್ಯದ ಸರ್ವಾಂಗೀಣ ಪ್ರಗತಿಗೆ ದಿವಂಗತ ಡಿ.ದೇವರಾಜ ಅರಸು ಅವರು 1973 ರಲ್ಲಿ ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ನಾಮಕರಣ ಮಾಡಿ ರಾಜ್ಯದ ಪ್ರಗತಿಗೆ ಬುನಾದಿ ಹಾಕಿದರು ಎಂದು ಬಣ್ಣಿಸಿದರು.

ಕಲೆ, ಸಾಹಿತ್ಯಕ್ಕೆ ನಮ್ಮ ಕನ್ನಡಿಗರು ನೀಡಿದ ಅಪಾರವಾದ ಕೊಡುಗೆಯನ್ನು ನಾವು ಹಂಪಿ, ಐಹೊಳೆ, ಬಾದಾಮಿ, ಪಟ್ಟದ ಕಲ್ಲು, ಬೇಲೂರು, ಹಳೇಬೀಡು, ಸೋಮನಾಥಪುರ ಮುಂತಾದ ಶಿಲ್ಪಕಲೆಗಳಲ್ಲಿ ಕಾಣಬಹುದಾಗಿದೆ. ಕುವೆಂಪು, ದ.ರಾ. ಬೇಂದ್ರೆ, ಮಾಸ್ತಿ, ಗೋಕಾಕ್, ಶಿವರಾಮ ಕಾರಂತ, ಅನಂತಮೂರ್ತಿ, ಇತರರು ಕನ್ನಡಕ್ಕೆ ಹೆಮ್ಮೆಯ ರೂಪದಲ್ಲಿ ಜ್ಞಾನಪೀಠ ಪ್ರಶಸ್ತಿ ತಂದುಕೊಡಲು ಕಾರಣರಾಗಿದ್ದಾರೆ. ಇದು ನಮ್ಮ ಭಾಷೆಯ ಹೆಗ್ಗಳಿಕೆ ಎಂದು ಶ್ಲಾಘಿಸಿದರು.

ಶಾಸಕ ಎಂ.ಶ್ರೀನಿವಾಸ್ ಅಧ್ಯಕ್ಷತೆ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ನಗರಸಭೆ ಅಧ್ಯಕ್ಷ ಎಚ್.ಎಸ್. ಮಂಜು, ಉಪಾಧ್ಯಕ್ಷೆ ಇಶ್ರತ್ ಫಾತಿಮಾ, ಸ್ಥಾಯಿ ಸಮಿತಿಯ ಅಧ್ಯಕ್ಷೆ ಮೀನಾಕ್ಷಿ ಪುಟ್ಟಸ್ವಾಮಿ, ಜಿಲ್ಲಾಧಿಕಾರಿ ಡಾ.ಎಚ್.ಎನ್. ಗೋಪಾಲಕೃಷ್ಣ, ಜಿಪಂ ಸಿಇಒ ಶಾಂತಾ ಎಲ್.ಹುಲ್ಮನಿ, ಅಪರ ಜಿಲ್ಲಾಧಿಕಾರಿ ಡಾ. ಎಚ್.ಎಲ್.ನಾಗರಾಜು, ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಉಪ ಅರಣ್ಯ ಸಂರಕ್ಷಣಾಧಿಕಾರಿ ರುದ್ರನ್, ಉಪ ವಿಭಾಗಾಧಿಕಾರಿ ಆರ್.ಐಶ್ವರ್ಯ ಸೇರಿದಂತೆ ಮತ್ತಿತರರಿದ್ದರು.

ಕಳೆಗುಂದಿದ ರಾಜ್ಯೋತ್ಸವ: ಪ್ರತೀ ವರ್ಷ ನಗರದ ಸರ್‌ಎಂವಿ ಕ್ರೀಡಾಂಗಣದಲ್ಲಿ ರಾಜ್ಯೋತ್ಸವ ಕಾರ್ಯಕ್ರಮ ಆಚರಿಸಲಾಗುತ್ತಿತ್ತು. ಆದರೆ ಈ ಬಾರಿ ಕ್ರೀಡಾಂಗಣ ಅಭಿವೃದ್ಧಿಯ ಕಾಮಗಾರಿ ನಡೆಯುತ್ತಿರುವುದರಿಂದ ಪೊಲೀಸ್ ಕವಾಯತು ಮೈದಾನಲ್ಲೆ ಸ್ಥಳಾಂತರಿದಲಾಗಿತ್ತು. ಇದರಿಂದ ರಾಜ್ಯೋತ್ಸವ ಕಳೆಗುಂದಂತೆ ಕಂಡುಬಂದಿತು. ಮೈದಾನ ತೀರಾ ಚಿಕ್ಕದಾಗಿದ್ದರಿಂದ ಸೀಮಿತ ಶಾಲೆಯ ಮಕ್ಕಳಿಗೆ ಮಾತ್ರ ಅವಕಾಶ ನೀಡವಾಗಿತ್ತು. ಸಾರ್ವಜನಿಕರ ವೀಕ್ಷಣೆಗೂ ಅವಕಾಶವಿರಲಿಲ್ಲ. ಅಲ್ಲದೆ, ಕೇವಲ ಸಾಂಸ್ಕೃತಿಕ ಕಾರ್ಯಕ್ರಮ ನೀಡಲು ಬಂದಿದ್ದ ಮಕ್ಕಳು ಇಲಾಖೆಯ ಅಧಿಕಾರಿಗಳು ಮಾತ್ರ ಭಾಗವಹಿಸಿದ್ದರು.

ಕೆಲವೇ ನಿಮಿಷಗಳಲ್ಲೇ ಮುಗಿದ ಪಥ ಸಂಚಲನ: ಪ್ರತೀ ವರ್ಷ 45ಕ್ಕೂ ಹೆಚ್ಚು ಶಾಲಾ–ಕಾಲೇಜಿನ ಎನ್‌ಸಿಸಿ, ಸ್ಕೌಟ್ಸ್ ಅಂಡ್ ಗೈಡ್ಸ್ ಸೇರಿದಂತೆ ವಿವಿಧ ಭಾಗಗಳ ತಂಡಗಳು ಪಥ ಸಂಚಲನದಲ್ಲಿ ಭಾಗವಹಿಸುತ್ತಿದ್ದವು. ಆದರೆ ಈ ಬಾರಿ ಕೇವಲ 20 ತಂಡಗಳು ಮಾತ್ರ ಪಥ ಸಂಚಲನ ನಡೆಸಿದವು. ಅದು ಕೇವಲ ಕೆಲವು ನಿಮಿಷಗಳಲ್ಲೇ ಮುಗಿಯಿತು.

ಕನ್ನಡ ಹಾಡುಗಳಿಗೆ ಹೆಜ್ಜೆ ಹಾಕಿದ ವಿದ್ಯಾರ್ಥಿಗಳು: ಸೆಂಟ್ ಜೋಸೆಫ್ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ಹಚ್ಚೇವು ಕನ್ನಡದ ದೀಪ, ಸದ್ವಿದ್ಯಾ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ಬಂದಿದೆ ಕನ್ನಡ ಬಿರುಸಿನಗಾಳಿ, ಬೇಲೂರಿನ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಂದ ಕನ್ನಡ, ನಾಡು, ನುಡಿ ಸಂಸ್ಕೃತಿ ಸಂಬಂಧಿಸಿದ ಹಾಡುಗಳು, ಮಾಂಡವ್ಯ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು ಹಾಗೂ ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಇಲಾಖೆ ವತಿಯಿಂದ ಕಂಸಾಳೆ ನೃತ್ಯಗಳು ಗಮನ ಸೆಳೆದವು.

ಚಂದ್ರೇಗೌಡ ನಿಧನ



ಕೆ.ಆರ್.ಪೇಟೆ, ನ.2– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಹಿರಿಯ ಮುಖಂಡರಾದ ಮಿಲ್ ಚಂದ್ರೇಗೌಡ(70) ಬುಧವಾರ ನಿಧನರಾದರು. ಮೃತರು, ಪತ್ನಿ ಜಯಮ್ಮ, ರೈಲ್ವೆ ಇಲಾಖೆಯ ಅಧಿಕಾರಿ ಎ.ಸಿ.ಕುಮಾರ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ನ.3ರಂದು ಗುರುವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮ ಅಗ್ರಹಾರಬಾಚಹಳ್ಳಿ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಧಾನಸಭಾ ಚುನಾವಣೆಗೆ ಸ್ಪರ್ಧೆ ಬಯಸಿದರೆ 2 ಲಕ್ಷದೊಂದಿಗೆ ಅರ್ಜಿ ಸಲ್ಲಿಸಿ...

- ಆಕಾಂಕ್ಷಿಗಳಿಗೆ ಪ್ರದೇಶ ಕಾಂಗ್ರೆಸ್ ಆಹ್ವಾನ
- ನ. 5ರಿಂದ ಅರ್ಜಿ ವಿತರಣೆ; ಅರ್ಜಿಗೂ ಐದು ಸಾವಿರ
- ಎರಡು ಲಕ್ಷದ ಡಿಡಿಯೊಂದಿಗೆ ಅರ್ಜಿ ಸಲ್ಲಿಸಲು ನ. 15 ಕಡೇ ದಿನ
- ಹಾಲಿ ಶಾಸಕರು ಮತ್ತೆ ಸ್ಪರ್ಧೆ ಬಯಸಿದರೆ ಅರ್ಜಿ ಸಲ್ಲಿಕೆ ಕಡ್ಡಾಯ
- ಯಾರೇ ಕಾಂಗ್ರೆಸ್ ಸೇರ ಬಯಸಿದರೆ ಸ್ವಾಗತ–ಸುಸ್ವಾಗತ



ಬೆಂಗಳೂರು, ನ2 (ಕೆಎಂಶಿ) – ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಣಕ್ಕಿಳಿಯಲು ಬಯಸುವ ಅಭ್ಯರ್ಥಿಗಳು ಎರಡು ಲಕ್ಷ ರೂ ಪಕ್ಷಕ್ಕೆ ಪಾವತಿಸಿ ಅರ್ಜಿ ಸಲ್ಲಿಸುವಂತೆ ಪ್ರದೇಶ ಕಾಂಗ್ರೆಸ್ ಆಕಾಂಕ್ಷಿಗಳಿಗೆ ಆಹ್ವಾನ ನೀಡಿದೆ.

ನವೆಂಬರ್ 5 ರಿಂದ ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ ಆಕಾಂಕ್ಷಿಗಳು ಐದು ಸಾವಿರ ರೂ. ಪಾವತಿಸಿ ಅರ್ಜಿ ಪಡೆದು ನಂತರ ಎರಡು ಲಕ್ಷ ಡಿಡಿಯೊಂದಿಗೆ ನವೆಂಬರ್ 15 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಈ ವಿಷಯವನ್ನು ಸುದ್ದಿಗೋಷ್ಠಿಯಲ್ಲಿ ತಿಳಿಸಿದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಾನು, ಸಿದ್ದರಾಮಯ್ಯ ಸೇರಿದಂತೆ ಹಾಲಿ ಶಾಸಕರು ಯಾರ್‍ಯಾರು ಮತ್ತೆ ಸ್ಪರ್ಧಿಸಲು ಬಯಸಿದರೋ, ಅವರೂ ಅರ್ಜಿ ಸಲ್ಲಿಸುವುದು ಕಡ್ಡಾಯ ಎಂದರು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ನಮ್ಮಲ್ಲಿ ಆಕಾಂಕ್ಷಿಗಳ ದಂಡೇ ಇದೆ. ಅಭ್ಯರ್ಥಿಗಳ ಆಯ್ಕೆಗೂ ಮುನ್ನ ಅವರ ಸಾಮರ್ಥ್ಯದ ಬಗ್ಗೆ ತಿಳಿದುಕೊಳ್ಳಲು ಈ ನಮೂನೆ ಪಕ್ಷಕ್ಕೆ ಅನುಕೂಲವಾಗಲಿದೆ. ಸಾಮಾನ್ಯರು ಎರಡು ಲಕ್ಷ ರೂ., ಪರಿಶಿಷ್ಟ ಜಾತಿ ಮತ್ತು ಪಂಗಡದವರು ಒಂದು ಲಕ್ಷ ರೂ. ಪಾವತಿಸಿ ಅರ್ಜಿ ಸಲ್ಲಿಸಬೇಕಾಗಿದೆ. ನಮಗೆ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ 15 ರಿಂದ 30 ಆಕಾಂಕ್ಷಿಗಳಿದ್ದಾರೆ. ಇವರಲ್ಲಿ ಸಮರ್ಥರನ್ನು ಆಯ್ಕೆ ಮಾಡುವುದು ದೊಡ್ಡ ಸಾಹಸ.

ಪಕ್ಷಕ್ಕೆ ದುಡಿದು, ಕ್ಷೇತ್ರದ ಜನರ ಜೊತೆ ನಿಕಟ ಸಂಪರ್ಕ ಹೊಂದಿ ಪ್ರತಿಪಕ್ಷದ ಅಭ್ಯರ್ಥಿಗಳನ್ನು ಸೋಲಿಸುವ ಸಾಮರ್ಥ್ಯ ಇರುವವರಿಗೆ ಈ ಬಾರಿ ಟಿಕೆಟ್. ಕೇವಲ ಪಕ್ಷದ ಕಚೇರಿ ಮತ್ತು ನಾಯಕರ ಮನೆ ಮುಂದೆ ಅಲೆದಾಡುವವರಿಗೆ ಯಾವುದೇ ಕಾರಣಕ್ಕೂ ಟಿಕೆಟ್ ದೊರೆಯುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಒಂದನೇ ಪುಟದಿಂದ

ಡಬಲ್ ಧಮಾಕ

ಹೆಚ್ಚುವರಿ ಸೌಲಭ್ಯವಾಗಿದೆ. ಎರಡೂ ರೈಲುಗಳು ಮೈಸೂರು ಮತ್ತು ಚೆನ್ನೈ ನಗರಗಳ ನಡುವೆ ಸಂಚರಿಸಲಿವೆ. ನವೆಂಬರ್ 11 ರಂದು ರಾಜ್ಯಕ್ಕೆ ಭೇಟಿ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ, ದಕ್ಷಿಣ ಭಾರತದ ಮೊದಲ ಸೆಮಿ ಹೈ ಸ್ಪೀಡ್ ವಂದೇ ಭಾರತ್ ರೈಲಿಗೆ ಚಾಲನೆ ನೀಡುವರು ಎಂದು ತಿಳಿಸಿದರು. ಮೈಸೂರು–ಚೆನ್ನೈ ನಗರಗಳ ನಡುವೆ 504 ಕಿ.ಮೀ. ಅಂತರವನ್ನು ಗಂಟೆಗೆ 75.60 ಕಿ.ಮೀ.ಯಿಂದ 77.53 ಕಿ.ಮೀ. ವೇಗದಲ್ಲಿ 6 ಗಂಟೆ 40 ನಿಮಿಷದಲ್ಲಿ ತಲುಪಲಿರುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು (ಸಂಖ್ಯೆ 20607) ಸೋಮವಾರ, ಮಂಗಳವಾರ, ಗುರುವಾರ, ಶುಕ್ರವಾರ, ಶನಿವಾರ ಮತ್ತು ಭಾನುವಾರಗಳಂದು ವಾರದಲ್ಲಿ 6 ದಿನ ಸಂಚರಿಸಲಿದೆ. ಶತಾಬ್ದಿ ಎಕ್ಸ್‌ಪ್ರೆಸ್ ಸಹ ಬುಧವಾರ ಹೊರತುಪಡಿಸಿ ವಾರದಲ್ಲಿ 6 ದಿನ ಈ ಮಾರ್ಗದಲ್ಲಿ ಪ್ರಯಾಣಿಸಲಿದೆ. ಚೆನ್ನೈ ಸೆಂಟ್ರಲ್ ರೈಲು ನಿಲ್ದಾಣದಿಂದ ಮುಂಜಾನೆ 5.50 ಗಂಟೆಗೆ ಹೊರಡಲಿರುವ ವಂದೇ ಭಾರತ ಎಕ್ಸ್‌ಪ್ರೆಸ್ ರೈಲು ಗಾಡಿಯು ಬೆಳಗ್ಗೆ 10.25 ಗಂಟೆಗೆ 359 ಕಿ.ಮೀ. ದೂರದ ಬೆಂಗಳೂರು ಸಿಟಿ ಜಂಕ್ಷನ್ ತಲುಪಲಿದೆ. ಅಲ್ಲಿಂದ ಬೆಳಗ್ಗೆ 10.30 ಗಂಟೆಗೆ ಪ್ರಯಾಣ ಆರಂಭಿಸಿ 137.6 ಕಿ.ಮೀ. ಅಂತರದ ಮೈಸೂರು ನಿಲ್ದಾಣವನ್ನು ಮಧ್ಯಾಹ್ನ 12.30 ಗಂಟೆಗೆ ತಲುಪಲಿದೆ.

ಅದೇ ದಿನ ಮಧ್ಯಾಹ್ನ 1.05 ಗಂಟೆಗೆ ಮೈಸೂರಿನಿಂದ ಹೊರಟು ಮಧ್ಯಾಹ್ನ 2.55 ಗಂಟೆಗೆ ಬೆಂಗಳೂರು, ಅಲ್ಲಿಂದ ಮಧ್ಯಾಹ್ನ 3 ಗಂಟೆಗೆ ಹೊರಟು ರಾತ್ರಿ 7.35 ಗಂಟೆಗೆ ಚೆನ್ನೈ ನಗರ ರೈಲು ನಿಲ್ದಾಣ ತಲುಪಲಿದೆ. ಪ್ರಸ್ತುತ ಚಾಲನೆಯಲ್ಲಿರುವ ಶತಾಬ್ದಿ ಎಕ್ಸ್‌ಪ್ರೆಸ್ ಮಧ್ಯಾಹ್ನ 2.15 ಗಂಟೆಗೆ ಮೈಸೂರಿನಿಂದ ಹೊರಟು ಸಂಜೆ 4.10 ಗಂಟೆಗೆ ಬೆಂಗಳೂರು ತಲುಪಲಿದೆ. ಅದೇ ರೀತಿ ಚೆನ್ನೈ ಅನ್ನು ರಾತ್ರಿ 9.30 ಗಂಟೆಗೆ ತಲುಪಲಿದೆ ಎಂದು ರೈಲ್ವೆ ಮೂಲಗಳು ತಿಳಿಸಿವೆ. ಮೈಸೂರು, ಬೆಂಗಳೂರು ಮತ್ತು ಚೆನ್ನೈ ನಗರಗಳಿಗೆ ಸಂಪರ್ಕ ಕಲ್ಪಿಸಲಿರುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು, 16 ಕೋಚ್‌ಗಳನ್ನು ಹೊಂದಿದ್ದು, ಸೆಮಿ ಹೈ ಸ್ಪೀಡ್‌ನಲ್ಲಿ ಸಂಚರಿಸಲಿದೆ. ಇದರಲ್ಲಿ ಸ್ವಯಂ ಚಾಲಿತ ಆಟೋಮ್ಯಾಟಿಕ್ ಬಾಗಿಲುಗಳಿವೆ. ಇದು ಸೆಲ್ಫ್ ಪ್ರೊಪೆಲ್ಡ್ ಎಂಜಿನ್ ರೈಲೂ ಆಗಿರುವುದರಿಂದ ಪ್ರತ್ಯೇಕ ಎಂಜಿನ್ ಹೊಂದಿಲ್ಲ. ಹವಾನಿಯಂತ್ರಿತ ಚೇರ್‌ಕಾರ್ ಕೋಚ್‌ಗಳಾಗಿದ್ದು, 180 ಡಿಗ್ರಿವರೆಗೆ ರೊಟೇಟ್ ಆಗುವುದರಿಂದ ಆರಾಮದಾಯಕವಾಗಿ ಈ ರೈಲಿನಲ್ಲಿ ಪ್ರಯಾಣಿಸಬಹುದಾಗಿದೆ.

ಮೂಲ ಸೌಕರ್ಯ ಕಲ್ಪಿಸಿರುವ ಪ್ರದೇಶಗಳಲ್ಲಿ ತೆರಿಗೆ ಸಂಗ್ರಹಿಸಿ

ಅದರಿಂದ ನಿವಾಸಿಗಳಿಗೂ ಅನುಕೂಲ; ನಗರಪಾಲಿಕೆ ಅಧಿಕಾರಿಗಳಿಗೆ ಶಾಸಕ ನಾಗೇಂದ್ರ ಸಲಹೆ

ಮೈಸೂರು,ನ.2(ಎಸ್‌ಬಿಡಿ)– ಮೈಸೂರು ನಗರಪಾಲಿಕೆ ವತಿಯಿಂದ ಮೂಲ ಸೌಕರ್ಯ ಕಲ್ಪಿಸಿರುವ ಪ್ರದೇಶಗಳಿಂದ ಆರ್ಥಿಕ ಸಂಪನ್ಮೂಲ ಕ್ರೋಢೀಕರಣಕ್ಕೂ ಅಧಿಕಾರಿಗಳು ಗಮನಹರಿಸಬೇಕೆಂದು ಶಾಸಕ ಎಲ್.ನಾಗೇಂದ್ರ ತಿಳಿಸಿದರು.

ಪಾಲಿಕೆ ನವೀಕೃತ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಬುಧವಾರ ನಡೆದ ಚಾಮರಾಜ ವಿಧಾನಸಭಾ ಕ್ಷೇತ್ರದ ಆಶ್ರಯ ಸಮಿತಿ ಸಭೆಯಲ್ಲಿ ಮಾತನಾಡಿ, ನಗರಪಾಲಿಕೆ ವತಿಯಿಂದ ಎಲ್ಲಾ ರೀತಿಯ ಸೌಕರ್ಯ ಕಲ್ಪಿಸಿದ್ದರೂ ಹಲವೆಡೆ ತೆರಿಗೆ ಸಂಗ್ರಹಿಸುತ್ತಿಲ್ಲ. ಅಂತಹ ಪ್ರದೇಶಗಳನ್ನು ಗುರುತಿಸಿ ನಿವಾಸಿಗಳಿಗೂ ಹೊರೆಯಾಗದಂತೆ ಕನಿಷ್ಠ ತೆರಿಗೆಯನ್ನಾದರೂ ಸಂಗ್ರಹಿಸಿದರೆ ಇನ್ನೂ ಹೆಚ್ಚಿನ ಸೌಲಭ್ಯ ಹಾಗೂ ನಿತ್ಯ ನಿರ್ವಹಣೆಗೆ ಸಹಾಯವಾಗುತ್ತದೆ ಎಂದು ಸಲಹೆ ನೀಡಿದರು.

ಕರ್ನಾಟಕ ಕೊಳಗೇರಿ ನಿರ್ಮೂಲನಾ ಮಂಡಳಿ (ಸ್ಲಂ ಬೋರ್ಡ್)ಯಿಂದ ನಿರ್ಮಿಸಿ, ಫಲಾನುಭವಿಗಳಿಗೆ ಹಂಚಿಕೆ ಮಾಡಿರುವ ಸುಮಾರು 894 ಮನೆಗಳನ್ನು ಇನ್ನೂ ಪಾಲಿಕೆಗೆ ಹಸ್ತಾಂತರ ಮಾಡಿಕೊಂಡಿಲ್ಲ. ಸರಿಯಾಗಿ ಪರಿಶೀಲನೆ ನಡೆಸಿದರೆ ಈ ರೀತಿಯ ಸಾವಿರಾರು ಮನೆಗಳನ್ನು ಗುರುತಿಸಬಹುದು. ಇವರೆಲ್ಲರಿಂದ ಕನಿಷ್ಠ ತೆರಿಗೆ ಸಂಗ್ರಹಿಸಿದರೂ ಕುಡಿಯುವ ನೀರು, ರಸ್ತೆ, ಬೀದಿ ದೀಪ, ಯುಜಿಡಿ ದುರಸ್ತಿ ಸೇರಿದಂತೆ ಎಲ್ಲಾ ಸೌಲಭ್ಯ ನಿರ್ವಹಣೆಯನ್ನು ವ್ಯವಸ್ಥಿತವಾಗಿ ಮಾಡಬಹುದು ಎಂದರು.

ಮೇಟಗಳ್ಳಿ ಅಂಬೇಡ್ಕರ್ ಜ್ಞಾನಲೋಕದ ಕಾಂಪ್ಲೆಕ್ಸ್‌ನಲ್ಲಿ ಕಾಂಕ್ರೀಟ್ ರಸ್ತೆ, ನೂರಾರು ಮನೆಗಳಿಗೆ ರಿಯಾಯ್ತಿಯಲ್ಲಿ ವಿದ್ಯುತ್ ಸಂಪರ್ಕ, ಯುಜಿಡಿ ಸೇರಿದಂತೆ 4.10 ಕೋಟಿ ರೂ. ವೆಚ್ಚದಲ್ಲಿ ವಿವಿಧ ಕಾಮಗಾರಿ ನಡೆಸಲಾಗಿದೆ. ಸ್ಲಂ ಬೋರ್ಡ್ ಹಾಗೂ ಪಾಲಿಕೆಯವರು ಹಣವಿಲ್ಲ ಎಂಬ ಕಾರಣಕ್ಕೆ ಸರ್ಕಾರದ ಅನುದಾನದಲ್ಲಿ ಕೆಲಸ ಮಾಡಿಸಿದ್ದೇವೆ. ಇದಕ್ಕೂ ಹಿಂದಿನಿಂದಲೂ ನಗರಪಾಲಿಕೆಯೇ ನಿರ್ವಹಣೆ ಮಾಡುತ್ತಿದೆ. ಆದರೂ ಈ ಪ್ರದೇಶ ಪಾಲಿಕೆಗೆ ಹಸ್ತಾಂತರ ಮಾಡಿಕೊಂಡಿಲ್ಲ. ಸ್ಲಂ ಬೋರ್ಡ್‌ನಿಂದ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಿದ ನಂತರ ಮುಂದಿನ ನಿರ್ವಹಣೆಗೆ ಸ್ಥಳೀಯ ಸಂಸ್ಥೆಗೆ ವಹಿಸಬೇಕೆಂಬ ನಿಯಮವಿದೆ. ಹಕ್ಕುಪತ್ರ ವಿತರಿಸಿದ ನಂತರವೇ ಹಸ್ತಾಂತರ ಮಾಡಿಕೊಳ್ಳುತ್ತೇವೆ ಎಂದರೆ ಅದರಿಂದ ಪಾಲಿಕೆಗೆ ನಷ್ಟ, ಸ್ಲಂ ಬೋರ್ಡ್‌ನಿಂದ ನಿವಾಸಿಗಳಿಗೆ ಹಂಚಿಕೆ ಪತ್ರ ವಿತರಿಸಲಾಗಿದೆ. ಹಾಗಾಗಿ ವಿಳಂಬ ಮಾಡದೆ ಹಸ್ತಾಂತರ ಪ್ರಕ್ರಿಯೆಗೆ ಕ್ರಮ ವಹಿಸಬೇಕು. ಇದರಿಂದ ನಿವಾಸಿಗಳಿಗೂ ಹೆಚ್ಚು ಅನುಕೂಲವಾಗುತ್ತದೆ ಎಂದು ಸೂಚನೆ ನೀಡಿದರು.

ಪರಿಶೀಲಿಸಿ ವರದಿ ನೀಡಿ: ಹೆಬ್ಬಾಳು ಗ್ರಾಮದ ಸರ್ವೆ ನಂ.201 ಹಾಗೂ ರಿಂಗ್‌ರಸ್ತೆ ಬಳಿ ಕಲ್ಯಾಣ ಮಂಟಪದ ಪಕ್ಕ ಸರ್ಕಾರಿ ಭೂಮಿ ಇದೆ. ಅದರ ಸರ್ವೆ ಮಾಡಿಸುವಂತೆ ಮನವಿ ಮಾಡಿದರೂ ಅಧಿಕಾರಿಗಳು ಗಮನಹರಿಸಿಲ್ಲ. ಸಂಬಂಧಪಟ್ಟ ದಾಖಲೆಗಳೂ ಅವರ ಬಳಿ ಇಲ್ಲ. ಕೆಲವು ಅನಧಿಕೃತ ನಿರ್ಮಾಣಗಳಾಗಿದ್ದರೂ ನಿರ್ಲಕ್ಷ್ಯಿಸಿದ್ದಾರೆ ಎಂದು ಆಶ್ರಯ ಸಮಿತಿ ಸದಸ್ಯರು ಸಭೆಯಲ್ಲಿ ದೂರಿದರು. ಈ ಸಂಬಂಧ ಅಧಿಕಾರಿಗಳಿಂದ ಮಾಹಿತಿ ಕೇಳಿದ ಶಾಸಕ ಎಲ್. ನಾಗೇಂದ್ರ, ಕಲ್ಯಾಣ ಮಂಟಪದ ಬಳಿಯ 1 ಎಕರೆ 8 ಗುಂಟೆ ಜಾಗ, ದಾಖಲೆಗಳಲ್ಲಿ ಕೆರೆ ಪ್ರದೇಶ ಎಂದು ಗುರುತಿಸಲಾಗಿದೆ. ಹಾಗಾಗಿ ಈ ಬಗ್ಗೆ ಇಲ್ಲಿ ಕುಳಿತು ನಿರ್ಧರಿಸಲು ಸಾಧ್ಯವಿಲ್ಲ. ಪಾಲಿಕೆ ಅಧಿಕಾರಿಗಳು ಹಾಗೂ ಸರ್ವೆ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ತಿಳಿಸಿದರು.

ಹಕ್ಕುಪತ್ರ ವಿತರಿಸಿ: ಹೆಬ್ಬಾಳು ಆಶ್ರಯ ಬಡಾವಣೆಯ ಒಟ್ಟು 105ರಲ್ಲಿ ಮೂಲ ಫಲಾನುಭವಿಗಳಾದ 20 ಜನರಿಗೆ ಹಕ್ಕು ಖುಲಾಸೆ ಪತ್ರ ವಿತರಿಸಿದ್ದೇವೆ. ಜಿಪಿಎ ಪಡೆದಿರುವವರು ಸೇರಿ ನಿಯಮಗಳಿಗೆ ಒಳಪಡದ 85 ಜನರಿಗೂ ಹಕ್ಕು ಖುಲಾಸೆ ಪತ್ರ ನೀಡಲು ಅವಕಾಶ ಮಾಡಿಕೊಡುವಂತೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಅಜಯ್ ನಾಗಭೂಷಣ್ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದೇನೆ. ಈ ಬಗ್ಗೆ ರಾಜ್ಯಕ್ಕೆ ಅನ್ವಯವಾಗುವ ರೀತಿಯಲ್ಲಿ ಕ್ರಮ ಕೈಗೊಳ್ಳಬಹುದೇ? ಅಥವಾ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡಲು ಅವಕಾಶ ಕಲ್ಪಿಸಬಹುದೇ? ಎನ್ನುವುದನ್ನು ಸಂಬಂಧಪಟ್ಟ ಸಚಿವರೊಂದಿಗೆ ಚರ್ಚಿಸಿ ಮುಂದುವರೆಯುವ ಭರವಸೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ನಾನು ಗಂಭೀರ ಪ್ರಯತ್ನ ಮುಂದುವರೆಸುತ್ತೇನೆ. ಹಾಗೆಯೇ ಡಾ.ಬಿ.ಆರ್. ಅಂಬೇಡ್ಕರ್ ಜನ್ಮಶತಾಬ್ಧಿ ಅಂಗವಾಗಿ ಕುಕ್ಕರಹಳ್ಳಿಯಲ್ಲಿ ಮನೆ ಪಡೆದಿರುವ 13 ಮನೆಗಳಿಗೆ ಹಕ್ಕುಪತ್ರ ವಿತರಿಸುವ ಸಂಬಂಧ ಪ್ರಕಟಣೆ ಹೊರಡಿಸಿ ನಂತರ ಕ್ರಮ ವಹಿಸಿ. ಮೇದರ್‌ಬ್ಲಾಕ್‌ನ ದೇವರಾಜ ಹಂತದಲ್ಲಿ 17 ಮನೆಗಳಿಗೆ ಹಕ್ಕುಪತ್ರ ನೀಡಿಲ್ಲ ಎಂಬ ದೂರಿನ ಬಗ್ಗೆ ಗಮನಹರಿಸಿ, ಸರಸ್ವತಿಪುರಂ ಈಜುಕೊಳದ ಬಳಿಯ ಸರ್ಕಾರಿ ಭೂಮಿಯಲ್ಲಿ 7 ಮನೆ ನಿರ್ಮಿಸಿಕೊಂಡಿದ್ದಾರೆ ಎಂದು ದೂರು ಬಂದಿದ್ದು, ಸ್ಥಳ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಿ ಎಂದು ಪಾಲಿಕೆ ಹಾಗೂ ಸರ್ವೇ ಅಧಿಕಾರಿಗಳಿಗೆ ಸೂಚಿಸಿದರು. ನಗರಪಾಲಿಕೆ ಹೆಚ್ಚುವರಿ ಆಯುಕ್ತೆ ರೂಪಾ, ಉಪ ಆಯುಕ್ತೆ ಸವಿತಾ ಸೇರಿದಂತೆ ವಿವಿಧ ವಲಯಗಳ ಅಧಿಕಾರಿಗಳು, ಸ್ಲಂ ಬೋರ್ಡ್, ಸರ್ವೆ ಇಲಾಖೆ ಅಧಿಕಾರಿಗಳು, ಆಶ್ರಯ ಸಮಿತಿ ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರು ನಗರಪಾಲಿಕೆಯಲ್ಲಿ ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆಯಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಆಶ್ರಯ ಸಮಿತಿ ಸಭೆ ಬುಧವಾರ ನಡೆಯಿತು.

> ಕೇಂದ್ರ ಸರ್ಕಾರದಿಂದ ಹೊಸದಾಗಿ ಮನೆ ಹಂಚಿಕೆ ಆಗುತ್ತಿಲ್ಲ. ಹಾಗಾಗಿ ರಾಜ್ಯದ ವಸತಿ ಸಚಿವರಾದ ವಿ.ಸೋಮಣ್ಣ ಅವರನ್ನು ಭೇಟಿ ಮಾಡಿ, ನಮ್ಮ ಕ್ಷೇತ್ರದ ನಿವಾಸಿಗಳಿಗಾಗಿ 3 ಸಾವಿರ ಮನೆ ಕಲ್ಪಿಸಿಕೊಡುವಂತೆ ಮನವಿ ಮಾಡಿದ್ದೇನೆ. ವಿವಿಧ ವಸತಿ ಯೋಜನೆಗಳಡಿ ಬಿಡುಗಡೆಯಾದ ಮನೆಗಳಲ್ಲಿ ಬಸವ ಕಲ್ಯಾಣ, ಭದ್ರಾವತಿ, ಸಂಡೂರು, ಬೀದರ್ ಸೇರಿದಂತೆ ಹಲವೆಡೆ ಸಾವಿರಾರು ಮನೆಗಳು ಇನ್ನೂ ಆರಂಭವಾಗಿಲ್ಲ. ಅಂತಹ ಒಂದು ಭಾಗದ ಯೋಜನೆಯನ್ನು ಚಾಮರಾಜ ಕ್ಷೇತ್ರಕ್ಕೆ ಸ್ಥಳಾಂತರಿಸುವಂತೆ ಒತ್ತಾಯಿಸಿದ್ದೇನೆ. ಈ ಬಗ್ಗೆ ಕ್ಯಾಬಿನೆಟ್ ತೀರ್ಮಾನದ ನಂತರ ಮುಂದಿನ ಪ್ರಕ್ರಿಯೆ ಆರಂಭವಾಗಲಿದೆ. –ಶಾಸಕ ಎಲ್.ನಾಗೇಂದ್ರ

ವಿದ್ಯಾರಣ್ಯಪುರಂನಲ್ಲಿ ಮಹಿಳೆ ಸರ ಕಳವು



ಮೈಸೂರು, ನ.2(ಆರ್‌ಕೆ)–ಮದುವೆಗೆಂದು ಕಲ್ಯಾಣ ಮಂಟಪಕ್ಕೆ ಹೋಗುತ್ತಿದ್ದ ಮಹಿಳೆ ಕೊರಳಿಂದ ಚಿನ್ನದ ಸರ ಎಗರಿಸಿ ಪರಾರಿಯಾಗಿರುವ ಘಟನೆ ವಿದ್ಯಾರಣ್ಯಪುರಂನಲ್ಲಿ ಬುಧವಾರ ರಾತ್ರಿ ಸಂಭವಿಸಿದೆ.

ವಿದ್ಯಾರಣ್ಯಪುರಂ 4ನೇ ಮೇನ್ ನಿವಾಸಿ ಬಾಲಸುಬ್ರಹ್ಮಣ್ಯ ಅವರ ಪತ್ನಿ ಶೇಷಶ್ರೀ, ಚಿನ್ನದ ಸರ ಕಳೆದುಕೊಂಡವರು. ಸಂಬಂಧಿಕರ ಮದುವೆ ರಿಸೆಪ್ಷನ್‌ಗೆ ಹೋಗಲೆಂದು ಮನೆಯಿಂದ ಹೊರಟ ಅವರು, ಸಮೀಪದಲ್ಲಿ ಕಾಯುತ್ತಿದ್ದ ಸ್ನೇಹಿತರ ಬಳಿಗೆ ನಡೆದುಕೊಂಡು ಹೋಗುತ್ತಿದ್ದಾಗ ಎದುರಿನಿಂದ ಡಿಯೋ ಸ್ಕೂಟರ್‌ನಲ್ಲಿ ಬಂದ ಇಬ್ಬರು ಖದೀಮರು, ವಿದ್ಯಾರಣ್ಯಪುರಂ 4ನೇ ಮೇನ್, 11ನೇ ಕ್ರಾಸ್‌ನ ಸುಮುಖ ಡಯಾಗ್ನೋಸ್ಟಿಕ್ ಸೆಂಟರ್ ಮತ್ತು ಭೂಮಿ ಸ್ಟೋರ್ ಬಳಿ ರಾತ್ರಿ ಸುಮಾರು 7.45 ಗಂಟೆ ವೇಳೆ ಕೊರಳಿನಲ್ಲಿದ್ದ 30 ಗ್ರಾಂ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದರು. ಘಟನೆ ನಡೆದ ಸ್ಥಳದಲ್ಲಿ ಮಾಂಗಲ್ಯ ಮಾತ್ರ ಕೆಳಕ್ಕೆ ಬಿದ್ದಿದ್ದು, ಸರ ಖದೀಮರ ಪಾಲಾಗಿದೆ ಎಂದು ಶೇಷಶ್ರೀ ಪೊಲೀಸರಿಗೆ ತಿಳಿಸಿದ್ದಾರೆ. ಸ್ಥಳಕ್ಕೆ ಧಾವಿಸಿದ ವಿದ್ಯಾರಣ್ಯಪುರಂ ಠಾಣೆ ಪೊಲೀಸರು, ಮಹಜರು ನಡೆಸಿ, ಸುತ್ತಲಿನ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪಡೆದು ಖದೀಮರ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಕಲಬುರಗಿಯಲ್ಲಿ ಅತ್ಯಾಚಾರವೆಸಗಿ ಬಾಲಕಿ ಹತ್ಯೆ ಪ್ರಕರಣ

ಕರ್ನಾಟಕ ಪ್ರದೇಶ ಕುರುಬರ ಸಂಘ ಖಂಡನೆ

ಮೈಸೂರು,ನ2(ಪಿಎಂ)–ಕಲಬುರಗಿಯ ಆಳಂದ ತಾಲೂಕಿನ ಗ್ರಾಮವೊಂದರಲ್ಲಿ ಬಯಲು ಬಹಿರ್ದೆಸೆಗೆ ಹೋಗಿದ್ದ ಬಾಲಕಿ ಮೇಲೆ ಅತ್ಯಾಚಾರವೆಸಗಿ, ಕೊಲೆ ಮಾಡಿರುವ ಕೃತ್ಯವನ್ನು ಕರ್ನಾಟಕ ಪ್ರದೇಶ ಕುರುಬರ ಸಂಘ ತೀವ್ರವಾಗಿ ಖಂಡಿಸಿದೆ.

ಈ ಸಂಬಂಧ ಪ್ರಕಟಣೆ ನೀಡಿರುವ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ಮಳವಳ್ಳಿಯಲ್ಲಿ ಬಾಲಕಿ ಮೇಲೆ ಅತ್ಯಾಚಾರವೆಸಗಿ ಕೊಲೆಗೈದ ಪ್ರಕರಣ ಬೆನ್ನಲೇ ಅಂತಹದ್ದೇ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿದೆ. ಕಾನೂನುಗಳು ಕಠಿಣವಾಗಿದ್ದರೂ ಕಾಮಾಂಧರು ಭಯವಿಲ್ಲದೆ ತಮ್ಮ ಹೀನ ಕೃತ್ಯಗಳನ್ನು ಮುಂದುವರಿಸಿದ್ದಾರೆ. ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇವುಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಅಪರಾಧಿಗಳಿಗೆ ಗಲ್ಲು ಶಿಕ್ಷೆ ಖಾಯಂಗೊಳಿಸುವ ಕಾನೂನನ್ನು ಜಾರಿಗೊಳಿಸಬೇಕು ಅಥವಾ ಸಾರ್ವಜನಿಕವಾಗಿಯೇ ಅಂತಹವರನ್ನು ಗಲ್ಲಿಗೇರಿಸಬೇಕು.

ಇತ್ತೀಚೆಗೆ ಮುಗ್ಧ ಮಕ್ಕಳ ಅಸಹಾಯಕತೆ ಬಳಸಿಕೊಂಡು ಆಮಿಷಗಳನ್ನು ಒಡ್ಡಿ ಅವರನ್ನು ಲೈಂಗಿಕವಾಗಿ ಬಳಸಿಕೊಳ್ಳುವುದು ಹೆಚ್ಚಾಗುತ್ತಿದೆ. ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಸರ್ಕಾರ ಹೊಸ ಕಾನೂನು ರೂಪಿಸಿದ್ದರೂ ದೌರ್ಜನ್ಯ ನಿಂತಿಲ್ಲದಿರುವುದು ದುರಂತವೇ ಸರಿ. ದೇಶದಲ್ಲಿ ಪ್ರತಿ 15 ನಿಮಿಷಕ್ಕೊಂದು ಅತ್ಯಾಚಾರ ನಡೆಯುತ್ತಿದೆ ಎಂದು ಕೇಂದ್ರ ಸರ್ಕಾರದ ಸಂಸ್ಥೆಗಳ ದಾಖಲೆಗಳೇ ಸಾಕ್ಷೀಕರಿಸುತ್ತಿವೆ. ಆದರೂ ಇದರ ನಿಯಂತ್ರಣಕ್ಕೆ ಸರ್ಕಾರ ಬೇರೆ ಯಾವುದೇ ಕ್ರಮ ಕೈಗೊಂಡಿಲ್ಲ. ಇನ್ನಾದರೂ ಎಚ್ಚೆತ್ತು ಅತ್ಯಾಚಾರಿಗಳಿಗೆ ಶೀಘ್ರ ಶಿಕ್ಷೆ ಕೊಡಿಸುವ ಕಾನೂನು ಜಾರಿ ಮಾಡಬೇಕು. ಮಹಿಳೆಯರ ಹಕ್ಕುಗಳ ರಕ್ಷಣೆಗೆ ಕೇಂದ್ರ ಸರ್ಕಾರ, ವಿಶೇಷ ಕಾನೂನು ರೂಪಿಸಬೇಕು. ಸಂತ್ರಸ್ತ ಬಾಲಕಿ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ನೀಡಬೇಕು ಹಾಗೂ ಆಕೆಯ ಕುಟುಂಬದ ಒಬ್ಬರಿಗೆ ಉದ್ಯೋಗ ಭದ್ರತೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ನಿಧನ



ಎನ್.ಬಸವೇಗೌಡ

ಮೈಸೂರು, ನ. 2– ಹೊಸಹುಂಡಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು ಹಾಗೂ ಜಿಲ್ಲಾ ಕಲಾವಿದರ ಸಂಘದ ಗೌರವ ಅಧ್ಯಕ್ಷ ಎನ್. ಬಸವೇಗೌಡ(54) ಅವರು ಇಂದು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಹೆಂಡತಿ ಸುಮಲತ, ಮಕ್ಕಳಾದ ತೇಜಸ್, ಧನುಷ್ ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 12 ಗಂಟೆಗೆ ಹೊಸಹುಂಡಿ ಗ್ರಾಮದಲ್ಲಿ ನಡೆಯುತ್ತದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಸಂತಾಪ: ಎಪಿಎಂಸಿ ಮಾಜಿ ಅಧ್ಯಕ್ಷ ರಘು, ಕೆಪಿಸಿಸಿ ಸದಸ್ಯ ನರಸೇಗೌಡ, ಕೃಷ್ಣಕುಮಾರ್ ಸಾಗರ್, ಮಂಜುಳಾ, ಮಂಜುನಾಥ್ ಸಂತಾಪ ಸೂಚಿಸಿದ್ದಾರೆ.



ರಾಜ್ಯೋತ್ಸವ ಪ್ರಶಸ್ತಿ ನೀಡಲು ವಯೋಮಿತಿ ನಿರ್ಬಂಧ ಸಡಿಲಿಕೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

ಬೆಂಗಳೂರು, ನ.2– ರಾಜ್ಯೋತ್ಸವ ಪ್ರಶಸ್ತಿ ನೀಡಲು ಹಾಲಿ ಇರುವ ವಯೋಮಿತಿ ನಿರ್ಬಂಧವನ್ನು ಸಡಿಲಿಸಲಾಗುವುದು. ಈ ಬಗ್ಗೆ ಕೋರ್ಟ್‌ಗೆ ಅಫಿಡವಿಟ್ ನೀಡಿ ನಿಯಮ ಬದಲಾಯಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಗಳವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ 67ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭ ಉದ್ಘಾಟಿಸಿ, ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು. ಸಣ್ಣ ವಯಸ್ಸು ಮತ್ತು ಸಾಧನೆಗೆ ಸಂಬಂಧ ಇಲ್ಲ. ಯಾವುದೇ ವಯಸ್ಸಿನಲ್ಲೂ ಸಾಧನೆ ಮಾಡಬಹುದು. ಎಲ್ಲಾ ದೊಡ್ಡ ಸಾಧಕರೂ ಸಣ್ಣ ವಯಸ್ಸಲ್ಲೇ ಜಗತ್ತು ಬಿಟ್ಟು ಹೋಗಿದ್ದಾರೆ. 60 ವರ್ಷ ಮೀರಿರುವವರಿಗೆ ಮಾತ್ರ ಪ್ರಶಸ್ತಿ ಎನ್ನುವುದು ತಪ್ಪು ನಿರ್ಧಾರ. ಸಣ್ಣ ವಯಸ್ಸಿನ ಸಾಧಕರಿಗೂ ಪ್ರಶಸ್ತಿ ಕೊಟ್ಟರೆ ಅವರು ಮುಂದೆ ಇನ್ನೂ ದೊಡ್ಡ ಸಾಧನೆ ಮಾಡಬಹುದು. ಇದು ಇತರ ಯುವಕರಿಗೂ ಪ್ರೇರಣೆ ಆಗುತ್ತದೆ. ಮುಂದಿನ ವರ್ಷ ನಿಯಮ ಬದಲಾವಣೆ ಆಗುತ್ತದೆ. ವಯಸ್ಸಿನ ಗಡಿ ಇಲ್ಲದೇ ನಿಜವಾದ ಸಾಧಕರಿಗೆ ಪ್ರಶಸ್ತಿ ಕೊಡುವ ವ್ಯವಸ್ಥೆ ಆಗುತ್ತದೆ ಎಂದರು.

ಪುನೀತ್ ರಾಜ್‌ಕುಮಾರ್ ಸಣ್ಣ ವಯಸ್ಸಿನಲ್ಲಿ ದೊಡ್ಡ ಸಾಧನೆ ಮಾಡಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಎಲ್ಲರ ಮನದಾಳದಲ್ಲಿ ಸ್ಥಾನ ಪಡೆದಿದ್ದಾರೆ. ಎಲ್ಲೇ ಹೋದರೂ ಪುನೀತ್ ರಾಜ್ ಕುಮಾರ್ ಫೋಟೋ ಇಟ್ಟು ಪೂಜೆ ಮಾಡಿರುವುದನ್ನು ನಾವು ನೋಡ್ತೀವಿ. ಮಾನವೀಯತೆ ಇರುವ ವ್ಯಕ್ತಿ ಸಣ್ಣ ವಯಸ್ಸಿನಲ್ಲಿ ದೊಡ್ಡ ಸಾಧನೆ ಮಾಡಿದಾಗ ಅದರ ಪ್ರಭಾವ ಜನರ ಮೇಲೆ ಇರುತ್ತದೆ. ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಿದ್ದಕ್ಕೆ ಇಡೀ ಕರ್ನಾಟಕ ಸಂಭ್ರಮಿಸಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು.

ಸಾಧನೆ ಮಾಡಿ ಪ್ರಶಸ್ತಿಗಾಗಿ ಪ್ರಯತ್ನ ಮಾಡದೇ ಇರುವವರಿಗೆ ಪ್ರಶಸ್ತಿ ದೊರೆಯುತ್ತದೆ. ಕೆಲವರು ಸಾಧನೆ ಮಾಡಿ ಪ್ರಶಸ್ತಿಗಾಗಿ ಸಾಕಷ್ಟು ಪ್ರಯತ್ನ ಮಾಡುತ್ತಾರೆ. ಕೆಲವರು ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿ ಸುಮ್ಮನಿರುತ್ತಾರೆ. ಅವರಿಗೆ ನೊಬೆಲ್ ಪ್ರಶಸ್ತಿ ಹುಡುಕಿಕೊಂಡು ಬರುತ್ತದೆ ಎಂದು ಅವರು ಹೇಳಿದರು.

ಡೈನಾಮೈಟ್ ತಯಾರಕ ಆಲ್‌ಫ್ರೆಡ್ ನೊಬೆಲ್ ಸಾಕಷ್ಟು ಹಣ ಮಾಡಿದ್ದರು. ಅಕಸ್ಮಾತ್ ಆಗಿ ಒಂದು ದಿನ ಅವರು ಜೀವಂತವಾಗಿದ್ದಾಗಲೇ ಪತ್ರಿಕೆಯೊಂದರಲ್ಲಿ ಅವರ ಸಾವಿನಸುದ್ದಿ ಬಂತು. ಅವರ ವಿರುದ್ಧ ಕೆಟ್ಟ ಹೆಡ್ಲೈನ್ ಬಂದಿದ್ದು ನೋಡಿ ದುಃಖದಿಂದ ನನ್ನ ಹೆಸರನ್ನು ಜನರು ಈ ರೀತಿ ನೆನಪಿಡುತ್ತಾರಾ ಎಂದು ಬೇಸರ ಪಟ್ಟುಕೊಂಡು ಪರಿವರ್ತನೆಗೊಂಡು ಡೈನಾಮೆಟ್ ತಯಾರಿಸುವುದನ್ನು ನಿಲ್ಲಿಸಿದ. ಅದರಿಂದ ಬಂದ ಅಪಾರ ಹಣ ಮತ್ತು ಆಸ್ತಿಯನ್ನು ಉತ್ತಮ ಸಾಧನೆ ಮಾಡಿದವರಿಗೆ ನೊಬೆಲ್ ಪ್ರಶಸ್ತಿ ಕೊಡಲು ಮೀಸಲಿಟ್ಟರು. ಇದು ಉತ್ತಮ ಬದಲಾವಣೆ ಎಂದು ಸಿಎಂ ಬೊಮ್ಮಾಯಿ ಹೇಳಿದರು.

ಇಂದು ಇಲ್ಲಿ ಪ್ರಶಸ್ತಿ ಪಡೆದವರು ತಮ್ಮ ಜೀವನದುದ್ದಕ್ಕೂ ಪ್ರಶಸ್ತಿ ಪಡೆಯಲು ಪ್ರಯತ್ನ ಮಾಡಿಲ್ಲ. ತಮ್ಮ ಪಾಡಿಗೆ ಅವರು ಸಾಧನೆ ಮಾಡಿಕೊಂಡು ಬಂದಿದ್ದಾರೆ. ಇವರುಗಳನ್ನು ನಮ್ಮ ಆಯ್ಕೆ ಸಮಿತಿ ಗುರುತಿಸಿದೆ. ಹೀಗೆ ಕೇಳದೇ ಪ್ರಶಸ್ತಿ ಪಡೆಯುವುದರಿಂದ ಆ ಪ್ರಶಸ್ತಿಗೆ ಮೆರುಗು ತಂದಿದೆ, ಗೌರವ ಬಂದಿದೆ. ಹಣ ಕೊಟ್ಟರೆ ಪ್ರಶಸ್ತಿ ಸಿಗುತ್ತದೆ. ಆದರೆ ಬದುಕಿನಲ್ಲಿ ಸಾಧಕರಾಗಿ ಯಶಸ್ವಿ ಜೀವನವನ್ನು ನಡೆಸುವುದೇ ದೊಡ್ಡ ಪ್ರಶಸ್ತಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕೆಲವು ಕ್ಷೇತ್ರಗಳಲ್ಲಿ ಕೆಲವರು ಅಸಾಮಾನ್ಯ ಸಾಧನೆ ಮಾಡುತ್ತಾರೆ. ಅದು ಸಮಾಜಕ್ಕೆ ತಿಳಿದು, ಇತರರಿಗೆ ಪ್ರೇರಣೆ ಆಗಬೇಕು. ಅದಕ್ಕಾಗಿ ಸಂಸ್ಥೆಗಳು ಸರ್ಕಾರಗಳು ಪ್ರಶಸ್ತಿಯನ್ನು ಕೊಡುತ್ತವೆ. ಜತೆಗೆ ಪ್ರಶಸ್ತಿ ಪಡೆದ ವ್ಯಕ್ತಿ ಇನ್ನಷ್ಟು ಉತ್ತಮ ಕೆಲಸ ಮಾಡಲು ಪ್ರೇರಣೆಯಾಗುತ್ತದೆ. ಸಮಾಜದಲ್ಲಿ ಸರಿಯಾದವರನ್ನು ಗುರುತಿಸಿ ಪ್ರಶಸ್ತಿ ಕೊಟ್ಟಾಗ ಪ್ರಶಸ್ತಿಗೂ ಗೌರವ ಬರುತ್ತದೆ, ಪ್ರಶಸ್ತಿ ಪಡೆದವರಿಗೂ ಗೌರವ ಹೆಚ್ಚುತ್ತದೆ ಎಂದು ಸಿಎಂ ಬೊಮ್ಮಾಯಿ ಅವರು ಹೇಳಿದರು.

ಮೈಸೂರಿನ ಡಿ.ಮಾದೇಗೌಡ, ಪ್ರೊ.ಕೃಷ್ಣೇಗೌಡ ಸೇರಿ 67 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ

ಮೈಸೂರು ರಾಮಕೃಷ್ಣಾಶ್ರಮ ಸೇರಿ 10 ಸಂಸ್ಥೆಗಳಿಗೆ ಅಮೃತ ಮಹೋತ್ಸವ ರಾಜ್ಯ ಪ್ರಶಸ್ತಿ ಪ್ರದಾನ

ಬೆಂಗಳೂರು, ನ.2– ವಿಧಾನ ಪರಿಷತ್ ಮಾಜಿ ಸದಸ್ಯ ಮೈಸೂರಿನವರೇ ಆದ ಡಿ.ಮಾದೇಗೌಡ, ವಾಗ್ಮಿ ಹಾಗೂ ಸಾಹಿತಿ ಪ್ರೊ. ಕೃಷ್ಣೇಗೌಡ ಸೇರಿದಂತೆ 67 ಸಾಧಕರಿಗೆ ಈ ಬಾರಿಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಲ್ಲದೇ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಮೈಸೂರಿನ ರಾಮಕೃಷ್ಣ ಆಶ್ರಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ 10 ಸಂಘ–ಸಂಸ್ಥೆಗಳಿಗೆ ಅಮೃತ ಮಹೋತ್ಸವ ರಾಜ್ಯ ಪ್ರಶಸ್ತಿಯನ್ನು ನೀಡಲಾಯಿತು.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಈ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಇಸ್ರೋ ಮಾಜಿ ನಿರ್ದೇಶಕ ಶಿವನ್, ಹಿರಿಯ ಸಾಹಿತಿ ಅ.ರಾ.ಮಿತ್ರ, ಇಂಗ್ಲಿಷ್ ಕಡಲ್ಗಾಲುವೆ ಈಜಿದ ವಿಕಲಚೇತನ ಕ್ರೀಡಾಪಟು ರಾಘವೇಂದ್ರ ಅಣ್ವೇಕರ್, ನಿವೃತ್ತ ಐಎಎಸ್ ಅಧಿಕಾರಿ ಮದನ್ ಗೋಪಾಲ್, ಸೋಲಿಗ ಸಮುದಾಯದಲ್ಲಿ ಸಹಕಾರದ ಬೆಳಕು ಚೆಲ್ಲಿದ ಸೋಲಿಗರ ಮಾದಮ್ಮ, ವನ ಸಂರಕ್ಷಣೆಗಾಗಿ ಜೀವನವನ್ನೇ ಮುಡುಪಾಗಿಟ್ಟ ರಾಮನಗರದ ಸಾಲುಮರದ ನಿಂಗಣ್ಣ, ಹಿರಿಯ ಚಲನಚಿತ್ರ ನಟರಾದ ದತ್ತಣ್ಣ, ಅವಿನಾಶ್, ಪೌರ ಸೇನಾನಿ ಶ್ರೀಮತಿ ಮಲ್ಲಮ್ಮ, ಉಡುಪಿ ಜಿಲ್ಲೆಯ ದೈವನರ್ತಕ ಗುಡ್ಡ ಪಾಣಾರ.

ಇನ್ನು ಕಿರುತೆರೆ ನಟ ಸಿಹಿಕಹಿ ಚಂದ್ರು, ಯಕ್ಷಗಾನ ಕಲಾವಿದರಾದ ಡಾ. ಎಂ.ಪ್ರಭಾಕರ ಜೋಷಿ, ಸುಬ್ರಹ್ಮಣ್ಯ ಧಾರೇಶ್ವರ, ವೀರಗಾಸೆ ಕಲಾವಿದ ಹಾವೇರಿಯ ಮಹೇಶ್ವರ ಗೌಡ ಲಿಂಗದಹಳ್ಳಿ, ಕಮಲಮ್ಮ ಸೂಲಗಿತ್ತಿ, ಹಿರಿಯ ಸಂಗೀತ ವಿದ್ವಾಂಸ ಅನಂತಾಚಾರ್ಯ ಬಾಳಾಚಾರ್ಯ, ಹಿರಿಯ ಪತ್ರಕರ್ತರಾದ ಎಚ್.ಆರ್. ಶ್ರೀಶ, ಜಿ.ಎಂ.ಶಿರಹಟ್ಟಿ, ಹಿರಿಯ ಸಂಶೋಧಕ ಡಾ.ಎಂ.ಜಿ. ನಾಗರಾಜ್ ಸೇರಿದಂತೆ 67 ಸಾಧಕರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಸಾಧಕರಿಗೆ ಶಾಲು ಹೊದಿಸಿ, ಮೈಸೂರು ಪೇಟ ತೊಡಿಸಿ, ಪ್ರಶಸ್ತಿ ಫಲಕ ನೀಡಿ ಗೌರವಿಸಲಾಯಿತು. ಪ್ರಶಸ್ತಿಯು 25 ಗ್ರಾಂ ತೂಕದ ಚಿನ್ನದ ಪದಕ ಹಾಗೂ ಐದು ಲಕ್ಷ ರೂಪಾಯಿ ನಗದನ್ನು ಒಳಗೊಂಡಿದೆ.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ



ಮೈಸೂರು ನಗರದ ಶ್ರೀ ರಾಘವೇಂದ್ರ ಪ್ರತಿಷ್ಠಾನದ ವತಿಯಿಂದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರನ್ನು ಅಭಿನಂದಿಸಿ, ಗೌರವ ಸಮರ್ಪಣೆ ಮಾಡಲಾಯಿತು. ಚಿತ್ರದಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀ ರಾಘವೇಂದ್ರ ಪ್ರತಿಷ್ಠಾನದ ಅಧ್ಯಕ್ಷರಾದ ಎಸ್.ನಾಗರಾಜ, ಸಮಾಜ ಸೇವಕರಾದ ರಾಜೇಂದ್ರ ಸಾಂಬಮೂರ್ತಿ, ಸತೀಶ್ ಅವರನ್ನು ಕಾಣಬಹುದು.



ಮೈಸೂರಿನ ಹೆಲ್ಪಿಂಗ್ ಹ್ಯಾಂಡ್ಸ್ ಸಂಸ್ಥೆ ವತಿಯಿಂದ ತಾಯಿ ಭುವನೇಶ್ವರಿಗೆ ಪೂಜೆ ಸಲ್ಲಿಸುವ ಮೂಲಕ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಪಾಲಿಕೆ ಸದಸ್ಯೆ ಛಾಯಾದೇವಿ, ಅಧ್ಯಕ್ಷ ಮಹಾವೀರ್ ಕಬಿಯಾ, ಕಾರ್ಯದರ್ಶಿ ಆನಂದ್ ಪತ್ವಾ, ಖಜಾಂಚಿ ರಾಜನ್ ಬಾಗ್‌ಮಾರ್, ಮನೋಹರ್‌ಲಾಲ್ ಶಂಕ್ಲಾ, ಸುನೀಲ್ ಪಟ್ವಾ, ಪ್ರಕಾಶ್ ಗಾಂಧಿ, ಜಂಬೂ ಲೋದಾ, ಗೌತಮ್ ಪಟ್ವಾ, ಭರತ್ ಭಂಡಾರಿ, ಶಾಲೆ ಮುಖ್ಯೋಪಾಧ್ಯಾಯರು, ವಿದ್ಯಾರ್ಥಿಗಳು ಹಾಜರಿದ್ದರು.



ಮೈಸೂರಿನ ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ ಸಂಘದ ಕಚೇರಿಯಲ್ಲಿ 67ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮಹಾಸಭಾದ ಗೌರವ ಸಲಹೆಗಾರ ಡಾ. ಬಿ.ಎನ್.ರವೀಶ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಮಹಾಸಭಾ ಕೋಶಾಧ್ಯಕ್ಷ ಎಂ. ಎನ್.ಚಂದ್ರಶೇಖರ್, ಕಾರ್ಯದರ್ಶಿ ರವಿಕುಮಾರ್, ಮುಡಾ ಸದಸ್ಯೆ ಶ್ರೀಮತಿ ಲಕ್ಷ್ಮೀದೇವಿ, ಸಿರಿ ಬಾಲು, ಸುರೇಶ್ ಇತರರಿದ್ದರು.


ಪುನೀತ್ ರಾಜ್‌ಕುಮಾರ್‌ಗೆ ಕರ್ನಾಟಕ ರತ್ನ ಪ್ರಶಸ್ತಿ

ಅಪ್ಪು ದೇವರ ಮಗ-ರಜನಿ, ನಗುವಿನಿಂದಲೇ ರಾಜ್ಯ ಗೆದ್ದ ರಾಜ ಪುನೀತ್: ಜ್ಯೂ. ಎನ್‌ಟಿಆರ್

ಬೆಂಗಳೂರು, ನ.2– ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಗಣ್ಯರ ಸಮ್ಮುಖದಲ್ಲಿ ದಿ.ಪುನೀತ್ ರಾಜ್ ಕುಮಾರ್ ಅವರಿಗೆ ನ.1ರಂದು ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಳೆಯನ್ನೂ ಲೆಕ್ಕಿಸದೇ ಸಹಸ್ರಾರು ಅಭಿಮಾನಿಗಳು ತಮ್ಮ ನೆಚ್ಚಿನ ನಟನಿಗೆ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡಿದ್ದನ್ನು ಕಣ್ತುಂಬಿಕೊಂಡರು. ಕಾರ್ಯಕ್ರಮದಲ್ಲಿ ಡಾ.ಸುಧಾಮೂರ್ತಿ, ಪುನೀತ್ ರಾಜ್ ಕುಮಾರ್ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿ ಅಭಿಮಾನಿಗಳನ್ನುದ್ದೇಶಿಸಿ ಮಾತನಾಡಿದ ಸೂಪರ್ ಸ್ಟಾರ್ ರಜನಿಕಾಂತ್, ಅಪ್ಪು ಸಾಧಾರಣ ವ್ಯಕ್ತಿಯಲ್ಲ, ಆತ ಅಪಾರವಾದದ್ದನ್ನು ಸಾಧಿಸಿದ್ದಾರೆ. ಕಲಿಯುಗಕ್ಕೆ ಪುನೀತ್ ದೇವರ ಮಗು, ಎನ್‌ಟಿಆರ್, ಎಂಜಿಆರ್, ಶಿವಾಜಿ ಗಣೇಶನ್, ರಾಜ್‌ಕುಮಾರ್ ಅವರು 50 ವರ್ಷದಲ್ಲಿ ಸಾಧಿಸಿದ್ದನ್ನು ಅಪ್ಪು 20 ವರ್ಷಗಳಲ್ಲಿ ಸಾಧಿಸಿದ್ದರು. ಅಪ್ಪು ಯಾವಾಗಲೂ ನಮ್ಮೊಂದಿಗೇ ಇರುತ್ತಾರೆ. ಕೇವಲ ನಟನೆಯಿಂದಷ್ಟೇ ಜನರನ್ನು ಗೆಲ್ಲಲು ಸಾಧ್ಯವಿಲ್ಲ. ಆದರ್ಶಗಳ ಮೂಲಕವೂ ಗೆಲ್ಲಬಹುದು. ಅದನ್ನು ನಮ್ಮ ಅಪ್ಪು ಮಾಡಿದ್ದಾರೆ ಎಂದು ಬಣ್ಣಿಸಿದರು. ಇದೇ ವೇಳೆ 1979 ರಲ್ಲಿ ಶಬರಿಮಲೆ ಯಾತ್ರೆ ವೇಳೆ ತಾವು ಪುನೀತ್ ರಾಜ್‌ಕುಮಾರ್ ಅವರನ್ನು ಮೊದಲ ಬಾರಿ ನೋಡಿದ್ದನ್ನು ರಜನಿಕಾಂತ್ ಸ್ಮರಿಸಿಕೊಂಡರು,



ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜ್ಯೂ ಎನ್‌ಟಿಆರ್, ಒಬ್ಬ ವ್ಯಕ್ತಿಗೆ ಉಪನಾಮ ಎಂಬುದು ಪರಂಪರೆಯಿಂದ ಬರುತ್ತದೆ. ಆದರೆ ವ್ಯಕ್ತಿತ್ವ ಸ್ವಂತ ಸಂಪಾದನೆಯಾಗಿರುತ್ತದೆ. ಸ್ವಂತ ವ್ಯಕ್ತಿತ್ವದಿಂದ ನಗುವಿನಿಂದಲೇ ಒಂದು ರಾಜ್ಯ ಗೆದ್ದ ರಾಜ ಪುನೀತ್ ರಾಜ್‌ಕುಮಾರ್ ಅವರು ಎಲ್ಲಕ್ಕೂ ಮಿಗಿಲಾಗಿ ಶ್ರೇಷ್ಠ ವ್ಯಕ್ತಿತ್ವದವರಾಗಿದ್ದರು. ಪುನೀತ್ ನಗುವಿನ ಒಡೆಯ ಅವರ ವ್ಯಕ್ತಿತ್ವದಿಂದ ಅಭಿಮಾನಿಗಳನ್ನು ಪಡೆದಿದ್ದರು, ಕರ್ನಾಟಕ ರತ್ನದ ಅರ್ಥವೇ ಪುನೀತ್ ರಾಜ್ ಕುಮಾರ್ ಅವರಾಗಿದ್ದಾರೆ. ಈ ಕಾರ್ಯಕ್ರಮದಲ್ಲಿ ಹೆಮ್ಮೆಯ ಗೆಳೆಯನಾಗಿ ನಿಂತಿದ್ದೇನೆ, ಈ ಅವಕಾಶ ನೀಡಿದ್ದಕ್ಕೆ ಸರ್ಕಾರಕ್ಕೆ, ಡಾ. ರಾಜ್ ಕುಟುಂಬಕ್ಕೆ ಧನ್ಯವಾದ ತಿಳಿಸುತ್ತೇನೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಸಿಎಂ ಬೊಮ್ಮಾಯಿ, ಪುನೀತ್‌ಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡುತ್ತಿರುವುದು ನನ್ನ ಪುಣ್ಯ ಭಾಗ್ಯ, ಸರ್ಕಾರದ ಪುಣ್ಯಭಾಗ್ಯ, ಸೌಭಾಗ್ಯ ಸಿಕ್ಕಿದೆ ಎಂದು ಹೇಳಿದರು.

ಮೆಲ್ಲಹಳ್ಳಿ ಸರ್ಕಾರಿ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ

ಮೈಸೂರು, ನ.2– ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿ ಯುವಜನರಲ್ಲಿ ಆಂಗ್ಲಭಾಷಾ ವ್ಯಾಮೋಹ ಹೆಚ್ಚುತ್ತಿದೆ. ಇದರಿಂದಾಗಿ ಅವರಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಪರಂಪರೆಯ ಬಗ್ಗೆ ಅಸಡ್ಡೆ ಮನೋಭಾವ ವ್ಯಾಪಕವಾಗಿ ಬೆಳೆಯುತ್ತಿದೆ ಎಂದು ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಹಾಗೂ ಸಾಹಿತಿ ಟಿ. ಸತೀಶ್ ಜವರೇಗೌಡ ವಿಷಾದಿಸಿದರು.

ತಾಲೂಕಿನ ಮೆಲ್ಲಹಳ್ಳಿಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ 67ನೇ ಕನ್ನಡ ರಾಜ್ಯೋತ್ಸವದಲ್ಲಿ ಪ್ರಧಾನ ಭಾಷಣ ಮಾಡಿದ ಅವರು, ಪ್ರಾಚೀನತೆ ಜೊತೆಗೆ ಉತ್ಕೃಷ್ಟವಾದ ಪರಂಪರೆ ಹೊಂದಿರುವ ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಪ್ರೀತಿ, ಗೌರವ, ಅಭಿಮಾನ ಬೆಳೆಸಿಕೊಂಡು ದಿನನಿತ್ಯ ಬಳಸುವ ಮೂಲಕ ಉಳಿಸಿ ಬೆಳೆಸುವ ಜವಾಬ್ದಾರಿ ವಿದ್ಯಾರ್ಥಿಗಳ ಮೇಲಿದೆ ಎಂದರು.

ಕನ್ನಡ ಭಾಷಾ ಶಿಕ್ಷಕ ರಂಗಸ್ವಾಮಿ ಅವರು ಕರ್ನಾಟಕ ಏಕೀಕರಣ ಕುರಿತು ಮಾತನಾಡಿದರು. ಮುಖ್ಯ ಶಿಕ್ಷಕಿ ಕೆ.ವಿ. ಪುಷ್ಪಲತಾ ಅಧ್ಯಕ್ಷತೆ ವಹಿಸಿದ್ದರು. ಎಸ್‌ಡಿಎಂಸಿ ಸದಸ್ಯರಾದ ಗವಿಸಿದ್ದೇಗೌಡ, ಶಂಕರ್, ಹಿರಿಯ ಶಿಕ್ಷಕಿಯರಾದ ಸತ್ಯವತಿ, ಪಿ.ಎಲ್. ಭಾಗ್ಯ, ಟಿಜಿಟಿ ಶಿಕ್ಷಕ ಸುನೀಲ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು. ಶಾಲಾ ವಿದ್ಯಾರ್ಥಿಗಳಿಂದ ಕನ್ನಡ ನಾಡು–ನುಡಿ ಕುರಿತು ನೃತ್ಯ ಕಾರ್ಯಕ್ರಮ ನಡೆಯಿತು.





ಜಿಲ್ಲಾಡಳಿತದಿಂದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಮುಂಭಾಗ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಹಾಗೂ ಅಖಿಲ ಭಾರತೀಯ ಗ್ರಾಹಕ ಪಂಚಾಯತ್‌ನ ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ. ರಾಮದಾಸ್, ಎಲ್.ನಾಗೇಂದ್ರ, ಮತ್ತು ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಶಿವಕುಮಾರ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಮತ್ತಿತರರು ಹಾಜರಿದ್ದರು.



ಮೈಸೂರಿನ ಸಿದ್ಧಾರ್ಥನಗರದ ಗೀತಾ ಶಿಶು ಶಿಕ್ಷಣ ಸಂಘದ ಆಶ್ರಯದಲ್ಲಿ ಬದರಿ ಪ್ರಸಾದ್ ಜೀ ಪದವಿ ಪೂರ್ವ ಕಾಲೇಜು, ಬಂಟ್ವಾಳ ಮಾಧವ ಶೆಣೈ ಪ್ರೌಢಶಾಲೆ ಮತ್ತು ಗೀತಾ ಭಾರತಿ ಶಾಲೆಯಲ್ಲಿ 67ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಜಿಎಸ್‌ಎಸ್‌ಎಸ್ ಸಂಸ್ಥೆಯ ಸದಸ್ಯರು ಹಾಗೂ ಸಂಯೋಜನಾಧಿಕಾರಿ ಬಿ.ಕೆ. ನಟರಾಜ್, ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಶಾಹಿದಾ ಬಾನು, ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಹೇಮಲತಾ ಎಸ್. ಆರ್., ಶಾಲೆಯ ಮುಖ್ಯೋಪಾಧ್ಯಾಯಿನಿಯಾದ ಶ್ರೀಮತಿ ಸುಮನಾ., ಬೋಧಕ – ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಪೋಷಕರು ಭಾಗವಹಿಸಿದ್ದರು.

ಕೆ.ಆರ್.ಆಸ್ಪತ್ರೆಯಲ್ಲಿ ರಾಜ್ಯೋತ್ಸವ

ಮೈಸೂರು, ನ.2(ಆರ್‌ಕೆ)–ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.



ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಅಂಡ್ ಡೈರೆಕ್ಟರ್ ಡಾ.ಕೆ.ಆರ್. ದಾಕ್ಷಾಯಿಣಿ ಕನ್ನಡಾಂಬೆಗೆ ಪುಷ್ಪಾರ್ಚನೆ ಹಾಗೂ ಕನ್ನಡ ಧ್ವಜಾರೋಹಣ ಮಾಡಿದರು. ಈ ಸಂದರ್ಭ ಮಾತನಾಡಿದ ಅವರು, ಕನ್ನಡ ನಾಡು–ನುಡಿ, ಭಾಷೆ, ಸಂಸ್ಕೃತಿ, ಕಲೆಯನ್ನು ಉಳಿಸಿ–ಬೆಳೆಸುವ ನಿಟ್ಟಿನಲ್ಲಿ ಕನ್ನಡಿಗರಾದ ನಾವು ಕಾರ್ಯ ಪ್ರವೃತ್ತರಾದಾಗ ಮಾತ್ರ ಕನ್ನಡ ರಾಜ್ಯೋತ್ಸವ ಆಚರಣೆಗೆ ಅರ್ಥ ಬರುತ್ತದೆ ಎಂದರು. ಇದೇ ವೇಳೆ ಆಸ್ಪತ್ರೆಯ ಇಬ್ಬರು ನರ್ಸ್‌ಗಳು, ಇಬ್ಬರು ಸ್ವಚ್ಛತಾ ಸಿಬ್ಬಂದಿ, ಇಬ್ಬರು ವಾರ್ಡ್‌ಬಾಯ್‌ಗಳು, ಓರ್ವ ವಾಹನ ಚಾಲಕ, ಓರ್ವ 'ಡಿ' ಗ್ರೂಪ್ ನೌಕರ, ಓರ್ವ ಭದ್ರತಾ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು.

ಎಂಎಂಸಿಆರ್‌ಐ ಆಡಳಿತಾಧಿಕಾರಿ ಮಹದೇವನಾಯ್ಕ, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಬಿ.ಎಲ್.ನಂಜುಂಡಸ್ವಾಮಿ, ಸ್ಥಾನಿಕ ವೈದ್ಯಾಧಿಕಾರಿ ಡಾ. ರಾಜೇಶ್, ಡಾ. ಬ್ರಹ್ಮೇಂದ್ರ, ಡಾ. ಚೇತನ್, ನರ್ಸಿಂಗ್ ಸೂಪರಿಂಟೆಂಡೆಂಟ್‌ಗಳಾದ ಗಂಗಮ್ಮ, ಕೋಮಲ, ಸಣ್ಣಮ್ಮ, ಸೂಪರ್ ವೈಸರ್‌ಗಳಾದ ಮಹದೇವು, ಮಹದೇವಸ್ವಾಮಿ, ಮಂಗಳಗೌರಿ, ಕುಮಾರ, ಆದಿ ಲಕ್ಷ್ಮಿ, ಜಗದೀಶ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಮೈಸೂರು ಡಿವಿಷನ್ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್ (ಎಂಡಿಸಿಸಿಎ) ವತಿಯಿಂದ ಮೈಸೂರಿನ ವಿಶ್ವ ಪ್ರಸಿದ್ಧ ಸಂತ ಫಿಲೋಮಿನಾ ಚರ್ಚ್ ವೃತ್ತದಲ್ಲಿ ಮೊಟ್ಟ ಮೊದಲ ಬಾರಿಗೆ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಎಂಡಿಸಿಸಿಎ ಅಧ್ಯಕ್ಷ ಜೆ. ಸ್ಟೀಫನ್ ಸುಜೀತ್, ಉಪಾಧ್ಯಕ್ಷ ಎಲ್ವಿನ್, ಕಾರ್ಯದರ್ಶಿ ಅಂಬ್ರಸ್ ಜಾರ್ಜ್, ಖಜಾಂಚಿ ಜೋನ್ಸನ್ ಬೆನ್ನಿ, ಸಿಸಿಬಿ ಪೊಲೀಸ್ ಅಧಿಕಾರಿ ಅಲಕ್ಸಾಂಡರ್, ನಗರಪಾಲಿಕೆ ಮಾಜಿ ಸದಸ್ಯ ಸೋಹೆಲ್ ಬೇಗ್, ಕನ್ನಡ ಕ್ರಾಂತಿ ದಳದ ರಾಜ್ಯಾಧ್ಯಕ್ಷ ತೇಜಸ್ವಿ ನಾಗಲಿಂಗ ಸ್ವಾಮಿ, ಕಸ್ತೂರಿ ಕನ್ನಡ ನ್ಯಾಯಪರ ವೇದಿಕೆ ಗಿರೀಶ್ ಶಿವಾರ್ಚಕ, ಮಾದೇಶ್ ನಾಯಕ್, ಕನ್ನಡ ಕ್ರೈಸ್ತರ ಸಂಘದ ಅಧ್ಯಕರು ಫಿಲೋಮಿನ್ ರಾಜ್, ಕಾರ್ಯದರ್ಶಿ ರಾಫೆಲ್, ಆಂಗ್ಲೋ ಇಂಡಿಯನ್ ಸಂಘದ ಉಪಾಧ್ಯಕ್ಷ ಎಡ್ವರ್ಡ್, ಎನ್‌ಜಿಓ ಜಿಲ್ಲಾ ಅಧ್ಯಕ್ಷರು ಮಂಗಳಗೌರಿ,ಅನಿಲ್ ತೋಮಸ್, ಸಯ್ಯದ್ ಅಶ್ರಫ್, ರೋಸಿಟ ಮೇರಿ, ಸಂತೋಷ ಪಾಲ್, ಉಸ್ಮಾನ್ ಉಪಸ್ಥಿತರಿದ್ದರು.

ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ

ತಲೆ ಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ಲುಕ್‌ಔಟ್ ನೋಟೀಸ್ ಜಾರಿ

ಆರೋಪಿಗಳ ಸುಳಿವು ನೀಡಿದವರಿಗೆ 14 ಲಕ್ಷ ರೂ.ಗಳ ಬಹುಮಾನ ಘೋಷಣೆ

- ನಾಪತ್ತೆಯಾಗಿರುವ ಆರೋಪಿಗಳಲ್ಲಿ ಒಬ್ಬಾತ ಮಡಿಕೇರಿಯವನು
- ಮಡಿಕೇರಿಯಲ್ಲೂ ರಾಷ್ಟ್ರೀಯ ತನಿಖಾ ದಳದಿಂದ ತನಿಖೆ

ಮಡಿಕೇರಿ,ನ.2– ಸುಳ್ಯ ತಾಲೂಕಿನ ಬೆಳ್ಳಾರೆಯ ಮಾಸ್ತಿಕಟ್ಟೆಯಲ್ಲಿ ಜು.26ರಂದು ನಡೆದಿದ್ದ ಬಿಜೆಪಿ ಯುವ ನಾಯಕ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ನಾಲ್ವರು ಆರೋಪಿಗಳು ತಲೆ ಮರೆಸಿಕೊಂಡಿದ್ದು, ಆರೋಪಿಗಳ ವಿರುದ್ಧ ರಾಷ್ಟ್ರೀಯ ತನಿಖಾ ದಳ 'ಲುಕ್‌ಔಟ್ ನೋಟೀಸ್' ಜಾರಿ ಮಾಡಿದೆ. ಮಾತ್ರವಲ್ಲದೇ 4 ಮಂದಿ ಆರೋಪಿಗಳ ಸುಳಿವು ನೀಡಿದವರಿಗೆ ಒಟ್ಟು 14 ಲಕ್ಷ ರೂ.ಗಳ ಬಹುಮಾನ ನೀಡುವುದಾಗಿ ಘೋಷಣೆ ಮಾಡಿದೆ.

> ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣವನ್ನು ಈಗಾಗಲೇ ಎನ್.ಐ.ಎ ತನಿಖೆ ನಡೆಸುತ್ತಿದ್ದು, ಕೊಡಗು ಪೊಲೀಸರು ಎನ್.ಐ.ಎ ತನಿಖೆಗೆ ಎಲ್ಲಾ ಸಹಕಾರ ನೀಡುತ್ತಿದ್ದಾರೆ. ಓರ್ವ ಆರೋಪಿ ತುಫೈಲ್ ಎಂಬಾತ ಮಡಿಕೇರಿಯವನಾಗಿದ್ದು, ಆತನ ಮನೆ ಗದ್ದುಗೆ ಬಳಿ ಇದೆ. ಎನ್.ಐ.ಎ. ಬಿಡುಗಡೆ ಮಾಡಿರುವ ಪೋಸ್ಟರ್‌ಗಳನ್ನು ಅವರ ಆದೇಶದಂತೆ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಅಂಟಿಸಲಾಗಿದೆ. ಆರೋಪಿಗಳ ಸುಳಿವು ನೀಡಿದವರಿಗೆ ಬಹುಮಾನವನ್ನೂ ಘೋಷಣೆ ಮಾಡಲಾಗಿದ್ದು, ಇದು ಪ್ರಕರಣದ ಹೆಚ್ಚಿನ ತನಿಖೆಗೆ ಸಹಕಾರಿಯಾಗಲಿದೆ.
> –ಕ್ಯಾಪ್ಟನ್ ಮಲ್ಚೀರ ಎ.ಅಯ್ಯಪ್ಪ, ಕೊಡಗು ಎಸ್.ಪಿ.

ಲಕ್ಷ ರೂ. ಬಹುಮಾನ: ಮಡಿಕೇರಿ ಗದ್ದುಗೆ ಮಸೀದಿ ನಿವಾಸಿ ಎಂ.ಹೆಚ್. ಹಮೀದ್ ಎಂಬವರ ಪುತ್ರ ತುಫೈಲ್ ಎಂಬಾತ ನಿಷೇಧಿತ ಪಿಎಫ್‌ಐ ಸಂಘಟನೆಯ ಸದಸ್ಯನಾಗಿದ್ದು, ಕೊಲೆ ಪ್ರಕರಣದ ಬಳಿಕ ತಲೆ ಮರೆಸಿಕೊಂಡಿದ್ದಾನೆ. ಈತನ ಬಗ್ಗೆ ಮಾಹಿತಿ ನೀಡಿದಲ್ಲಿ 5 ಲಕ್ಷ ರೂ. ನೀಡುವುದಾಗಿ ಎನ್.ಐ.ಎ. ಪೋಸ್ಟರ್ ಬಿಡುಗಡೆ ಮಾಡಿದೆ. ಮಾತ್ರವಲ್ಲದೆ, ಇನ್ನೂ 3 ಮಂದಿ ಆರೋಪಿಗಳಾದ ಸುಳ್ಯ ತಾಲೂಕಿನ ಮೊಹಮದ್ ಮುಸ್ತಫಾ ಹೆಸರಲ್ಲಿ 5 ಲಕ್ಷ ರೂ, ಉಮ್ಮರ್ ಫಾರೂಕ್‌ಗೆ 2 ಲಕ್ಷ ರೂ ಹಾಗೂ ಮತ್ತೋರ್ವ ಆರೋಪಿ ಅಬೂಬುಕ್ಕರ್ ಸಿದ್ದಿಕಿ ಬಗ್ಗೆ ಮಾಹಿತಿ ನೀಡಿದಲ್ಲಿ 2 ಲಕ್ಷ ರೂ. ನೀಡುವುದಾಗಿ ರಾಷ್ಟ್ರೀಯ ತನಿಖಾ ದಳ ಸಾರ್ವಜನಿಕ ಪ್ರಕಟಣೆ ಹೊರಡಿಸಿದೆ.

ತಲೆಮರೆಸಿಕೊಂಡ ಆರೋಪಿಗಳು: ಪ್ರವೀಣ್ ನೆಟ್ಟಾರು ಅವರ ಹತ್ಯೆ ನಂತರ ರಾಜ್ಯಾದ್ಯಂತ ಪರಿಸ್ಥಿತಿ ಬಿಗಡಾಯಿಸಿ, ಕೊನೆಗೆ ತನಿಖೆಯ ಜವಾಬ್ದಾರಿಯನ್ನು ರಾಜ್ಯ ಸರಕಾರ ಎನ್‌ಐಎಗೆ ವಹಿಸಿತ್ತು. ಎನ್‌ಐಎ ತನಿಖೆ ಕೈಗೆತ್ತಿಕೊಳ್ಳಲು ತಡವಾದ ಕಾರಣ ಕೆಲವು ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ. ಕೊಲೆ ನಡೆದು 2 ತಿಂಗಳು ಕಳೆದರೂ ಪ್ರಕರಣದಲ್ಲಿ ಭಾಗಿಯಾಗಿರುವ ಇನ್ನೂ ಕೆಲ ಆರೋಪಿಗಳನ್ನು ಪತ್ತೆಹಚ್ಚಲು ಸಾಧ್ಯವಾಗಿಲ್ಲ. ಹೀಗಾಗಿ ಕೊಲೆ ಕೃತ್ಯದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ನಾಲ್ವರು ಆರೋಪಿಗಳ ಪತ್ತೆಗೆ ಈಗ ಎನ್.ಐ.ಎ. ಬಹುಮಾನ ಘೋಷಿಸಿದೆ.

ಈ ಬೆಳವಣಿಗೆಗಳ ನಡುವೆ ರಾಷ್ಟ್ರೀಯ ತನಿಖಾ ದಳ ಸೆ.6 ಮತ್ತು ಸೆ.22ರಂದು ಮಡಿಕೇರಿಗೆ ಆಗಮಿಸಿ ತುಫೈಲ್ ಮನೆಗೆ ತೆರಳಿ ಮಾಹಿತಿ ಕಲೆ ಹಾಕಿತ್ತು. ಪ್ರವೀಣ್ ನೆಟ್ಟಾರು ಕೊಲೆ ಕೃತ್ಯದ ಬಳಿಕ ತುಫೈಲ್ ಮಡಿಕೇರಿಗೆ ಆಗಮಿಸಿರುವ ಶಂಕೆ ವ್ಯಕ್ತಪಡಿಸಿದ್ದ ಎನ್‌ಐಎ ಅಧಿಕಾರಿಗಳು ನಗರದಲ್ಲೂ ಶೋಧ ಕಾರ್ಯ ನಡೆಸಿದ್ದರು.



ಪೋಸ್ಟರ್ ಬಿಡುಗಡೆ: ಇದೀಗ ಕೊಲೆ ಪ್ರಕರಣದ 4 ಮಂದಿ ಆರೋಪಿಗಳ ಪೋಸ್ಟರ್‌ಗಳನ್ನು ಎನ್.ಐ.ಎ ಸಾರ್ವಜನಿಕವಾಗಿ ಬಿಡುಗಡೆ ಮಾಡಿದೆ. ಆರೋಪಿಗಳ ಮನೆ ಮತ್ತು ಸುತ್ತಮುತ್ತಲಿನ ಪ್ರದೇಶ, ಕೋರ್ಟ್ ಆವರಣ, ಬಸ್ ನಿಲ್ದಾಣ, ಮಾತ್ರವಲ್ಲದೇ ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲಾ 4 ಮಂದಿ ಆರೋಪಿಗಳ ಪೋಸ್ಟರ್‌ಗಳನ್ನು ಮಡಿಕೇರಿ ನಗರ ಪೊಲೀಸರು ಅಂಟಿಸಿದ್ದಾರೆ. ಮಾತ್ರವಲ್ಲದೇ ಎಲ್ಲಾ ಸಾಮಾಜಿಕ ಜಾಲತಾಣಗಳಲ್ಲೂ ಆರೋಪಿಗಳ ಫೋಟೋ ಇರುವ ಪೋಸ್ಟರ್‌ಗಳು ವೈರಲ್ ಆಗಿವೆ.

ಆರೋಪಿಗಳ ಮಾಹಿತಿ ನೀಡಿ: ಕೊಲೆ ಪ್ರಕರಣದ 4 ಮಂದಿ ಆರೋಪಿಗಳು ನಿಷೇಧಿತ ಪಿಎಫ್‌ಐ ಸಂಘಟನೆಗಳ ಸದಸ್ಯರಾಗಿದ್ದು, ಇವರ ಬಗ್ಗೆ ಸುಳಿವು ನೀಡುವವರ ಮಾಹಿತಿಯನ್ನು ಗೌಪ್ಯವಾಗಿಡುವುದಾಗಿ ಎನ್.ಐ.ಎ ತಿಳಿಸಿದೆ. ಸುಳಿವು ನೀಡುವವರು 080–29510900, 8904241100 ಸಂಖ್ಯೆಯನ್ನು ಸಂಪರ್ಕಿಸುವಂತೆ ಮನವಿ ಮಾಡಿದೆ. ಮಾತ್ರವಲ್ಲದೇ ಪೊಲೀಸ್ ಅಧೀಕ್ಷಕರು, ರಾಷ್ಟ್ರೀಯ ತನಿಖಾ ದಳ, 8ನೇ ಮಹಡಿ, ಸರ್.ಎಂ. ವಿಶ್ವೇಶ್ವರಯ್ಯ ಕೇಂದ್ರೀಯ ಸದನ, ದೊಮ್ಲೂರು, ಬೆಂಗಳೂರು–560071 ಇಲ್ಲಿಗೂ ಮಾಹಿತಿ ಒದಗಿಸಬಹುದೆಂದು ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಸಿದೆ.

ಮಡಿಕೇರಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಹಳೆ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಮಹಾಸಭೆ

ಮಡಿಕೇರಿ, ನ.2– ಮಡಿಕೇರಿ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು ಹಳೆ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಮಹಾಸಭೆ ಹಾಗೂ ಸಂತೋಷಕೂಟವನ್ನು ಮಡಿಕೇರಿಯ ಎಫ್‌ಎಂಕೆಎಂಸಿ ಕಾಲೇಜು ಸಭಾಂಗಣದಲ್ಲಿ ನ.6 ರಂದು ಬೆಳಗ್ಗೆ 10 ಗಂಟೆಗೆ ಏರ್ಪಡಿಸಲಾಗಿದೆ.

ಕಾಲೇಜು ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಡಾ. ಪಾರ್ವತಿ ಅಪ್ಪಯ್ಯ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ಎಂ. ರವಿಕಾಳಪ್ಪ, ಮಂಗಳೂರು ವಿಶ್ವವಿದ್ಯಾಲಯ ಕುಲಸಚಿವ ಡಾ.ಸಿ.ಕೆ. ಕಿಶೋರ್ ಕುಮಾರ್, ರೋಟರಿ ಇಂಟರ್‌ನ್ಯಾಷನಲ್ ಮಾಜಿ ಗವರ್ನರ್ ಡಾ.ರವಿ ಅಪ್ಪಾಜಿ ಭಾಗವಹಿಸುವರು. ಮಾಹಿತಿಗೆ ಕಾರ್ಯದರ್ಶಿ ಬೊಳ್ಳಜಿರ ಬಿ.ಅಯ್ಯಪ್ಪ (ಮೊ.9880778047), ಉಪಾಧ್ಯಕ್ಷ ಎನ್.ಡಿ. ಚರ್ಮಣ (ಮೊ. 9845889967) ಸಂಪರ್ಕಿಸಬಹುದು.

ಸಂಕೇತ್ ಪೂವಯ್ಯ ಜೆಡಿಎಸ್ ರಾಜ್ಯ ವಕ್ತಾರ

ವಿರಾಜಪೇಟೆ, ನ.2– ಜಾತ್ಯತೀತ ಜನತಾದಳದ ಮುಖಂಡ ಮೇರಿಯಂಡ ಸಂಕೇತ್ ಪೂವಯ್ಯ ಸಕ್ರಿಯ ರಾಜಕಾರಣಕ್ಕೆ ಮತ್ತೆ ಕಾಲಿಟ್ಟಿದ್ದಾರೆ.



ಕಳೆದ ಮೂರು ವರ್ಷಗಳಿಂದ ಸಕ್ರಿಯ ರಾಜಕಾರಣದಿಂದ ದೂರವುಳಿದು ಪ್ರಾಣಿ ಮತ್ತು ಮಾನವ ಸಂಘರ್ಷದ ಹೋರಾಟದಲ್ಲಿ ತೊಡಗಿದ್ದರು. ಇದೀಗ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರು ಸಂಕೇತ್ ಪೂವಯ್ಯ ಅವರನ್ನು ಜಾತ್ಯತೀತ ಜನತಾದಳದ ರಾಜ್ಯ ವಕ್ತಾರ ಮತ್ತು ಕಾರ್ಯದರ್ಶಿಯನ್ನಾಗಿ ನೇಮಕ ಮಾಡುವ ಮೂಲಕ ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಳ್ಳುವಂತೆ ಸೂಚಿಸಿದ್ದಾರೆ.

ಇತ್ತೀಚೆಗೆ ಸಂಕೇತ್ ಪೂವಯ್ಯ ಅವರ ಕುಟುಂಬದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಮಾಜಿ ಸಿಎಂ ಕುಮಾರಸ್ವಾಮಿ ಅವರು ಸಂಕೇತ್ ಪೂವಯ್ಯ ಅವರ ಜೊತೆ ಮಾತುಕತೆ ನಡೆಸಿ, ಪಕ್ಷವು ನೀಡುವ ಜವಾಬ್ದಾರಿ ವಹಿಸಿಕೊಂಡು ಮತ್ತೆ ರಾಜಕಾರಣದಲ್ಲಿ ತೊಡಗಿಸಿಕೊಳ್ಳುವಂತೆ ನೀಡಿದ ಸೂಚನೆ ಮೇರೆಗೆ ಈ ನೇಮಕ ಮಾಡಲಾಗಿದೆ. ಇದರಿಂದ ಸಂತುಷ್ಟಗೊಂಡಿರುವ ಸಂಕೇತ್ ಪೂವಯ್ಯ ಅವರು ತಾವೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಜೊತೆ ಕೈ ಜೋಡಿಸಿ ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವೆ ಎಂದಿದ್ದಾರೆ.

ಕಡವೆ ಕೊಂದು ಮಾಂಸ ಮಾರಾಟಕ್ಕೆ ಯತ್ನ ಪ್ರಕರಣ ಪತ್ತೆ: ಆರೋಪಿಗಳು ಪರಾರಿ

ಗೋಣಿಕೊಪ್ಪ/ ಮಡಿಕೇರಿ,ನ.2– ಪೊನ್ನಂಪೇಟೆ ತಾಲೂಕಿನ ಹಾತೂರು ಗ್ರಾಮದಲ್ಲಿ ಕಡವೆ ಬೇಟೆ ಮಾಡಿರುವ ಪ್ರಕರಣವನ್ನು ಪತ್ತೆ ಹಚ್ಚಿರುವ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು 60 ಕೆ.ಜಿ. ಕಡವೆ ಮಾಂಸ ವಶಪಡಿಸಿಕೊಂಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದು, ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ.

ಕಡವೆಯನ್ನು ಕೊಂದು ಮಾಂಸ ಮಾರಾಟಕ್ಕೆ ಮುಂದಾಗಿದ್ದ ಸಂದರ್ಭ ಸ್ಥಳಕ್ಕೆ ವಿರಾಜಪೇಟೆ ಅರಣ್ಯ ವಲಯದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ತಂಡ ದಾಳಿ ಮಾಡಿದೆ. ಈ ವೇಳೆ 60 ಕೆ.ಜಿ ಮಾಂಸ ಪತ್ತೆಯಾಗಿದ್ದು, ಆರೋಪಿಗಳು ಪರಾರಿಯಾಗಿದ್ದಾರೆ. ಪ್ರಕರಣದ ಆರೋಪಿಗಳಾದ. ಕೆ.ಸತ್ಯುಂಜಯ ಹಾಗೂ ಗೋಣಿಕೊಪ್ಪ ನಿವಾಸಿ ಶರಣು ಮತ್ತು ಇತರರ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಈ ಪ್ರಕರಣವನ್ನು ಹೆಚ್ಚಿನ ತನಿಖೆಗೆ ಒಳಪಡಿಸಲು ಪೊನ್ನಂಪೇಟೆ ಆರ್‌ಎಫ್‌ಓ ಶಂಕರ ಅವರಿಗೆ ಹಸ್ತಾಂತರಿಸಲಾಗಿದೆ.

ವಿರಾಜಪೇಟೆ ಡಿಸಿಎಫ್‌ವೈ ಚಕ್ರಪಾಣಿ ಮಾರ್ಗದರ್ಶನದಲ್ಲಿ ಎಸಿಎಫ್ ಕೊಚ್ಚೆರ ಎ.ನೆಹರು, ಆರ್‌ಎಫ್‌ಓ ಕಳ್ಳಿರ ದೇವಯ್ಯ, ಡಿಆರ್‌ಎಫ್‌ಓ ಶ್ರೀಶೈಲ ಮಾಲಿಗೌಡ್ರ, ದೇಯಂಡ ಸಂಜಿತ್ ಸೋಮಯ್ಯ, ಸಿಬ್ಬಂದಿ ಸಿ. ಅರುಣಾ, ಮಾಲತೇಶ್ ಬಡಿಗೇರ್, ಚಂದ್ರಶೇಖರ ಅಮರಗೋಳ, ಅಶೋಕ, ಆರ್‌ಆರ್‌ಟಿ ಸಿಬ್ಬಂದಿ ಅನಿಲ್, ವಿಕಾಸ್, ಸುರೇಶ, ಮಹೇಶ್, ನಾಚಪ್ಪ, ಮುರುಗನ್, ಮಂಜು, ಸಚಿನ್, ವಿನೋದ್, ವಿನು, ಅಚ್ಚಯ್ಯ ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ಯೋಧ ಅಲ್ತಾಫ್ ಅಹಮದ್ ಕುಟುಂಬಕ್ಕೆ ನಿವೇಶನ ಮಂಜೂರು

ಕುಟುಂಬಸ್ಥರು, ಸಂಸದ ಪ್ರತಾಪ್ ಸಿಂಹರ ಮನವಿಗೆ ಸ್ಪಂದಿಸಿದ ಜಿಲ್ಲಾಡಳಿತ

ಮಡಿಕೇರಿ,ನ.2– ಜಮ್ಮು ಕಾಶ್ಮೀರದ ಶ್ರೀನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭ ಹಿಮಪಾತಕ್ಕೆ ಸಿಲುಕಿ ವೀರ ಮರಣವನ್ನಪ್ಪಿದ್ದ ಯೋಧ ನಾಯಕ್ ಅಲ್ತಾಫ್ ಅಹಮದ್ ಅವರ ಕುಟುಂಬಕ್ಕೆ ಸರಕಾರ 5 ಸೆಂಟ್ ನಿವೇಶನ ಮಂಜೂರು ಮಾಡಿದೆ.

ಅಮ್ಮತ್ತಿ ಹೋಬಳಿ ಚೆನ್ನಯ್ಯನಕೋಟೆ ಗ್ರಾಪಂ ವ್ಯಾಪ್ತಿಯ ಸರ್ವೆ ನಂಬರ್ 33/1ರಲ್ಲಿರುವ 96 ಸೆಂಟ್ ಪೈಕಿ 5 ಸೆಂಟ್ ನಿವೇಶನವನ್ನು ಹುತಾತ್ಮ ಯೋಧನ ಪತ್ನಿ ಜುಬೇರಿಯಾ ಅವರಿಗೆ ನೀಡಲು ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಆದೇಶಿಸಿದ್ದಾರೆ.

2022ರ ಫೆಬ್ರವರಿ 23ರಂದು ಶ್ರೀನಗರದಲ್ಲಿ ಕರ್ತವ್ಯದಲ್ಲಿದ್ದ ಸಂದರ್ಭ ನಾಯಕ್ ಅಲ್ತಾಫ್ ಅಹಮದ್ ಅವರು ಹಿಮಪಾತಕ್ಕೆ ಸಿಲುಕಿ ಹುತಾತ್ಮರಾಗಿದ್ದರು. ಕಡು ಬಡತನದಲ್ಲಿರುವ ಕುಟುಂಬ ವಿರಾಜಪೇಟೆ ತಾಲೂಕಿನ ಪಾಲಿಬೆಟ್ಟ ವ್ಯಾಪ್ತಿಯ ಮೇಕೂರು ಹೊಸ್ಕೆರೆ ವ್ಯಾಪ್ತಿಯ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಯೋಧನ ಪತ್ನಿ ಜುಬೇರಿಯಾ ಅವರು ತಮಗೆ ಸರಕಾರಿ ನಿವೇಶನ ಒದಗಿಸಿಕೊಡುವಂತೆ, ಜಿಲ್ಲಾಡಳಿತ, ಶಾಸಕರು, ಸಂಸದರು, ಹಾಗೂ ರಾಜ್ಯ ಅಲ್ಪಸಂಖ್ಯಾತ ಆಯೋಗಕ್ಕೆ ಮನವಿ ಮಾಡಿದ್ದರು.

ಈ ಕುರಿತು ಜಿಲ್ಲಾಡಳಿತಕ್ಕೆ ಪತ್ರ ಬರೆದ ಸಂಸದ ಪ್ರತಾಪ್ ಸಿಂಹ ಹುತಾತ್ಮ ಯೋಧ ಅಲ್ತಾಫ್ ಅಹಮದ್ ಅವರ ಪ್ರಕರಣವನ್ನು ವಿಶೇಷವಾಗಿ ಪರಿಗಣಿಸಿ ಸೈನಿಕ ಕೋಟಾದಲ್ಲಿ ಸರಕಾರಿ ನಿವೇಶನ ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ಕೋರಿದ್ದರು. ಮಾತ್ರವಲ್ಲದೇ ರಾಜ್ಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರು ಕೂಡ ಸರಕಾರಿ ಪತ್ರದ ಮೂಲಕ ನಿವೇಶನ ಒದಗಿಸುವಂತೆ ಜಿಲ್ಲಾಡಳಿತವನ್ನು ಕೋರಿದ್ದರು.

ಈ ಕೋರಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಅವರು ವಿರಾಜಪೇಟೆ ತಹಶೀಲ್ದಾರ್‌ಗೆ ಸರ್ಕಾರಿ ನಿವೇಶನ ಗುರುತಿಸಲು ಸೂಚಿಸಿದ್ದರು. ತದನಂತರ ಅಮ್ಮತ್ತಿ ಹೋಬಳಿ ಚೆನ್ನಯ್ಯನಕೋಟೆ ಗ್ರಾ.ಪಂ. ವ್ಯಾಪ್ತಿಯಲ್ಲಿ 96 ಸೆಂಟ್ ಸರಕಾರಿ ಜಾಗ ಇರುವುದಾಗಿ ವಿರಾಜಪೇಟೆ ತಹಶೀಲ್ದಾರ್ ಅವರು ನಿವೇಶನ ಸಹಿತ ಸ್ಥಳ ತನಿಖಾ ದಾಖಲೆಗಳೊಂದಿಗೆ ಉಪ ವಿಭಾಗಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿದ್ದರು.

ಈ ಪ್ರಸ್ತಾವನೆಯನ್ನು ಆಧರಿಸಿ, ಜಿಲ್ಲಾಧಿಕಾರಿಗಳು ಕರ್ನಾಟಕ ಭೂ ಮಂಜೂರಾತಿ ಅಧಿನಿಯಮ 1969ರ ಅಡಿ ಸರ್ವೆ ನಂಬರ್ 33/1ರಲ್ಲಿ 5 ಸೆಂಟ್ ನಿವೇಶನವನ್ನು ಉಚಿತವಾಗಿ ಹುತಾತ್ಮ ಯೋಧ ಅಲ್ತಾಫ್ ಅಹಮದ್ ಅವರ ಪತ್ನಿ ಜುಬೇರಿಯಾ ಅವರಿಗೆ ಮಂಜೂರು ಮಾಡಿ ಆದೇಶ ಹೊರಡಿಸಿದ್ದಾರೆ.



ಹುತಾತ್ಮ ಯೋಧ ನಾಯಕ್ ಅಲ್ತಾಫ್ ಅಹಮದ್ ಅವರ ಮನೆಗೆ ಭೇಟಿ ನೀಡಿದ್ದ ಸಂಸದ ಪ್ರತಾಪ್ ಸಿಂಹ.

ಮುರಿದು ಬಿದ್ದ ರಥ, ತಪ್ಪಿದ ಅನಾಹುತ

ಚೆನ್ನಪ್ಪನಪುರ ಬಳಿಯ ವೀರಭದ್ರೇಶ್ವರ ದೇವಾಲಯದಲ್ಲಿ ಘಟನೆ





ಚಾಮರಾಜನಗರ, ನ2–ತಾಲೂಕಿನ ಚೆನ್ನಪ್ಪನಪುರ ಬಳಿ ಅಮಚವಾಡಿ ಗುಡ್ಡ ಮಠದ ವೀರಭದ್ರೇಶ್ವರ ದೇವಾಲಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಥೋತ್ಸವ ವೇಳೆ ಚಕ್ರದ ದೂರಿ ಮುರಿದು ರಥ ಉರುಳಿ ಬಿದ್ದಿರುವ ಘಟನೆ ನಡೆದಿದ್ದು, ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಿಲ್ಲ.

2012ರ ಬಳಿಕ ಆರು ವರ್ಷಗಳ ಕಾಲ ರಥ ಸರಿ ಇಲ್ಲದ ಕಾರಣಕ್ಕೆ ಜಾತ್ರೆ ರದ್ದುಗೊಂಡಿತ್ತು. ಸ್ಥಳೀಯರೇ ಹಣ ಹಾಕಿ 2019ರಲ್ಲಿ ರಥ ದುರಸ್ತಿಪಡಿಸಿ, ಅದ್ಧೂರಿಯಾಗಿ ಜಾತ್ರೆ ನಡೆಸಿದ್ದರು. ಮತ್ತೆ ನಾಲ್ಕು ವರ್ಷಗಳ ಬಳಿಕ ಅಮಚವಾಡಿ ಹಾಗೂ ಚೆನ್ನಪ್ಪನಪುರದ ಗ್ರಾಮಸ್ಥರು ಸೇರಿ ವೀರಭದ್ರೇಶ್ವರಸ್ವಾಮಿ ರಥೋತ್ಸವ ಹಾಗೂ ಬೆಳ್ಳಿ ಕವಚಧಾರಣಾ ಮಹೋತ್ಸವ ಹಮ್ಮಿಕೊಂಡಿದ್ದರು. ಸೋಮವಾರ ಜಾತ್ರೆ ಆರಂಭಗೊಂಡು, ಮಂಗಳವಾರ ಮಧ್ಯಾಹ್ನ 12 ಗಂಟೆಗೆ ರಥೋತ್ಸವ ನಿಗದಿಯಾಗಿತ್ತು.

> ## ರಥ ನಿರ್ಮಾಣಕ್ಕೆ ಕ್ರಮ: ಸೋಮಣ್ಣ
>
> **ಚಾಮರಾಜನಗರ:** ತಾಲೂಕಿನ ಚೆನ್ನಪ್ಪನಪುರದ ವೀರಭದ್ರೇಶ್ವರ ದೇವಾಲಯಕ್ಕೆ ಸಚಿವ ವಿ.ಸೋಮಣ್ಣ ಬುಧವಾರ ಭೇಟಿ ನೀಡಿ, ರಥ ಉರುಳಿಬಿದ್ದ ಪ್ರಕರಣ ಸಂಬಂಧ ಪರಿಶೀಲಿಸಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಡಿಸಿ ಡಿ.ಎಸ್.ರಮೇಶ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ ಸೇರಿದಂತೆ ಅಧಿಕಾರಿಗಳೊಂದಿಗೆ ದೇವಾಲಯಕ್ಕೆ ಭೇಟಿ ನೀಡಿದ ಸಚಿವರು, ಮುರಿದು ಬಿದ್ದ ರಥ ವೀಕ್ಷಿಸಿ ಘಟನೆ ಸಂಬಂಧ ಸ್ಥಳೀಯ ಮುಖ್ಯಸ್ಥರಿಂದ ಮಾಹಿತಿ ಪಡೆದರು. ಬಳಿಕ ವೀರಭದ್ರೇಶ್ವರ ಸ್ವಾಮಿಯ ದರ್ಶನ ಪಡೆದರಲ್ಲದೆ, ಹೊಸ ರಥ ನಿರ್ಮಾಣ ಸಂಬಂಧ ಕ್ರಮ ವಹಿಸಲಾಗುವುದು. ಮುಂದಿನ 15 ದಿನಗಳೊಳಗೆ ಹೊಸ ತೇರು ನಿರ್ಮಾಣಕ್ಕೆ ಕ್ರಿಯಾ ಯೋಜನೆ ತಯಾರಿಸಲು ಸೂಚಿಸಲಾಗುವುದು ಎಂದು ತಿಳಿಸಿದರು. ಈ ವೇಳೆ ಸ್ಥಳೀಯರು ದೇವಾಲಯದ ಜಾಗ ಒತ್ತುವರಿ ತೆರವು ಹಾಗೂ ದೇವಾಲಯದ ಜೀರ್ಣೋದ್ಧಾರಕ್ಕೆ ಮನವಿ ಮಾಡಿದರು.

ರಥೋತ್ಸವ ಹಿನ್ನೆಲೆಯಲ್ಲಿ ಮಂಗಳವಾರ ಬೆಳಗ್ಗೆಯಿಂದಲೇ ಸ್ವಾಮಿಗೆ ವಿಶೇಷ ಪೂಜಾ–ಕೈಂಕರ್ಯ ಜರುಗಿದವು. ರಥೋತ್ಸವಕ್ಕಾಗಿ ಚೆನ್ನಪ್ಪನಪುರ, ಅಮಚವಾಡಿ ಮಾತ್ರವಲ್ಲದೆ, ಸುತ್ತಮುತ್ತಲ ಗ್ರಾಮಗಳ ನೂರಾರು ಭಕ್ತರು ಆಗಮಿಸಿದ್ದರು. ಉತ್ಸವಮೂರ್ತಿಯನ್ನು 11.45ಕ್ಕೆ ಅಲಂಕೃತ ತೇರಿನಲ್ಲಿರಿಸಿ ಪೂಜೆ ಸಲ್ಲಿಸಲಾಯಿತು. ಶಾಸಕ ಸಿ.ಪುಟ್ಟರಂಗಶೆಟ್ಟಿ, ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು ಸೇರಿದಂತೆ ಗಣ್ಯರು ಸ್ವಾಮಿಗೆ ಪೂಜೆ ಸಲ್ಲಿಸಿದ ಬಳಿಕ ಮಧ್ಯಾಹ್ನ 12ರ ವೇಳೆಗೆ ರಥೋತ್ಸವಕ್ಕೆ ಚಾಲನೆ ದೊರೆಯಿತು. ರಥ ಸಾಗಿ ದೇವಾಲಯದ ಗರ್ಭ ಗುಡಿಯ ಹಿಂಭಾಗ ಬರುವಾಗ ಮಧ್ಯಾಹ್ನ 12.30ರಲ್ಲಿ ಚಕ್ರದ ದೂರಿ ಹಾಗೂ ಬಲಗಡೆಯ ಚಕ್ರ ಮುರಿದು ರಥ ಮುಂದಕ್ಕೆ ವಾಲಿತು. ತಕ್ಷಣ ಪೊಲೀಸರು ರಥದ ಅಕ್ಕಪಕ್ಕ ಇದ್ದ ಜನರನ್ನು ಚದುರಿಸಿದರು. ರಥದ ಗೋಪುರವನ್ನು ಹಗ್ಗದ ಸಹಾಯದಿಂದ ಹಿಡಿದು ನಿಧನವಾಗಿ ಸಡಿಲಿಸಿದಾಗ ರಥ ಮುಂದಕ್ಕೆ ಉರುಳಿತು. ಪೊಲೀಸರು ಜನರನ್ನು ದೂರ ಚದುರಿಸಿದ್ದರಿಂದ ಭಾರೀ ಅಪಾಯ ತಪ್ಪಿತು.

ನಂತರ ರಥದಿಂದ ಉತ್ಸವ ಮೂರ್ತಿಯನ್ನು ತೆಗೆದು, ದೇವಾಲಯದ ಸುತ್ತ ಮೆರವಣಿಗೆ ನಡೆಸಲಾಯಿತು. ತೇರು ಬಿದ್ದ ಕಹಿ ಘಟನೆಯ ನಡುವೆಯೂ ಜಾತ್ರೆಯ ವಿಧಿ–ವಿಧಾನಗಳನ್ನು ಸಂಪ್ರದಾಯದಂತೆ ನಡೆಸಲಾಯಿತು. ಜಾತ್ರೆಯ ಅಂಗವಾಗಿ ವೀರಭದ್ರೇಶ್ವರಸ್ವಾಮಿಗೆ ಸೋಮವಾರ ರಾತ್ರಿ ಬೆಳ್ಳಿ ಕವಚ ಧಾರಣೆ ಮಾಡಲಾಗಿತ್ತು. ಪಲ್ಲಕ್ಕಿ ಉತ್ಸವವೂ ನಡೆಯಿತು. ಭಕ್ತರು ಸ್ವಾಮಿಯ ದರ್ಶನ ಪಡೆದು ಪುನೀತರಾದರು. ಗುಂಡ್ಲುಪೇಟೆ ತಾಲೂಕಿನ ಪಾರ್ವತಿಬೆಟ್ಟದಲ್ಲೂ ಮೇ ತಿಂಗಳಲ್ಲಿ ನಡೆದ ರಥೋತ್ಸವದಲ್ಲಿ ರಥಕ್ಕೆ ಸಿಲುಕಿ ಇಬ್ಬರು ಭಕ್ತರು ಮೃತಪಟ್ಟಿರುವುದನ್ನು ಸ್ಮರಿಸಬಹುದು.

22 ಹಕ್ಕೊತ್ತಾಯಗಳ ಈಡೇರಿಕೆಗೆ ಆಗ್ರಹಿಸಿ ರೈತ ಸಂಘದಿಂದ ಅನಿರ್ದಿಷ್ಟಾವಧಿ ಧರಣಿ ಆರಂಭ



ಚಾಮರಾಜನಗರ, ನ.2–ವಿವಿಧ 22 ಹಕ್ಕೊತ್ತಾಯಗಳನ್ನು ಈಡೇರಿಸುವಂತೆ ಆಗ್ರಹಿಸಿ ರೈತ ಸಂಘದ ಕಾರ್ಯಕರ್ತರು ನಗರದಲ್ಲಿ ಬುಧವಾರ ಪ್ರತಿಭಟನಾ ಮೆರವಣಿಗೆ ನಡೆಸಿ, ತಾಲೂಕು ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು.

ನಗರದ ಪ್ರವಾಸಿ ಮಂದಿರ ಆವರಣದಲ್ಲಿ ಜಮಾಯಿಸಿದ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು, ಕೇಂದ್ರ, ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗುತ್ತಾ ಪ್ರತಿಭಟನಾ ಮೆರವಣಿಗೆ ಸಾಗಿ ತಾಲೂಕು ಕಚೇರಿ ತಲುಪಿ ಧರಣಿ ಆರಂಭಿಸಿದರು. ಸ್ವಾಮಿನಾಥನ್ ಆಯೋಗದ ಪ್ರಕಾರ ಟನ್ ಕಬ್ಬಿಗೆ 5,500 ರೂ. ನೀಡಬೇಕು. ಸಮಯಕ್ಕೆ ಕಬ್ಬು ಕಟಾವು ಮಾಡಬೇಕು. ರೈತರು–ಕಾರ್ಖಾನೆ ನಡುವೆ ದ್ವಿಪಕ್ಷ ಒಪ್ಪಂದವಾಗಬೇಕು. ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಹಾಗೂ ಕರ ನಿರಾಕರಣೆಯ ಸಂದರ್ಭಲ್ಲಿ ಉಳಿಸಿಕೊಂಡಿರುವ ಗೃಹಬಳಕೆ ವಿದ್ಯುತ್ ಬಾಕಿಯನ್ನು ಸಂಪೂರ್ಣ ಮನ್ನಾ ಮಾಡಬೇಕು. ರೈತರ ಎಲ್ಲಾ ಸಾಲಗಳು ಸಂಪೂರ್ಣ ಮನ್ನಾ ವಾಗಬೇಕು. ಕೃಷಿ ಪಂಪ್‌ಸೆಟ್‌ಗಳು ಹಾಗೂ ರೈತರು ಕೃಷಿ ಅವಲಂಬಿತ ಗೃಹ ಬಳಕೆದಾರರಿಗೆ ಉಚಿತ ವಿದ್ಯುತ್ ಪೂರೈಸಬೇಕು ಎಂಬಿತ್ಯಾದಿ ಬೇಡಿಕೆಗಳು ಸೇರಿದಂತೆ ಒಟ್ಟು 22 ಹಕ್ಕೋತ್ತಾಯಗಳನ್ನು ಸರ್ಕಾರದ ಮುಂದಿಟ್ಟು ಆಗ್ರಹಿಸಿದರು.

ಸಬ್‌ರಿಜಿಸ್ಟ್ರಾರ್ ಹಾಗೂ ಆಹಾರ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ರೈತರ ಅಹವಾಲು ಆಲಿಸಿದರು. ಪಟ್ಟುಬಿಡದ ಧರಣಿ ನಿರತರು ಸ್ಥಳದಲ್ಲೇ ಅಡುಗೆ ತಯಾರಿಸಿ ಊಟ ಸೇವಿಸಿ ಧರಣಿ ಮುಂದುವರೆಸಿದ್ದಾರೆ. ರೈತ ಸಂಘದ ರಾಜ್ಯ ಉಪಾಧ್ಯಕ್ಷ ಮಹೇಶ್ ಪ್ರಭು, ಜಿಲ್ಲಾ ಅಧ್ಯಕ್ಷ ಹೆಬ್ಬಸೂರು ಬಸವಣ್ಣ, ಪ್ರಧಾನ ಕಾರ್ಯದರ್ಶಿ ಜ್ಯೋತಿಗೌಡನಪುರ ಸಿದ್ದರಾಜು, ಮುಖಂಡರಾದ ಮಂಡ್ಯ ಪ್ರಸನ್ನಗೌಡ, ಮಹದೇವ್‌ಪ್ರಸಾದ್, ಮಹೇಶ್, ಮಹದೇವಪ್ಪ, ಶೈಲೇಶ್, ಬಸವರಾಜು, ಚಿನ್ನಸ್ವಾಮಿಗೌಡ, ಸಿದ್ದರಾಜು, ಸಂತೋಷ್, ನಂಜುಂಡಸ್ವಾಮಿ, ಜಯಣ್ಣ ಇತರರು ಧರಣಿಯಲ್ಲಿದ್ದರು.

ಹನೂರು ಪತ್ರಕರ್ತರ ಭವನ ಕಾಮಗಾರಿ ವೀಕ್ಷಣೆ

ಹನೂರು, ನ.2–ಪಟ್ಟಣಕ್ಕೆ ಭೇಟಿ ನೀಡಿದ್ದ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಭವನ ನಿರ್ಮಾಣ ಕಾಮಗಾರಿ ವೀಕ್ಷಿಸಿದರು. ಬಳಿಕ ಮಾತನಾಡಿದ ಅವರು, ಪತ್ರಕರ್ತರು ಸಮಾಜದ ನಾಲ್ಕನೇ ಪ್ರಮುಖ ಅಂಗ. ಸಮಾಜದಲ್ಲಿನ ಅಂಕುಡೊಂಕು ತಿದ್ದುವಲ್ಲಿ ಪತ್ರಕರ್ತರ ಪಾತ್ರ ಪ್ರಮುಖವಾದುದು. ಚಾ.ನಗರ ಜಿಲ್ಲಾ ಕೇಂದ್ರ ಹೊರತುಪಡಿಸಿ ಯಾವುದೇ ತಾಲೂಕು ಕೇಂದ್ರಗಳಲ್ಲಿ ಪತ್ರಕರ್ತರ ಭವನ ಇರಲಿಲ್ಲ. ಹನೂರು ತಾಲೂಕಿನಲ್ಲಿ ಪತ್ರಕರ್ತರ ಭವನ ನಿರ್ಮಾಣವಾಗುತ್ತಿರುವುದು ಸಂತಸದ ವಿಚಾರ. ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಜೊತೆ ಚರ್ಚಿಸಿ ಅನುದಾನ ಕೊಡಿಸಲು ಪ್ರಯತ್ನಿಸುವುದಾಗಿ ತಿಳಿಸಿದರಲ್ಲದೆ, ವೈಯಕ್ತಿಕವಾಗಿ ಅನುದಾನ ನೀಡುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸಂಘದ ಗೌರವ ಅಧ್ಯಕ್ಷ ದೇವರಾಜ್ ನಾಯ್ಡು, ಅಧ್ಯಕ್ಷ ಮಹದೇಶ್.ಎಂ ಹಾಗೂ ಪದಾಧಿಕಾರಿಗಳಿದ್ದರು.

ಗಡಿ ಜಿಲ್ಲೆಯಲ್ಲಿ ಅದ್ದೂರಿ ಕನ್ನಡ ರಾಜ್ಯೋತ್ಸವ

ಸಂಭ್ರಮದ ಧ್ವಜಾರೋಹಣ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ



ಚಾಮರಾಜನಗರದಲ್ಲಿ ಸಚಿವ ವಿ. ಸೋಮಣ್ಣ ಅವರಿಂದ ಧ್ವಜಾರೋಹಣ.

ಚಾಮರಾಜನಗರ, ನ.2–ಜಿಲ್ಲಾದ್ಯಂತ ಮಂಗಳವಾರ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.


ರಾಜ್ಯೋತ್ಸವ ಹಿನ್ನೆಲೆಯಲ್ಲಿ ಎಲ್ಲೆಡೆ ಕನ್ನಡ ಧ್ವಜಾರೋಹಣ, ವಿದ್ಯಾರ್ಥಿಗಳಿಂದ ಮೆರವಣಿಗೆ, ನಾಡು–ನುಡಿಗೆ ಶ್ರಮಿಸಿದ ಮಹನೀಯರ ಸ್ಮರಣೆ ಸೇರಿದಂತೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಚಾಮರಾಜನಗರ ವರದಿ: ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಜಿಲ್ಲಾಡಳಿತದಿಂದ ನಡೆದ ರಾಜ್ಯೋತ್ಸವ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಧ್ವಜಾರೋಹಣ ನೆರವೇರಿಸಿ, ರಾಜ್ಯೋತ್ಸವದ ಸಂದೇಶ ನೀಡಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ನಗರಸಭೆ ಅಧ್ಯಕ್ಷೆ ಸಿ.ಎಂ. ಆಶಾ, ಉಪಾಧ್ಯಕ್ಷೆ ಪಿ.ಸುಧಾ, ಡಿಸಿ ಡಿ.ಎಸ್. ರಮೇಶ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಸ್‌ಪಿ ಶಿವಕುಮಾರ್, ಎಡಿಸಿ ಕಾತ್ಯಾಯಿನಿ ದೇವಿ, ಎಎಸ್‌ಪಿ ಸುಂದರರಾಜು ಸೇರಿದಂತೆ ಇತರರಿದ್ದರು.ಕರ್ನಾಟಕ ಕನ್ನಡ ರಕ್ಷಣಾ ವೇದಿಕೆ ರಾಜ್ಯ ಘಟಕದಿಂದ ನಗರದಲ್ಲಿ ನಡೆದ 67ನೇ ಕನ್ನಡ ರಾಜ್ಯೋತ್ಸವ, ಕನ್ನಡ ಧ್ವಜಸ್ತಂಭ ಅನಾವರಣ ಹಾಗೂ ನಟ ಡಾ.ಪುನೀತ್ ರಾಜ್‌ಕುಮಾರ್‌ಗೆ ಗೌರವ ನಮನ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಉದ್ಘಾಟಿಸಿದರು. ವೇದಿಕೆ ಅಧ್ಯಕ್ಷ ಚಾ.ಗು.ನಾಗರಾಜು ಮಾತನಾಡಿದರು. ಗಡಿನಾಡು ಕನ್ನಡ ರಕ್ಷಣಾ ವೇದಿಕೆ ರಾಜ್ಯ ಘಟಕದಿಂದಲೂ ನಗರದ ನ್ಯಾಯಾಲಯದ ರಸ್ತೆಯಲ್ಲಿ ರಾಜ್ಯೋತ್ಸವ ಆಚರಿಸಲಾಯಿತು. ಡಿವೈಎಸ್‌ಪಿ ಪ್ರಿಯದರ್ಶಿನಿ ಈ ಸಾಣೆಕೊಪ್ಪ ಧ್ವಜಾರೋಹಣ ನೆರವೇರಿಸಿದರು.

ಕೊಳ್ಳೇಗಾಲ ವರದಿ: ನಗರದ ಗುರು ಮಲ್ಲೇಶ್ವರ ವಿದ್ಯಾಸಂಸ್ಥೆಯ ಪ್ರಾಥಮಿಕ ಶಾಲೆಯಲ್ಲಿ ವಿಜೃಂಭಣೆಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಕರುನಾಡ ಪಡೆ ಮಹಿಳಾ ಜಿಲ್ಲಾ ಘಟಕದ ಅಧ್ಯಕ್ಷೆ ಭಾಗ್ಯಮ್ಮ, ತಾಲೂಕು ಅಧ್ಯಕ್ಷ ನಾಗಸುಂದ್ರ ಧ್ವಜರೋಹಣ ಮಾಡಿದರು. ಸಂಸ್ಥೆ ಆಡಳಿತಾಧಿಕಾರಿ ಹೆಚ್.ಎಂ.ವೃಷಬೇಂದ್ರ, ಮುಖ್ಯಶಿಕ್ಷಕಿ ಶಿವನಾಗಮ್ಮ, ಮನು, ಅಶ್ವಿನಿ, ರಾಜಮ್ಮ, ಜಯಶಂಕರ, ಸಿಬ್ಬಂದಿ ದೊರೆಸ್ವಾಮಿ ಇನ್ನಿತರರಿದ್ದರು.

ಗುಂಡ್ಲುಪೇಟೆ ವರದಿ: ಪಟ್ಟಣದ ಡಿ. ದೇವರಾಜ ಅರಸು ಕ್ರೀಡಾಂಗಣದಲ್ಲಿ ತಾಲೂಕು ಆಡಳಿತದಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಜರುಗಿತು. ಮೊದಲು ತಾಯಿ ಭುವನೇಶ್ವರಿಯ ಭಾವಚಿತ್ರವನು ಮೆರವಣಿಗೆ ಮಾಡಲಾಯಿತು. ನಂತರ ತಹಸೀಲ್ದಾರ್ ರವಿಶಂಕರ್ ರಾಷ್ಟ್ರ ಧ್ವಜವನ್ನು, ಶಾಸಕ ನಿರಂಜನಕುಮಾರ್ ನಾಡಧ್ವಜಾರೋಹಣ ಮಾಡಿದರು. ನಾಡು ನುಡಿಗೆ ಶ್ರಮಿಸಿದವರು ಹಾಗೂ ಎಸ್ ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ಬಿಇಓ ಎಸ್.ಸಿ.ಶಿವಮೂರ್ತಿ, ಪುರಸಭೆ ಮುಖ್ಯಾಧಿಕಾರಿ ಆರ್.ಹೇಮಂತರಾಜು, ಸದಸ್ಯರು, ಕನ್ನಡಪರ ಸಂಘ ಸಂಸ್ಥೆಗಳ ಪದಾಧಿಕಾರಿಗಳಿದ್ದರು.





ಬೇಗೂರು ವರದಿ: ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಲಿಟಲ್ ಫ್ಲವರ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ ಹಾಗೂ ಕ್ರೀಡಾ ದಿನ ಆಚರಿಸಲಾಯಿತು. ಗ್ರಾಮದ ಪೊಲೀಸ್ ಠಾಣೆ ಬಳಿ ಹೊರಟ ಕ್ರೀಡಾ ಜ್ಯೋತಿಗೆ ಸಬ್‌ಇನ್ಸ್‌ಪೆಕ್ಟರ್ ಜಗದೀಶ ಧೂಳ ಶೆಟ್ಟಿ ಚಾಲನೆ ನೀಡಿದರು. ನಂತರ ಶಾಲೆಯ ಆವರಣದಲ್ಲಿ ವೇದಿಕೆ ಸಮಾರಂಭ ಜರುಗಿತು. ಈ ವೇಳೆ ಕ್ರೈಂ ಸಬ್‌ಇನ್ಸ್‌ಪೆಕ್ಟರ್ ಭಾಸ್ಕರ್, ಮುಖ್ಯ ಶಿಕ್ಷಕ ಫಾದರ್ ಮ್ಯಾಥ್ಯೂವ್ ಜೋಷೆ, ಶಿಕ್ಷಕರಾದ ಮಹದೇವಸ್ವಾಮಿ ಎ.ಬಿ, ಪ್ರಕಾಶ್, ಪುಷ್ಪಾ, ಪವಿತ್ರ, ಜ್ಯೋತಿ, ಗಾಯಿತ್ರಿ, ಪ್ರೀತಿ ಇತರರಿದ್ದರು.

ಯಳಂದೂರು ವರದಿ: ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ರಾಜ್ಯೋತ್ಸವ ಕಾರ್ಯಕ್ರಮ ಜರುಗಿತು. ಶಾಸಕ ಎನ್. ಮಹೇಶ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಶಿಕ್ಷಕ ವಿನಯ್ ಉಪನ್ಯಾಸ ನೀಡಿದರು. ಪಪಂ ಅಧ್ಯಕ್ಷೆ ಪ್ರಭಾವತಿ ಉಪಾಧ್ಯಕ್ಷೆ ಲಕ್ಷ್ಮಿ, ಸದಸ್ಯರಾದ ಮಹೇಶ್, ವೈ.ಜಿ.ರಂಗನಾಥ, ಮಹದೇವನಾಯಕ, ಸವಿತಾ, ಮಲ್ಲಯ್ಯ, ರವಿ, ಸುಶೀಲಾ, ಶಾಂತಮ್ಮ ಮಹೇಶ್, ನಿಂಗರಾಜು, ರಘು ತಹಸೀಲ್ದಾರ್ ಆನಂದಪ್ಪ ನಾಯಕ್, ಇಓ ಉಮೇಶ್, ಬಿಇಓ ಕೆ.ಕಾಂತರಾಜು, ತಾಲೂಕು ಕಸಾಪ ಅಧ್ಯಕ್ಷ ಯರಿಯೂರು ನಾಗೇಂದ್ರ ಸೇರಿದಂತೆ ಹಲವರಿದ್ದರು.

ಒಂದನೇ ಪುಟದಿಂದ

ಕಾನೂನುಗಳಲ್ಲಿ ಸಾಕಷ್ಟು ಮಾರ್ಪಾಡು

ಎಂದು ರಾಜ್ಯ ಸರ್ಕಾರಕ್ಕೆ ಕಿವಿಮಾತು ಹೇಳಿದ ಅವರು, ಕೋವಿಡ್ ನಂತರದ ದಿನಗಳಲ್ಲಿ ಮತ್ತೆ ರಾಷ್ಟ್ರದಲ್ಲಿ ಆರ್ಥಿಕ ಚೇತರಿಕೆ ಕಂಡಿದೆ. ಇಂತಹ ಸನ್ನಿವೇಶದಲ್ಲಿ ನಾವು ನಮ್ಮ ಸ್ವಂತ ಬಲದ ಮೇಲೆ ನಿಲ್ಲಲು ಉದ್ಯಮಿದಾರರಿಗೆ ರೆಡ್‌ಕಾರ್ಪೆಟ್ ಹಾಸಿ ಎಂದಿದ್ದಾರೆ. ಸರ್ವಕಾಲಿಕ ಜಾಗತಿಕ ಸಂಕಷ್ಟಗಳ ನಡುವೆ ಭಾರತ ಪ್ರಕಾಶಮಾನ ಸ್ಥಳವಾಗಿ ಗುರುತಿಸಿ ಕೊಂಡಿತ್ತು. ಆರ್ಥಿಕತೆ ಮತ್ತು ರಫ್ತು ವಲಯದಲ್ಲಿ ಭಾರತದ ವಿಶೇಷ ಸ್ಥಾನಮಾನವನ್ನು ಕಾಯ್ದುಕೊಂಡಿದೆ. ನಮ್ಮ ಮೂಲಭೂತ ಆರ್ಥಿಕತೆಯ ಬಲವರ್ಧನೆಗೆ ಶ್ರಮರಹಿತ ಕೆಲಸಗಳನ್ನು ನಾವು ಮುಂದುವರೆಸಿದೆವು. ಇಡೀ ವಿಶ್ವದಲ್ಲೇ ಭಾರತ ಮುಕ್ತ ವಹಿವಾಟು ಮತ್ತು ವ್ಯಾಪಾರಗಳು ತನ್ನ ಹೆಗ್ಗುರುತ್ತನ್ನು ಮೂಡಿಸಿವೆ ಎಂದು ಹೇಳಿದರು.

ದೇಶದಲ್ಲಿ ತಂತ್ರಜ್ಞಾನ ಮತ್ತು ಸಂಪ್ರದಾಯಗಳ ಸಮ್ಮಿಳಿತವಿದೆ. ನಿಸರ್ಗ ಮತ್ತು ಸಂಸ್ಕೃತಿಯ ಒಗ್ಗೂಡಿಕೆಯಂತಹ ಅಪರೂಪದ ವೈವಿಧ್ಯಮ ಸ್ಥಳ ಭಾರತ. ನಾವು ತಂತ್ರಜ್ಞಾನ ಮತ್ತು ಪ್ರತಿಭೆಯ ಬಗ್ಗೆ ಮಾತನಾಡುವುದಾದರೆ ಮೊದಲು ನಮಗೆ ಕಾಣಸಿಗುವುದು ಬ್ರಾಂಡ್ ಬೆಂಗಳೂರು ಎಂದು ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕೋವಿಡ್ ಪರಿಣಾಮದಿಂದ ಈಗಲೂ ಜಗತ್ತು ಹೊಯ್ದಾಡುತ್ತಿದೆ. ಎಲ್ಲೆಲ್ಲೂ ಅನಿಶ್ಚಿತತೆ ಇದೆ. ಭಾರತದಲ್ಲೂ ಕೋವಿಡ್ ಪರಿಣಾಮ ಇದೆ. ಜಗತ್ತು ಭಾರತದದಿಂದ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದೆ. ಭಾರತದ ಆರ್ಥಿಕತೆಯ ಅಡಿಪಾಯ ಭದ್ರವಾಗಿದೆ ಎಂದು ಸಮರ್ಥಿಸಿಕೊಂಡರು. ಉತ್ಪಾದನೆ, ಪೂರೈಕೆಯಲ್ಲಿ ದೇಶ ಭರವಸೆದಾಯಕವಾಗಿದೆ. ಇವತ್ತು ನಾವು ಯಾವ ಸ್ಥಾನದಲ್ಲಿದ್ದೇವೆ, ನಮ್ಮ ಪ್ರಯಾಣ ಎಲ್ಲಿಂದ ಶುರುವಾಯಿತು ಎಂಬುದನ್ನು ನೆನಪಿಸಿಕೊಳ್ಳಬೇಕು. ಸ್ಥಳೀಯ ಕಾನೂನುಗಳನ್ನು ಉದ್ಯಮ ಸ್ನೇಹಿಯನ್ನಾಗಿ ಮಾರ್ಪಡಿಸಬೇಕು ಎಂದು ಸಲಹೆ ನೀಡಿದರು. ನವ ಭಾರತದ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಮುಂದಡಿ ಇಟ್ಟಿದೆ. ಬ್ಯಾಂಕಿಂಗ್ ಸೇರಿ ಹಲವು ವಲಯಗಳಲ್ಲಿ ಸುಧಾರಣೆಯಾಗುತ್ತಿದೆ. ಈ ನಿಟ್ಟಿನಲ್ಲಿ ಡಿಜಿಟಲ್ ಕರೆನ್ಸಿ ತರಲಾಗುತ್ತಿದೆ ಎಂದು ಹೇಳಿದರು.

ಹಳೆಯ ಹಲವು ಕಾನೂನುಗಳನ್ನು ರದ್ದು ಮಾಡಲಾಗಿದೆ. ಕಾರ್ಪೊರೇಟ್ ತೆರಿಗೆ ಇಳಿಸಿದ್ದೇವೆ. ವಿದೇಶಿ ಹೂಡಿಕೆಗೆ ಹೊಸ ಅವಕಾಶಗಳು ಸೃಷ್ಟಿಯಾಗಿವೆ. ಭಾರತದ ಅಭಿವೃದ್ಧಿಯ ವೇಗ ಮೊದಲಿಗಿಂತಲೂ ತೀವ್ರಗೊಂಡಿದೆ. ಭಾರತದ ಯುವ ಸಮೂಹದ ಪ್ರತಿಭೆ ನೋಡಿ ಜಗತ್ತೇ ಅಚ್ಚರಿ ಪಟ್ಟಿದೆ. ಎಂಟು ವರ್ಷಗಳಲ್ಲಿ 80 ಸಾವಿರಕ್ಕೂ ಹೆಚ್ಚು ಸ್ಟಾರ್ಟಪ್‌ಗಳ ಸ್ಥಾಪನೆಯಾಗಿವೆ. ನವೋದ್ಯಮಗಳು ವೇಗವಾಗಿ ಅಭಿವೃದ್ಧಿಯಾಗುತ್ತಿವೆ. ಕೃಷಿ ವಲಯದಲ್ಲೂ ಸಾಕಷ್ಟು ಬದಲಾವಣೆ ತರಲಾಗಿದೆ ಎಂದರು.

ತಂತ್ರಜ್ಞಾನ ಮತ್ತು ಮ್ಯಾನೇಜ್‌ಮೆಂಟ್ ವಿವಿಗಳ ಸಂಖ್ಯೆ ಹೆಚ್ಚಿಸಲಾಗಿದೆ. ನಮ್ಮ ಉದ್ದೇಶ ಆರ್ಥಿಕತೆ ಮತ್ತು ಉತ್ಪಾದನೆ ಹೆಚ್ಚಿಸುವುದು, ಮಾನವ ಸಂಪನ್ಮೂಲದ ಸದ್ಬಳಕೆ ಮಾಡಿಕೊಳ್ಳುವುದಾಗಿದೆ. ನಮ್ಮ ದೇಶ ವೈದ್ಯಕೀಯ ಕಾಲೇಜುಗಳು, ಆಸ್ಪತ್ರೆಗಳ ನಿರ್ಮಾಣ ಮತ್ತು ಸೇವೆಯಲ್ಲೂ ಮುಂದಿದೆ ಎಂದು ಹೇಳಿದರು. ಸ್ವಚ್ಛತಾ ಅಭಿಯಾನ ಯಶಸ್ವಿಯಾಗಿದೆ. ಸ್ಮಾರ್ಟ್ ಶಾಲೆಗಳು ಆರಂಭಗೊಂಡಿವೆ. ನವೀಕರಿಸಬಹುದಾದ ಇಂಧನ ವಲಯದಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಿದೆ. ಇದು ಭಾರತದ ಅಮೃತ ಕಾಲ ಎಂದರು. ಕರ್ನಾಟಕದಲ್ಲಿ ಹೂಡಿಕೆ ಮಾಡುವುದು ಭಾರತದ ಅಭಿವೃದ್ಧಿಗೆ ಕೈಜೋಡಿಸಿದಂತೆ. ಅತೀ ದೊಡ್ಡ ಪ್ರಜಾಪ್ರಭುತ್ವ ದೇಶದಲ್ಲಿ ಹೂಡಿಕೆ ಮಾಡುತ್ತಿರುವ ಹೆಮ್ಮೆ ಉದ್ಯಮಿಗಳಲ್ಲಿದೆ. ರಾಜ್ಯದ ಜತೆ ಡಬಲ್ ಇಂಜಿನ್ ಸರ್ಕಾರಗಳ ಪವರ್ ಇದೆ. ಕರ್ನಾಟಕ ಹಲವು ವಲಯಗಳಲ್ಲಿ ಮೊದಲ ಸ್ಥಾನದಲ್ಲಿ ಇದೆ. ದೇಶದ ಹಲವು ರಾಜ್ಯಗಳಿಗಷ್ಟೇ ಅಲ್ಲ ಹಲವು ದೇಶಗಳಿಗೂ ಕರ್ನಾಟಕ ಮಾದರಿಯಾಗಿದೆ ಎಂದರು.

4.34 ಲಕ್ಷ ಕೋಟಿ ಬಂಡವಾಳ ಖಾತರಿ

ಹಾಕಲಾಗಿದೆ. ಮುಂದಿನ 5 ವರ್ಷದೊಳಗೆ ಬೆಂಗಳೂರು ಸೇರಿದಂತೆ ರಾಜ್ಯದ 2 ಮತ್ತು 3ನೇ ಹಂತದ ನಗರಗಳಲ್ಲಿ ಈ ಉದ್ಯಮಿಗಳು ವಿವಿಧ ವಲಯಗಳಲ್ಲಿ ಸ್ಥಾಪನೆ ಯಾಗಲಿವೆ. ಗ್ರೀನ್ ಹೈಡ್ರೋಜನ್ ವಲಯದಲ್ಲಿ ಸುಮಾರು 7 ಕಂಪನಿಗಳು 2.71 ಲಕ್ಷ ಕೋಟಿ ಹೂಡಿಕೆ ಮಾಡಲು ಆಸಕ್ತಿ ತೋರಿವೆ.

ಜಿಂದಾಲ್‌ನಿಂದ ವಿವಿಧ ಕ್ಷೇತ್ರದಲ್ಲಿ ಲಕ್ಷ ಕೋಟಿ ಯೋಜನೆ ಮುಂದಿನ ಐದು ವರ್ಷದೊಳಗೆ ಕರ್ನಾಟಕದಲ್ಲಿ ಉಕ್ಕು, ಹಸಿರು ಇಂಧನ, ಬಂದರು ಸೇರಿದಂತೆ ವಿವಿಧ ವಲಯಗಳಲ್ಲಿ ಒಂದು ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡುವ ಯೋಜನೆಯನ್ನು ಹಾಕಿಕೊಂಡಿದ್ದೇವೆ ಎಂದು ಜೆಎಸ್‌ಡಬ್ಲ್ಯೂ ಗ್ರೂಪ್‌ನ ಅಧ್ಯಕ್ಷ ಸಜ್ಜನ್ ಜಿಂದಾಲ್ ಇದೇ ಸಂದರ್ಭದಲ್ಲಿ ಘೋಷಿಸಿದರು. ಈಗಾಗಲೇ ಜಿಂದಾಲ್ ಕಂಪನಿ ರಾಜ್ಯದ ವಿವಿಧ ಕ್ಷೇತ್ರದಲ್ಲಿ 1 ಲಕ್ಷಕ್ಕೂ ಅಧಿಕ ಕೋಟಿ ಬಂಡವಾಳ ಹೂಡಿಕೆ ಮಾಡಿದೆ. ಮುಂದಿನ 5 ವರ್ಷದೊಳಗೆ ಇಷ್ಟೇ ಪ್ರಮಾಣದ ಬಂಡವಾಳ ಹೂಡಿಕೆ ಮಾಡಲಿದ್ದೇವೆ ಎಂದು ಹೇಳಿದರು. ಜೆಎಸ್‌ಡಬ್ಲ್ಯೂ ಕಂಪನಿಯು ಕರ್ನಾಟಕದಲ್ಲಿ ಉಕ್ಕು ಘಟಕ, ಗ್ರೀನ್ ಎನರ್ಜಿ, ಬಂದರು, ವಿಮಾನ ನಿಲ್ದಾಣ, ಉತ್ಪಾದನಾ ವಲಯ ಸೇರಿದಂತೆ ಮತ್ತಿತರ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆ ಮಾಡಿದೆ. ವಿಶ್ವದಲ್ಲೇ 3ನೇ ಅತಿದೊಡ್ಡ ಉಕ್ಕು ಘಟಕ ಕರ್ನಾಟಕದಲ್ಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ಇಂದು ಎಲ್ಲ ಕ್ಷೇತ್ರಗಳಲ್ಲೂ ಜಾಗತಿಕ ನಾಯಕನಾಗಿ ಹೊರಹೊಮ್ಮುತ್ತಿದೆ. ಕಾರಣ ಇಲ್ಲ ವಿಶ್ವ ದರ್ಜೆಯ ಮೂಲಭೂತ ಸೌಕರ್ಯಗಳಿವೆ. ಹೀಗಾಗಿ ಉದ್ಯಮಿಗಳು ಈ ರಾಜ್ಯದತ್ತ ದೊಡ್ಡ ಸಂಖ್ಯೆಯಲ್ಲಿ ಬರುತ್ತಿದ್ದಾರೆ ಎಂದು ಪ್ರಶಂಸಿಸಿದರು.

ನಮ್ಮ ಚಿಕ್ಕಪ್ಪನವರಾದ ಎಸ್.ಆರ್.ಜಿಂದಾಲ್ ಅವರು 30 ವರ್ಷಗಳ ಹಿಂದೆ ಎಲ್ಲಿ ಬಂಡವಾಳ ಹೂಡಿಕೆ ಮಾಡಬೇಕೆಂದು ಆಲೋಚಿಸುತ್ತಿದ್ದರು. ಅನೇಕ ರಾಜ್ಯಗಳಲ್ಲಿ ಸುತ್ತಾಟ ನಡೆಸಿ ಎಲ್ಲಿಯೂ ಬಂಡವಾಳ ಹೂಡಿಕೆಗೆ ಮೂಲಭೂತ ಸೌಕರ್ಯಗಳು ಸಿಗುತ್ತಿಲ್ಲ ಎಂದು ಯೋಚಿಸುತ್ತಿದ್ದಾಗ ಕರ್ನಾಟಕ ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಯೊಬ್ಬರು, ನಮ್ಮ ರಾಜ್ಯಕ್ಕೆ ಬಂದರೆ ಎಲ್ಲ ರೀತಿಯ ಮೂಲಸೌಕರ್ಯಗಳನ್ನು ಕೊಡುವುದಾಗಿ ಆಶ್ವಾಸನೆ ಕೊಟ್ಟಿದ್ದರು. ನಾವು ತಕ್ಷಣವೇ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡೆವು. ನಿರೀಕ್ಷೆಗೂ ಮೀರಿ ಸರ್ಕಾರದಿಂದ ಸ್ಪಂದನೆ ಸಿಕ್ಕಿತು. ಜೆಎಸ್‌ಡಬ್ಲ್ಯೂಗೆ ಕರ್ನಾಟಕವೇ ಅತ್ಯಂತ ನೆಚ್ಚಿನ ಹೂಡಿಕೆ ತಾಣವಾಗಿದೆ ಎಂದರು.

ಅದಾನಿ ಗ್ರೂಪ್ 7 ವರ್ಷದಲ್ಲಿ ಲಕ್ಷ ಕೋಟಿ ಹೂಡಿಕೆ: ಇದೇ ಸಂದರ್ಭದಲ್ಲಿ ಮಾತನಾಡಿದ ಅದಾನಿ ಗ್ರೂಪ್‌ನ ಸಿಇಓ ಕರಣ್ ಗೌತಮ್ ಅದಾನಿ ಮುಂದಿನ 7 ವರ್ಷದೊಳಗೆ ಕರ್ನಾಟಕದಲ್ಲಿ ವಿವಿಧ ವಲಯದಲ್ಲಿ ಒಂದು ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡುವುದಾಗಿ ತಿಳಿಸಿದರು. ಕರ್ನಾಟಕ ಎಲ್ಲ ವಲಯಗಳಲ್ಲೂ ಸಾಕಷ್ಟು ಮುಂಚೂಣಿಯಲ್ಲಿರುವ ರಾಜ್ಯವಾಗಿದೆ. ವಿಶ್ವದರ್ಜೆಯ ಮೂಲಭೂತ ಸೌಕರ್ಯಗಳು ಇಲ್ಲಿ ಸಿಗುತ್ತವೆ. ಹೀಗಾಗಿ ನಾವು ಮುಂದಿನ 7 ವರ್ಷದೊಳಗೆ ಒಂದು ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಕರ್ನಾಟಕವು ವೈಮಾನಿಕ, ರಕ್ಷಣೆ, ಕೈಗಾರಿಕೆ, ಐಟಿಬಿಟಿ ಸೇರಿದಂತೆ ಎಲ್ಲಾ ವಲಯಗಳಲ್ಲೂ ಸಾಕಷ್ಟು ಮುಂಚೂಣಿಯಲ್ಲಿರುವ ರಾಜ್ಯವಾಗಿದೆ. ಇಂಥ ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡುವುದು ನಮ್ಮ ಸೌಭಾಗ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಉಡುಪಿ ಪವರ್ ಸ್ಟೇಷನ್, ಮಂಗಳೂರು ವಿಮಾನ ನಿಲ್ದಾಣ ನಿಲ್ದಾಣ ನಮ್ಮ ಅದಾನಿ ಗ್ರೂಪನಿಂದ ನಡೆಯುತ್ತಿದೆ. ಈಗಾಗಲೇ ರಾಜ್ಯದಲ್ಲಿ 20 ಸಾವಿರ ಕೋಟಿ ಬಂಡವಾಳ ರಾಜ್ಯದಲ್ಲಿ ಹೂಡಿಕೆ ಮಾಡಿದ್ದೇವೆ. ರಿನ್ಯೂವೆಬಲ್ ಎನರ್ಜಿ ಕ್ಷೇತ್ರ ಸೋಲಾರ್ ಪವರ್ ಕ್ಷೇತ್ರದಲ್ಲೂ ಹೂಡಿಕೆ ಮಾಡಲಿದ್ದೇವೆ. ಜಲ ಸಾರಿಗೆ, ಲಾಜಿಸ್ಟಿಕ್ ಕ್ಷೇತ್ರದಲ್ಲೂ ಹೂಡಿಕೆ ಮಾಡುವುದಾಗಿ ತಿಳಿಸಿದರು. ಅದಾನಿ ಪೋರ್ಟ್, ಅಡುಗೆ ಎಣ್ಣೆ ಕ್ಷೇತ್ರದಲ್ಲಿ ಹೂಡಿಕೆ ಮಾಡಲಾಗಿದೆ. ಮಲ್ಟಿಪಲ್ ಲಾಜಿಸ್ಟಿಕ್ ಪಾರ್ಕ್ ಅಭಿವೃದ್ಧಿಪಡಿಸುತ್ತೇವೆ, ಅಹಾರ ಸಂಸ್ಕರಣೆ ಮತ್ತು ಇಂಧನ ಕ್ಷೇತ್ರದಲ್ಲಿ ಹೂಡಿಕೆ ಮಾಡುತ್ತೇವೆ. ಇದರಿಂದ ಉದ್ಯೋಗಾವಕಾಶಗಳು ಕೂಡ ಲಭ್ಯವಾಗಲಿದೆ ಎಂದು ಕರಣ್ ಅದಾನಿ ಹೇಳಿದರು.

ಸಾವಿರ... ಸಾವಿರ ಕೋಟಿ ಬಂಡವಾಳ!: ಗ್ರೀನ್ ಅಮೋನಿಯಂ ವಲಯದಲ್ಲಿ ಶಶಿಶೇಖರ್ 51 ಸಾವಿರ ಕೋಟಿ, ಕೆ.ರವಿಕುಮಾರ್ ರೆಡ್ಡಿ 50 ಸಾವಿರ ಕೋಟಿ, ಉತ್ಪಾದನಾ ವಲಯದಲ್ಲಿ ಪರಾಗ್ ಶರ್ಮ 22,900 ಕೋಟಿ, ಎಲೆಕ್ಟ್ರಾನಿಕ್ ವಲಯದಲ್ಲಿ 40 ಸಾವಿರ ಕೋಟಿ, ಸೆಮಿಕಂಡಕ್ಟರ್ ವಲಯದಲ್ಲಿ 22,600 ಕೋಟಿ, ಲಿಪಿಯಂ ಅಮೋನಿಯಂ ವಲಯದಲ್ಲಿ 6,200 ಕೋಟಿ, ಏರ್‌ಟೇಲ್ 15 ಸಾವಿರ ಕೋಟಿ, ಜಿಯೋ 11 ಸಾವಿರ ಕೋಟಿ, ಎಜಿಎಜಿ 8 ಸಾವಿರ ಕೋಟಿ, ಇಎಸ್‌ಆರ್ 2,500 ಕೋಟಿ, ಲುಲು 2000 ಕೋಟಿ, ಭಾರ್ತಿ ಏರ್‌ಟೇಲ್ 1500 ಕೋಟಿ, ದಾಲ್ಮಿಯಾ ಸಿಮೆಂಟ್ 3000 ಕೋಟಿ, ಎಸ್‌ಎಲ್‌ಆರ್ 1500 ಕೋಟಿ, ಎಚ್‌ಪಿಎಲ್ 1611 ಕೋಟಿ ಬಂಡವಾಳ ಹೂಡಿಕೆ ಮಾಡಿವೆ.

ಆನ್‌ಲೈನ್‌ನಲ್ಲಿ ದೂರು ಸಲ್ಲಿಸಿ

ಪೊಲೀಸ್ ಠಾಣೆಯಿಂದ ಮತ್ತೊಂದು ಪೊಲೀಸ್ ಠಾಣೆಗೆ ಅಲೆಯುತ್ತಿದ್ದರು. ವಾಹನ ವಿಮೆ ಪಡೆಯಲು ಎಫ್‌ಐಆರ್ ಕಡ್ಡಾಯ ಎಂದು ಡಿಜಿ ಮತ್ತು ಐಜಿಪಿ ಪ್ರವೀಣ್ ಸೂದ್ ಹೇಳಿದ್ದಾರೆ. ವಾಹನ ಕಳೆದುಹೋಗಿದೆ ಎಂದು ಬರುವ ದೂರುಗಳಲ್ಲಿ ಶೇಕಡಾ 99ರಷ್ಟು ಪ್ರಾಮಾಣಿಕವಾಗಿದ್ದು, ಇದರಿಂದಾಗಿ ಎಫ್‌ಐಆರ್ ಸಲ್ಲಿಕೆ ಪ್ರಕ್ರಿಯೆಯನ್ನು ಆನ್‌ಲೈನ್ ಮಾಡಲಾಗಿದೆ. ಕರ್ನಾಟಕ ಪೊಲೀಸ್ ವೆಬ್‌ಸೈಟ್‌ಗೆ ಲಾಗ್ ಇನ್ ಆಗಿ ಪ್ರಕ್ರಿಯೆಯನ್ನು ಅನುಸರಿಸಿ ಆನ್‌ಲೈನ್‌ನಲ್ಲಿ ದೂರು ಸಲ್ಲಿಸಿ. ದೂರುದಾರರ ಡಿಜಿಟಲ್ ಸಹಿ, ಆಧಾರ್ ಸಂಖ್ಯೆಯ ದೃಢೀಕರಣ ಮುಖ್ಯವಾಗುತ್ತದೆ ಎಂದು ಸೂದ್ ಹೇಳಿದ್ದಾರೆ. ದೂರುದಾರರು ತಮ್ಮ ದೂರಿನಲ್ಲಿ ಕಳ್ಳತನದ ಸ್ಥಳವನ್ನು ನೀಡಿದ ನಂತರ ಆನ್‌ಲೈನ್‌ನಲ್ಲಿ ವ್ಯಾಪ್ತಿಯ ಪೊಲೀಸ್ ಠಾಣೆಯ ಹೆಸರನ್ನು ಕೇಳುತ್ತದೆ. ಅಂತೆಯೇ, ಕಳೆದುಹೋದ ವಾಹನದ ವಿವರಗಳನ್ನು ಅದರ ನೋಂದಣಿ ಸಂಖ್ಯೆಯಿಂದ ದೃಢೀಕರಿಸಲಾಗುತ್ತದೆ, ಡಿಜಿಟಲ್ ಸೇವೆಯನ್ನು ಪೊಲೀಸರ ಅಪರಾಧ ಮತ್ತು ಕ್ರಿಮಿನಲ್ ಟ್ರ್ಯಾಕಿಂಗ್ ನೆಟ್‌ವರ್ಕ್ ಮತ್ತು ಸಿಸ್ಟಮ್ಸ್ ಮಾದರಿಯಲ್ಲಿ ಸಂಯೋಜಿಸಲಾಗಿದೆ.

ಕಳೆದ ವಾರ ಈ ಸೇವೆಯನ್ನು ಪ್ರಾರಂಭಿಸಲಾಯಿತು ಮತ್ತು ಅಂದಿನಿಂದ, ಕರ್ನಾಟಕದಲ್ಲಿ ವಾಹನ ಕಳ್ಳತನದ ಬಗ್ಗೆ ಪೊಲೀಸರು ಸುಮಾರು 600 ಆನ್‌ಲೈನ್ ದೂರುಗಳನ್ನು ಸ್ವೀಕರಿಸಿದ್ದಾರೆ. ಡಿಜಿಟಲ್ ಸೇವೆಯನ್ನು ಪೊಲೀಸರ ಅಪರಾಧ ಮತ್ತು ಕ್ರಿಮಿನಲ್ ಟ್ರ್ಯಾಕಿಂಗ್ ನೆಟ್‌ವರ್ಕ್ ಮತ್ತು ಸಿಸ್ಟಮ್ಸ್ ಮಾದರಿಯಲ್ಲಿ ಸಂಯೋಜಿಸಲಾಗಿದೆ. ಮುಂದಿನ ಹಂತವಾಗಿ, ಎಫ್‌ಐಆರ್ ನೋಂದಣಿಯ ದಿನಾಂಕದಿಂದ 91ನೇ ದಿನದಂದು ವಾಹನಗಳು ಪತ್ತೆಯಾಗದ ಜನರಿಗೆ ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ 'ಪತ್ತೆ ಹಚ್ಚದ' ಅಥವಾ ಮುಚ್ಚುವಿಕೆ ('ಸಿ') ವರದಿಯನ್ನು ಸೇರಿಸಲಾಗುತ್ತದೆ ಎಂದರು. ಸಿಆರ್‌ಪಿಸಿ ಅಡಿಯಲ್ಲಿ, ಎಫ್‌ಐಆರ್ ದಾಖಲಾದ ದಿನಾಂಕದಿಂದ ಪ್ರಕರಣವನ್ನು ತನಿಖೆ ಮಾಡಲು ಮತ್ತು ಚಾರ್ಜ್ ಶೀಟ್ ಸಲ್ಲಿಸಲು ಪೊಲೀಸರಿಗೆ 90 ದಿನಗಳನ್ನು ನೀಡಲಾಗುತ್ತದೆ. ವಾಹನ ಕಳೆದುಕೊಂಡವರಿಗೆ ವಿಮೆಯನ್ನು ಪಡೆಯಲು 'ಪತ್ತೆಯಾಗದ' ಅಥವಾ 'ಸಿ' ವರದಿಯು ಅತ್ಯಗತ್ಯವಾಗಿರುತ್ತದೆ.

ಪುನೀತ್‌ಗೆ 'ಕರ್ನಾಟಕ ರತ್ನ' ಪ್ರಶಸ್ತಿ: ವಿಶಿಷ್ಟ ರೀತಿಯಲ್ಲಿ ಕುಟುಂಬವೊಂದರ ಸಂಭ್ರಮಾಚರಣೆ



ಮೈಸೂರು, ನ.2(ಜಿಎ)- ಕರ್ನಾಟಕದ ಯುವ ರತ್ನ ಡಾ.ಪುನೀತ್ ರಾಜ್‌ಕುಮಾರ್‌ಗೆ ಮರಣೋತ್ತರ 'ಕರ್ನಾಟಕ ರತ್ನ' ಪ್ರಶಸ್ತಿ ಹಿನ್ನೆಲೆಯಲ್ಲಿ ಸಂತಸಗೊಂಡ ಮೈಸೂರಿನ ಕುಟುಂಬವೊಂದರ 160ಕ್ಕೂ ಹೆಚ್ಚು ಸದಸ್ಯರು, ವಿಭಿನ್ನ ರೀತಿಯಲ್ಲಿ ಸಂಭ್ರಮಿಸಿದ್ದಾರೆ.

ನಟ ಪುನೀತ್ ರಾಜ್‌ಕುಮಾರ್‌ಗೆ ಕರ್ನಾಟಕ ಸರ್ಕಾರವು ಮರಣೋತ್ತರ 'ಕರ್ನಾಟಕ ರತ್ನ' ಪ್ರಶಸ್ತಿ ಪ್ರಧಾನ ಮಾಡಿದ ಹಿನ್ನೆಲೆಯಲ್ಲಿ ಇಡೀ ರಾಜ್ಯದಾದ್ಯಂತ ಅವರ ಅಭಿಮಾನಿಗಳು ವಿವಿಧ ರೀತಿಯಲ್ಲಿ ಸಂಭ್ರಮಿಸಿದ್ದಾರೆ. ಹಾಗೇ ಮೈಸೂರಿನ ಅಪ್ಪು ಅಭಿಮಾನಿ ಇಡೀ ಕುಟುಂಬ ಸಾರ್ವಜನಿಕರಿಗೆ ನಾನಾ ಸಸಿ ನೀಡುವುದರೊಂದಿಗೆ ಅವರ ಭಾವಚಿತ್ರ ಮೆರವಣಿಗೆ ಮಾಡುವ ಮೂಲಕ ವಿಶೇಷ ಗೌರವ ಸಲ್ಲಿಸಿದೆ.

ಅಪ್ಪು ಕಾಲವಾದ ನಂತರ ರಾಜ್ಯದಲ್ಲಿ ಅವರ ಆಲೋಚನೆಗಳಂತೆ ಅಭಿಮಾನಿಗಳು ಸಮಾಜಮುಖಿ ಕಾರ್ಯಗಳ ಮೂಲಕ ಅವರ ನೆನಪನ್ನು ಅಚ್ಚ ಹಸಿರಾಗಿಡಲು ಮುಂದಾಗಿದ್ದು, ಅದು ಇಂದಿಗೂ ನಿರಂತರವಾಗಿ ನಡೆಯುತ್ತಿದೆ. ಪುನೀತ್ ರಾಜ್‌ಕುಮಾರ್ ಅವರ ಸಮಾಜಮುಖಿ ಕಾರ್ಯಗಳನ್ನು ಗುರುತಿಸಿ ಮೈಸೂರು ವಿಶ್ವವಿದ್ಯಾನಿಲಯವು ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು. ರಾಜ್ಯದ ಕೆಲವೆಡೆ ಅವರ ಮೂರ್ತಿಗಳ ನಿರ್ಮಾಣ ವಾಗಿವೆ. ಅವರು ಚಿತ್ರಗಳಲ್ಲಿ ಮತ್ತು ಕಾರ್ಯದ ಮೂಲಕ ತೋರಿಸಿ ಕೊಟ್ಟ ಆದರ್ಶಗಳನ್ನು ಅಭಿಮಾನಿಗಳು ಪಾಲಿಸುತ್ತಿದ್ದಾರೆ.

ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಬೇಕು ಎಂಬುದು ಇಡೀ ರಾಜ್ಯದ ಜನತೆಯ ಒಕ್ಕೊರಲ ಮನವಿಯಾಗಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಪ್ಪು ನಮನ ಕಾರ್ಯಕ್ರಮದಲ್ಲಿ ಕನ್ನಡ ರಾಜ್ಯೋತ್ಸವದ ದಿನದಂದು ಅವರಿಗೆ ಪ್ರಶಸ್ತಿಯನ್ನು ನೀಡಲಾಗುವುದು ಎಂದು ಘೋಷಣೆ ಮಾಡಿದ್ದರು. ಅದರಂತೆ ನ.1ರಂದು ವಿಧಾನಸೌಧದ ಮುಂಭಾಗ ನಟ ರಜನಿ ಕಾಂತ್, ಜೂ. ಎನ್.ಟಿ.ಆರ್ ಉಪಸ್ಥಿತಿಯಲ್ಲಿ ಪುನೀತ್ ರಾಜ್ ಕುಮಾರ್ ಅವರ ಪತ್ನಿ ಅಶ್ವಿನಿ ಅವರಿಗೆ ಪ್ರಧಾನ ಕರ್ನಾಟಕ ರತ್ನ ಮಾಡಿದರು. ಅಭಿಮಾನಿಗಳ ಆಸೆಯಂತೆ ಅಪ್ಪು ಕರ್ನಾಟಕ ರತ್ನ ಆದ ನಂತರ ಇಡೀ ಕರ್ನಾಟಕದಲ್ಲಿ ವಿವಿಧ ರೀತಿಯಲ್ಲಿ ಸಂಭ್ರಮಾಚರಣೆಯನ್ನು ಅಭಿಮಾನಿಗಳು ನಡೆಸಿದರು. ಆದರೆ, ಮೈಸೂರಿನ ಅಪ್ಪು ಅಭಿಮಾನಿಗಳ ಕುಟುಂಬದ 6 ರಿಂದ 60 ವರ್ಷದ 160ಕ್ಕೂ ಅಧಿಕ ಸದಸ್ಯರು ಗಂಧದ ಗುಡಿ ಚಿತ್ರದ ಹೆಸರು ಮತ್ತು ಪುನೀತ್ ಭಾವಚಿತ್ರವಿರುವ ಟಿ-ಶರ್ಟ್ ಧರಿಸಿ ನಗರದ ಕೋಟೆ ಆಂಜನೇಯ ದೇವಾಲಯದ ಮುಂಭಾಗ ಜಮಾವಣೆಗೊಂಡು, ಸಾರ್ವಜನಿಕರಿಗೆ 200ಕ್ಕೂ ಹೆಚ್ಚು ಸಸಿಗಳನ್ನು ವಿತರಣೆ ಮಾಡಿದರು. ನಂತರ ಅವರ ಭಾವಚಿತ್ರವುಳ್ಳ ವಾಹನದ ಮೆರವಣಿಗೆ ಮೂಲಕ ನಗರದ ಪಿವಿಆರ್ ಮಲ್ಟಿಪ್ಲೆಕ್ಸ್‌ಗೆ ತೆರಳಿ ಇಡೀ ಕುಟುಂಬ ಚಿತ್ರ ವೀಕ್ಷಿಸಿತು.

> "ಗಂಧದ ಗುಡಿ ಚಿತ್ರದ ಮೂಲಕ ಅಪ್ಪು ಅವರು ನಮ್ಮ ನಾಡು, ನುಡಿಯ ಮಹತ್ವ, ವನ್ಯ ಸಂಪತ್ತು ತೋರಿಸಿದ್ದಾರೆ. ಅದಕ್ಕಾಗಿ ನಾವು ವಿಭಿನ್ನವಾಗಿ ಸಸಿಗಳನ್ನು ವಿತರಣೆ ಮಾಡಿದ್ದೇವೆ. ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ಪ್ರಧಾನಕ್ಕಾಗಿ ನಮ್ಮ ಇಡೀ ಕುಟುಂಬ ಕಾದಿತ್ತು. ಈಗ ಲಭಿ ಸಿರುವುದರಿಂದ ಅದೇ ಹೆಮ್ಮೆಯಿಂದ ಚಿತ್ರ ವೀಕ್ಷಣೆ ಮಾಡುತ್ತಿದ್ದೇವೆ.
> **-ವಿನಯ್, ಕುಟುಂಬ ಸದಸ್ಯ**

> "ಅಪ್ಪುಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಿದ್ದಕ್ಕೆ ಧನ್ಯವಾದ ತಿಳಿಸುತ್ತೇವೆ. ನಮ್ಮ ಕುಟುಂಬವೂ ಅವರ ಅಭಿಮಾನಿಯಾಗಿದ್ದು, ಅವರ ಜೇಮ್ಸ್ ಚಿತ್ರವನ್ನು ಇಡೀ ಕುಟುಂಬ ನಗರದ ಪಿವಿಆರ್ ಮಲ್ಟಿಪ್ಲೆಕ್ಸ್‌ನಲ್ಲಿ ನೋಡಿದ್ದೆವು. ಅದೇ ರೀತಿ ಇಲ್ಲಿಂದ ಮೆರವಣಿಗೆ ತೆರಳಿ ಗಂಧದ ಗುಡಿ ಚಿತ್ರ ವೀಕ್ಷಿಸುತ್ತಿದ್ದೇವೆ.
> **-ಕೆ.ಎಸ್ ಮುರಳಿ, ಕುಟುಂಬ ಸದಸ್ಯ**

ಸೌದಿ ಕರೆನ್ಸಿ ನೀಡುವ ನೆಪದಲ್ಲಿ ವ್ಯಕ್ತಿಗೆ ಲಕ್ಷ ರೂ. ಪಂಗನಾಮ

ಮೈಸೂರು,ನ.2-ಸೌದಿ ಕರೆನ್ಸಿ ಎಕ್ಸ್‌ಚೇಂಜ್ ಮಾಡಿಕೊಡುವುದಾಗಿ ನಂಬಿಸಿ ವ್ಯಕ್ತಿಯೊಬ್ಬರಿಗೆ ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಲಷ್ಕರ್ ಮೊಹಲ್ಲಾ ಮಹಮ್ಮದ್ ಸೇಟ್ ಬ್ಲಾಕ್ ನಿವಾಸಿ ಅಸ್ಗರ್ ಪಾಷ(48) ವಂಚನೆ ಗೊಳಗಾದವರಾಗಿದ್ದು, ಇವರು ಅಕ್ಟೋಬರ್ 16ರಂದು ದಿನಸಿ ಸಾಮಾನು ಖರೀದಿಸಲು ಚಿಕ್ಕ ಮಾರ್ಕೆಟ್‌ಗೆ ಹೋಗಿದ್ದಾಗ, ಕರ್ಚೀಫ್ ಮಾರುತ್ತಿದ್ದ ವ್ಯಕ್ತಿ, ತನ್ನನ್ನು ಶಕೀಲ್ ಸೇಟ್ ಎಂದು ಪರಿಚಯಿಸಿಕೊಂಡು ತನ್ನ ಬಳಿ ಸೌದಿ ಕರೆನ್ಸಿ ಇರುವುದಾಗಿಯೂ ಕಡಿಮೆ ಬೆಲೆಗೆ ಹೆಚ್ಚಿನ ಕರೆನ್ಸಿಯನ್ನು ನೀಡುವುದಾಗಿಯೂ ತಿಳಿಸಿದ್ದಾನೆ. ಅದಕ್ಕೆ ಅಸ್ಗರ್ ಪಾಷ ಸ್ಪಂದಿಸಿದಾಗ ಅವರ ಮೊಬೈಲ್‌ಗೆ ಕರೆ ಮಾಡಿದ ಆತ, ಲಕ್ಷ ರೂ.ಗಳೊಂದಿಗೆ ಬಂದರೆ ಸೌದಿ ಕರೆನ್ಸಿ ನೀಡುವುದಾಗಿ ಕರೆದಿದ್ದಾನೆ. ಇದನ್ನು ನಂಬಿದ ಅಸ್ಗರ್ ಪಾಷ, ತಮ್ಮ ಪತ್ನಿ ಅಸ್ಮಾ ಬೇಗಂ ಜೊತೆ ವಂಚಕ ತಿಳಿಸಿದ್ದ ಸಂತೇಪಾಳ ಬಳಿಗೆ ತೆರಳಿದ್ದಾನೆ. ಶಕೀಲ್ ಸೇಟ್ ಎಂದು ಪರಿಚಯಿಸಿಕೊಂಡಿದ್ದ ವ್ಯಕ್ತಿ ಜೊತೆ ಮತ್ತೊಬ್ಬನು ಕೂಡ ಅಲ್ಲಿಗೆ ಹಾಜರಾಗಿ ಅಸ್ಮಾ ಬೇಗಂ ಅವರನ್ನು ಅಂಗಡಿಯೊಂದರ ಮುಂದೆ ಕುಳಿತಿರುವಂತೆ ತಿಳಿಸಿ, ಅಸ್ಗರ್ ಪಾಷರನ್ನು ಹೂಟಗಳ್ಳಿ ಬಳಿ ಕರೆದೊಯ್ದು ಅವರಿಂದ ಲಕ್ಷ ರೂ. ಪಡೆದು ಬ್ಯಾಗ್‌ವೊಂದನ್ನು ಕೊಟ್ಟು ಮನೆಯಲ್ಲಿ ಹೋಗಿ ನೋಡುವಂತೆ ತಿಳಿಸಿ ತೆರಳಿದ್ದಾರೆ. ತಮ್ಮ ಪತ್ನಿ ಕುಳಿತಿದ್ದ ಸ್ಥಳಕ್ಕೆ ಬಂದ ನಂತರ ಅಸ್ಗರ್ ಪಾಷ ಬ್ಯಾಗ್ ತೆರೆದು ನೋಡಿದಾಗ ಅದರಲ್ಲಿ ನ್ಯೂಸ್ ಪೇಪರ್‌ಗಳನ್ನು ಸುತ್ತಿಟ್ಟಿದ್ದ ಬಂಡಲ್ ಇತ್ತೇ ಹೊರತು ಸೌದಿ ಕರೆನ್ಸಿ ಇರಲಿಲ್ಲ. ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀ ಕನಕದಾಸರ ಜಯಂತಿ ಪ್ರಯುಕ್ತ ಪ್ರತಿಭಾ ಪುರಸ್ಕಾರ

ಸಮುದಾಯದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ



ಮೈಸೂರು,ನ.2(ಪಿಎಂ)- ಮೈಸೂರಿನ ಸಿದ್ಧಾರ್ಥನಗರದ ಸಂತ ಶ್ರೀ ಕನಕದಾಸರ ಜಯಂತ್ಯೋತ್ಸವ ಸಮಿತಿ ವತಿಯಿಂದ ಶ್ರೀ ಕನಕದಾಸರ 535ನೇ ಜಯಂತಿ ಪ್ರಯುಕ್ತ ಕುರುಬ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ ಎಂದು ಸಮಿತಿ ಪ್ರಧಾನ ಕಾರ್ಯದರ್ಶಿ ಬ್ಯಾಂಕ್ ಪುಟ್ಟಸ್ವಾಮಿ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2021-22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ಮೈಸೂರು ನಗರ, ಜಿಲ್ಲೆಯ ಕುರುಬ ಸಮಾಜ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಬಹುದು. ಆಸಕ್ತರು ಅಂಕಪಟ್ಟಿ, ಜಾತಿ ದೃಢೀಕರಣ ಪತ್ರದೊಂದಿಗೆ ನ.8ರೊಳಗೆ ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಶ್ರೀ ಮಹಾಲಕ್ಷ್ಮಿ ಕೊಲ್ಲಾಪುರದಮ್ಮ ದೇವಸ್ಥಾನಕ್ಕೆ ಅರ್ಜಿಗಳನ್ನು ತಲುಪಿಸಬೇಕು. ಹೆಚ್ಚಿನ ಮಾಹಿತಿಗೆ ಮೊ.ಸಂ. 98451 16664 ಅಥವಾ 81979 67641 ಅನ್ನು ಸಂಪರ್ಕಿಬಹುದು ಎಂದರು.

ದಾಸರ ಗಾಯನ ಸ್ಪರ್ಧೆ: ಕನಕದಾಸರ ಜಯಂತಿ ಪ್ರಯುಕ್ತ ನ.6ರಂದು ಬೆಳಗ್ಗೆ 9.30ಕ್ಕೆ ಮೈಸೂರಿನ ಕುವೆಂಪುನಗರದ ಶ್ರೀ ಕಾಗಿನೆಲೆ ಬಿಎಡ್ ಕಾಲೇಜಿನಲ್ಲಿ ದಾಸರ ಗಾಯನ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಯಾವುದೇ ಸಮುದಾಯದವರು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿದೆ. 5ರಿಂದ 15 ವರ್ಷದೊಳಗೆ, 16ರಿಂದ 30 ವರ್ಷದೊಳಗೆ, 31ರಿಂದ 50 ವರ್ಷದೊಳಗೆ ಹಾಗೂ 51 ವರ್ಷ ಮೇಲ್ಪಟ್ಟವರ ವಿಭಾಗಗಳಲ್ಲಿ ಗಾಯನ ಸ್ಪರ್ಧೆ ನಡೆಯಲಿದೆ. ಆಸಕ್ತರು ಮೊ.ಸಂ. 91130 41242 ಅಥವಾ 90352 67720 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಸಮಿತಿ ವತಿಯಿಂದ ನ.12ರಂದು ಮೈಸೂರಿನ ಸಿದ್ಧಾರ್ಥನಗರದ ಕನಕ ಭವನದಲ್ಲಿ ನಡೆಯುವ ಶ್ರೀ ಕನಕದಾಸರ ಜಯಂತಿಯಲ್ಲಿ ಪ್ರತಿಭಾ ಪುರಸ್ಕಾರ ಹಾಗೂ ಗಾಯನ ಸ್ಪರ್ಧೆ ವಿಜೇತರಿಗೆ ಬಹುಮಾನ ನೀಡಲಾಗುವುದು ಎಂದರು. ಸಮಿತಿ ಸಂಚಾಲಕ ಎಂ.ಶಿವಣ್ಣ, ಪದಾಧಿಕಾರಿಗಳಾದ ನಾಗರಾಜು, ಮಾದಯ್ಯ, ಸಿದ್ದನಾಗೇಂದ್ರ ಗೋಷ್ಠಿಯಲ್ಲಿದ್ದರು.

ನಾಳೆ ಆರ್ಯ ಈಡಿಗರ ಸಂಘದ ನೂತನ ಹಾಸ್ಟೆಲ್ ಉದ್ಘಾಟನೆ

ಮೈಸೂರು ವಿಜಯನಗರ 3ನೇ ಹಂತದಲ್ಲಿ 4 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ



ಮೈಸೂರು,ನ.2(ಪಿಎಂ)- ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದಿಂದ ಮೈಸೂರಿನ ವಿಜಯನಗರದ 3ನೇ ಹಂತದಲ್ಲಿ ಸಪ್ತಮಾತೃಕಾ ದೇವಸ್ಥಾನದ ಎದುರು ನಿರ್ಮಿಸಿರುವ ಸಮುದಾಯದ ಹಾಸ್ಟೆಲ್‌ನ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ನ.4ರಂದು ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಡಾ.ಎಂ.ಕೆ.ಪೋತರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘವು ಮೈಸೂರಿನಲ್ಲಿ 1963ರಿಂದಲೂ ಸಮುದಾಯದ ಬಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಉಚಿತ ಹಾಸ್ಟೆಲ್ ನಡೆಸುತ್ತಿದೆ. ಇಲ್ಲಿ ಪ್ರತಿವರ್ಷ ಸುಮಾರು 100 ಮಂದಿಗೆ ಉಚಿತ ಊಟ, ವಸತಿ ಕಲ್ಪಿಸುತ್ತಿದೆ. ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸುವ ನಿಟ್ಟಿನಲ್ಲಿ ಈ ನೂತನ ಕಟ್ಟಡ ನಿರ್ಮಿಸಲಾಗಿದೆ ಎಂದು ಹೇಳಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ಸಂಘಕ್ಕೆ ಮಂಜೂರಾದ 100X200 ಅಳತೆಯ ನಿವೇಶನದಲ್ಲಿ ಜನಾಂಗದ ದಾನಿಗಳ ನೆರವಿನಿಂದ ಈ ಸುಸಜ್ಜಿತ ಹಾಸ್ಟೆಲ್ ಕಟ್ಟಡ ನಿರ್ಮಿಸಲಾಗಿದೆ. 4 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಈ ಕಟ್ಟಡವು (ಪುರುಷರ ವಿದ್ಯಾರ್ಥಿನಿಲಯ) ನೆಲ ಅಂತಸ್ತು ಸೇರಿದಂತೆ ಮೂರು ಅಂತಸ್ತಿನ ಕಟ್ಟಡವಾಗಿದೆ. ಒಟ್ಟು 40 ಕೊಠಡಿಗಳಿದ್ದು, 200 ಮಂದಿಗೆ ಪ್ರವೇಶಾತಿ ನೀಡಲಾಗುವುದು. ಪಿಯು, ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಲಾಗುವುದು ಎಂದರು. ಈಗಾಗಲೇ ಕೃಷ್ಣಮೂರ್ತಿಪುರಂನಲ್ಲಿ ಸಮುದಾಯದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವನ್ನು ಸಂಘದಿಂದ ಕಲ್ಪಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೆಚ್ಚು ವಿದ್ಯಾರ್ಥಿಗಳು ಹಾಸ್ಟೆಲ್ ಪ್ರವೇಶ ಬಯಸಿ ಬರುತ್ತಿರುವ ಹಿನ್ನೆಲೆಯಲ್ಲಿ ಈ ನೂತನ ಹಾಸ್ಟೆಲ್ ನಿರ್ಮಿಸಲಾಗಿದೆ. ನ.3ರಂದು ನೂತನ ಹಾಸ್ಟೆಲ್‌ನಲ್ಲಿ ವಿವಿಧ ಪೂಜಾ ವಿಧಿವಿಧಾನ ನೆರವೇರಿಸಲಾಗುವುದು. ನ.4ರಂದು ಬೆಳಗ್ಗೆ 10.15ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಲಿದ್ದಾರೆ. ಸೋಲೂರು ರೇಣುಕಾ ಪೀಠದ ಪೀಠಾಧಿಪತಿ ಶ್ರೀ ವಿಖ್ಯಾತಾನಂದ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ ಎಂದು ಹೇಳಿದರು.

ಅತಿಥಿಗಳಾಗಿ ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಸಚಿವರಾದ ಎಸ್.ಟಿ.ಸೋಮಶೇಖರ್, ಕೋಟಾ ಶ್ರೀನಿವಾಸ ಪೂಜಾರಿ, ವಿ.ಸುನೀಲ್‌ಕುಮಾರ್, ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದರು. ಸಂಘದ ಪದಾಧಿಕಾರಿಗಳಾದ ರಾಜಶೇಖರ ಕದಂಬ, ಕೆ.ರಾಜು, ಕೆ.ಎಸ್.ಕೃಷ್ಣಮೂರ್ತಿ, ಎಸ್.ಪಿ. ಸೋಮಶೇಖರ್, ಗೋವಿಂದರಾಜ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಶಾಸಕ ಜಿ.ಹೆಚ್.ತಿಪ್ಪಾರೆಡ್ಡಿಗೆ ಹನಿಟ್ರ್ಯಾಪ್ ಯತ್ನ!

ಚಿತ್ರದುರ್ಗ, ನ.2- ಇತ್ತೀಚಿನ ದಿನಗಳಲ್ಲಿ ಹನಿಟ್ರ್ಯಾಪ್ ಪ್ರಕರಣಗಳು ಹೆಚ್ಚು ಹೆಚ್ಚು ಬೆಳಕಿಗೆ ಬರುತ್ತಿವೆ ರಾಜ್ಯದ ಮತ್ತೋರ್ವ ರಾಜಕಾರಣಿಗೆ ಹನಿಟ್ರ್ಯಾಪ್ ಯತ್ನಿಸಲಾಗಿದೆ. ಹನಿಟ್ರ್ಯಾಪ್‌ಗೆ ಯತ್ನ ಸಂಬಂಧ ಈಗಾಗಲೇ ಶಾಸಕರು ಸೈಬರ್ ಪೊಲೀಸರಿಗೆ ದೂರು ನೀಡಿದ್ದಾರೆ. ಚಿತ್ರದುರ್ಗ ಬಿಜೆಪಿ ಶಾಸಕ ಜಿ.ಹೆಚ್.ತಿಪ್ಪಾರೆಡ್ಡಿಗೆ ಹನಿಟ್ರ್ಯಾಪ್‌ಗೆ ಯತ್ನ ನಡೆದಿದೆ. ಮೊಬೈಲ್ ನಂಬರ್ ಒಂದರಿಂದ ವೀಡಿಯೋ ಕಾಲ್ ಮೂಲಕ ಶಾಸಕರನ್ನು ಸಿಲುಕಿಸುವ ಯತ್ನ ಮಾಡಲಾಗಿದೆ. ಬೆತ್ತಲೆಯಾಗಿದ್ದ ಯುವತಿಯೊಬ್ಬಳು ಶಾಸಕರಿಗೆ ವೀಡಿಯೋ ಕಾಲ್ ಮಾಡಿದ್ದಾಳೆ. ಈ ಸಂಬಂಧ ಶಾಸಕರು ಇದೀಗ ಚಿತ್ರದುರ್ಗ ಸೈಬರ್ ಠಾಣೆಗೆ ದೂರು ನೀಡಿದ್ದಾರೆ. ಯಾವುದೋ ಹೆಂಗಸಿನ ಖಾಸಗಿ ಅಂಗಾಂಗ ತೋರಿಸಿದರು. ನಂತರ ವಾಟ್ಸಪ್‌ಗೆ ಅಶ್ಲೀಲ ವೀಡಿಯೋ ಕಳಿಸಿದ್ದಾರೆ. ವೀಡಿಯೋ ಕಳುಹಿಸಿದ ನಂಬರಿನ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಿ ಎಂದು ತಿಪ್ಪಾರೆಡ್ಡಿ ದೂರಿನಲ್ಲಿ ತಿಳಿಸಿದ್ದಾರೆ.




ಮುಂದುವರೆದ ಆನ್‌ಲೈನ್ ದೋಖಾ...

ಮಗು ಶಾಲೆಗೆ ಸೇರಿಸುವುದಾಗಿ ಹೇಳಿ ಲಕ್ಷ ವಂಚನೆ

ಮೈಸೂರು, ನ. 2- ಶಾಲೆಗೆ ಮಕ್ಕಳನ್ನು ಸೇರಿಸುವುದಾಗಿ ಹೇಳಿ ಆನ್‌ಲೈನ್ ಮೂಲಕ 99 ಸಾವಿರ ರೂ. ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ತಪೋವನ ಸರಸ್ವತಿ ಅಪಾರ್ಟ್‌ಮೆಂಟ್ ನಿವಾಸಿ ಪಿ.ವಿ. ರಮೇಶ್(56) ಎಂಬುವರಿಗೆ 7811012317 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ತಾನು ಆರ್ಮಿಯಲ್ಲಿ ಕೆಲಸ ಮಾಡುತ್ತಿರುವುದಾಗಿಯೂ ರಮೇಶ್ ಅವರ ಪತ್ನಿ ನಡೆಸುತ್ತಿರುವ ಶಾಲೆಗೆ ತನ್ನ ಇಬ್ಬರು ಮಕ್ಕಳನ್ನು ಸೇರಿಸುವುದಾಗಿ ತಿಳಿಸಿ, ಶುಲ್ಕ ಕಟ್ಟಲು ಹೇಳಿ ಮೊದಲಿಗೆ 1 ರೂ. ಕಳುಹಿಸಿ, ಲಿಂಕ್ ಅನ್ನು ಕ್ಲಿಕ್ ಮಾಡುವಂತೆ ತಿಳಿಸಿದ್ದಾನೆ. ರಮೇಶ್ ಹಾಗೆ ಮಾಡುತ್ತಿದ್ದಂತೆಯೇ ಅವರ ಪತ್ನಿಯ ಖಾತೆಯಿಂದ 99 ಸಾವಿರ ರೂ. ಹಂತ ಹಂತವಾಗಿ ಕಡಿತಗೊಂಡಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡೈಮಂಡ್ ವಾಚ್ ಗಿಫ್ಟ್ ಆಸೆಗೆ 5.56 ಲಕ್ಷ ಕಳೆದುಕೊಂಡ ಪ್ರಿನ್ಸಿಪಾಲ್!? ಮತ್ತೊಂದು ಪ್ರಕರಣದಲ್ಲಿ ವಿದೇಶದಿಂದ ಗೋಲ್ಡ್ ಅಂಡ್ ಡೈಮಂಡ್ ವಾಚ್ ಹಾಗೂ ಬೆಲೆ ಬಾಳುವ ಗಿಫ್ಟ್ ಕಳುಹಿಸುವುದಾಗಿ ವಾಟ್ಸಾಪ್ ಮೆಸೇಜ್ ಮಾಡಿ, ಪ್ರಾಂಶುಪಾಲೆಯೊಬ್ಬರಿಗೆ 5,56,600 ರೂ.ಗಳನ್ನು ಆನ್‌ಲೈನ್ ಮೂಲಕ ವಂಚಿಸಲಾಗಿದೆ. ಹುಣಸೂರು ತಾಲೂಕು ಕಲ್ಲಹಳ್ಳಿಯಲ್ಲಿ ರುವ ಸೆಂಟ್ ಆಂಟನಿ ಇಂಟರ್‌ನ್ಯಾಷನಲ್ ಸ್ಕೂಲ್ ಪ್ರಾಂಶುಪಾಲೆ ಶ್ರೀಮತಿ ಶೈಲಾ ದೇವಸ್ಯಾ(48) ವಂಚನೆಗೊಳಗಾದವರಾಗಿದ್ದಾರೆ. ಸೆ. 22ರಂದು ಇವರ ವಾಟ್ಸಾಪ್‌ಗೆ ವಿದೇಶಿ ಸಂಖ್ಯೆಯಿಂದ ಮೆಸೇಜ್ ಬಂದಿದೆ. ಆಗ ಅವರು ಕರೆ ಮಾಡಿ ನನ್ನ ನಂಬರ್ ಹೇಗೆ ಸಿಕ್ಕಿತು? ಎಂದು ಕೇಳಿದಾಗ, ಇಂಟರ್‌ನೆಟ್‌ನಲ್ಲಿ ಸರ್ಚ್ ಮಾಡಿ ನಂಬರ್ ಪಡೆದಿರುವುದಾಗಿ ತಿಳಿಸಿದ ವ್ಯಕ್ತಿ, ತಾನು ಯುಕೆನಲ್ಲಿ ಕಂಟ್ರಾಕ್ಟರ್ ಆಗಿರು ವುದಾಗಿ, ತನ್ನ ಹೆಸರು ಮೈಕೆಲ್ ರೆಡಾಕಿನ್ ಎಂದು ಪರಿಚಯ ಮಾಡಿ ಕೊಂಡಿದ್ದಾನೆ. ನಂತರ ಶೈಲಾ ಅವರ ವಿಳಾಸ ಪಡೆದ ಆತ, ಗೋಲ್ಡ್ ಮತ್ತು ಡೈಮಂಡ್ ವಾಚ್ ಹಾಗೂ ಇತರ ಬೆಲೆ ಬಾಳುವ ವಸ್ತುಗಳನ್ನು ಕಳುಹಿಸುತ್ತಿರುವುದಾಗಿ ತಿಳಿಸಿ, ಅದನ್ನು ಪಾರ್ಸೆಲ್ ಮಾಡಿರುವ ಫೋಟೋವನ್ನು ವಾಟ್ಸಾಪ್‌ನಲ್ಲಿ ರವಾನಿಸಿದ್ದಾನೆ. ಅಕ್ಟೋಬರ್ 10ರಂದು ಶೈಲಾ ಅವರಿಗೆ 9233048349 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ದೆಹಲಿ ಏರ್‌ಪೋರ್ಟ್‌ನಿಂದ ಮಾತನಾಡುತ್ತಿರುವುದಾಗಿ ತಿಳಿಸಿ, ಅವರಿಗೆ ಬಂದಿರುವ ಗಿಫ್ಟ್ ಐಟಂಗಳನ್ನು ಬಿಡಿಸಿಕೊಳ್ಳಲು ಜಿಎಸ್‌ಟಿ ಸೇರಿದಂತೆ ಇತರ ಶುಲ್ಕಗಳೆಂದು ಹಂತ ಹಂತವಾಗಿ ಅಕ್ಟೋಬರ್ 10ರಿಂದ 12ರವರೆಗೆ ಒಟ್ಟು 5,56,600 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ಆದರೆ ಈವರೆವಿಗೂ ಶೈಲಾ ಅವರಿಗೆ ಯಾವುದೇ ಗಿಫ್ಟ್ ಬಂದಿಲ್ಲ. ಈ ಸಂಬಂಧ ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ನಿವೇಶನ ಹಕ್ಕುಪತ್ರಕ್ಕೆ ಆಗ್ರಹಿಸಿ ಉಸ್ತುವಾರಿ ಸಚಿವರಿಗೆ ಮುತ್ತಿಗೆ ಯತ್ನ

ಮೈಸೂರು,ನ.2(ಎಂಟಿವೈ)- ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಚಿವ ಎಸ್.ಟಿ.ಸೋಮಶೇಖರ್ ಅವರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲು ಮುಂದಾದ ಏಕಲವ್ಯನಗರದ ನಿವಾಸಿಗಳನ್ನು ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದರು.

ಏಕಲವ್ಯನಗರದಲ್ಲಿ ತಾವು ನೆಲೆಸಿರುವ ನಿವೇಶನಗಳಿಗೆ ಹಕ್ಕುಪತ್ರ ನೀಡುವಂತೆ ಆಗ್ರಹಿಸಿ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ದಸಂಸ ನೇತೃತ್ವದಲ್ಲಿ ಪ್ರತಿಭಟನೆ ಮಾಡುತ್ತಿರುವ ಅಲೆಮಾರಿ ಸಮುದಾಯದವರು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಚಿವರಿಗೆ ಪ್ರತಿಭಟನೆಯ ಬಿಸಿ ಮುಟ್ಟಿಸಿದರು.

ಜಿಲ್ಲಾಡಳಿತದ ವತಿಯಿಂದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಮಂಗಳವಾರ ನಡೆದ ಕನ್ನಡ ರಾಜ್ಯೋತ್ಸವ ಮೆರವಣಿಗೆಗೆ ಚಾಲನೆ ನೀಡಿದ ಸಚಿವರು, ಡಾ.ರಾಜ್‌ಕುಮಾರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲು ತೆರಳುತ್ತಿದ್ದಾಗ ಚಾಮರಾಜ ವೃತ್ತದಲ್ಲಿ ಪ್ರತಿಭಟನಾಕಾರರು ಸಚಿವರಿಗೆ ಘೇರಾವ್ ಹಾಕಿ ಘೋಷಣೆ ಕೂಗಿದರು.



ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರಿಗೆ ಮುತ್ತಿಗೆ ಹಾಕಿದ ಬಳಿಕ, ಪ್ರತಿಭಟನೆ ಮಾಡಿದ ಏಕಲವ್ಯನಗರ ನಿವಾಸಿಗಳು.

ಇದರಿಂದ ಗಲಿಬಿಲಿಗೊಂಡ ಸಚಿವರು, ಮಾಲಾರ್ಪಣೆ ಮಾಡದೆ ಅಲ್ಲಿಂದ ಕಾರ್ ಹತ್ತಿ ವಾಪಸ್ಸಾದರು. ಇದರಿಂದ ಇನ್ನಷ್ಟು ಕೆರಳಿದ ಪ್ರತಿಭಟನಾಕಾರರು ಮೆರವಣಿಗೆಯತ್ತ ಸಾಗಲು ಯತ್ನಿಸಿದರು. ಅವರನ್ನು ಪೊಲೀಸರು ತಡೆದು ನಿಲ್ಲಿಸಿದರು. ಕೊನೆಗೆ ಪ್ರತಿಭಟನಾ ನಿರತ ಮಕ್ಕಳು, ಮಹಿಳೆಯರು ರಸ್ತೆಯಲ್ಲೇ ಕುಳಿತು ಘೋಷಣೆ ಕೂಗಿದರು.

ಅನಿರೀಕ್ಷಿತವಾಗಿ ನಡೆದ ಘಟನೆಯಿಂದ ಅಧಿಕಾರಿಗಳು ಹಾಗೂ ಪೊಲೀಸರು ಗಲಿಬಿಲಿಗೊಂಡರು. ಪೊಲೀಸರು, ಪರಿಸ್ಥಿತಿಯನ್ನು ನಿಯಂತ್ರಿಸಲು ಪರದಾಡಿದರು. ಕೊನೆಗೆ ಮಕ್ಕಳು ಹಾಗೂ ಮಹಿಳೆಯರು ಸೇರಿದಂತೆ 50ಕ್ಕೂ ಹೆಚ್ಚು ಜನರನ್ನು ಬಂಧಿಸಲಾಯಿತು. ಮೂರು ವ್ಯಾನ್‌ನಲ್ಲಿ ಅವರನ್ನು ಕರೆದುಕೊಂಡು ಹೋಗಿ ನಂತರ ಬಿಡುಗಡೆ ಮಾಡಲಾಯಿತು.

ಟಿ20; ಕೊಹ್ಲಿ ನೂತನ ದಾಖಲೆ



ಪರ್ತ್: ಟೀಂ ಇಂಡಿಯಾದ ಬ್ಯಾಟ್ಸ್‌ಮ್ಯಾನ್ ವಿರಾಟ್ ಕೊಹ್ಲಿ ಟಿ20 ವಿಶ್ವಕಪ್ ನಲ್ಲಿ ಅತೀ ಹೆಚ್ಚು ರನ್ ಬಾರಿಸಿದ ಆಟಗಾರ ಎಂಬ ನೂತನ ದಾಖಲೆ ಬರೆದಿದ್ದಾರೆ.

ಆಫ್ರಿಕಾ ವಿರುದ್ಧದ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಟಿ20 ಕ್ರಿಕೆಟ್‌ನಲ್ಲಿ ಭಾರತದ ಪರ 1,000 ರನ್ ಸಿಡಿಸಿದ ಮೊದಲ ಬ್ಯಾಟ್ಸ್‌ಮ್ಯಾನ್ ಎಂಬ ದಾಖಲೆಯ ಒಡೆಯನಾಗಿದ್ದ ಕೊಹ್ಲಿ, ಬಾಂಗ್ಲಾದೇಶ ವಿರುದ್ಧದ ಪಂದ್ಯದಲ್ಲಿ 15 ರನ್ ಬಾರಿಸುತ್ತಿದ್ದಂತೆ ಟಿ20 ವಿಶ್ವಕಪ್‌ನಲ್ಲಿ ಅತೀ ಹೆಚ್ಚು ರನ್ ಬಾರಿಸಿದ ವಿಶ್ವದ ಮೊದಲ ಆಟಗಾರ ಎಂಬ ದಾಖಲೆ ಬರೆದರು. ಈ ಮೂಲಕ ಟಿ20 ವಿಶ್ವಕಪ್‌ನಲ್ಲಿ ಶ್ರೀಲಂಕಾದ ಮಹೇಲ ಜಯವರ್ಧನೆ 1,016 ರನ್ ಬಾರಿಸಿ ಬರೆದಿದ್ದ ದಾಖಲೆಯನ್ನು, ಕೊಹ್ಲಿ ಮುರಿದು ನೂತನ ದಾಖಲೆಯ ಒಡೆಯನಾಗಿದ್ದಾರೆ.

ಕೊಹ್ಲಿ 23 ಇನ್ನಿಂಗ್ಸ್‌ಗಳಿಂದ 1,017 ರನ್ ಬಾರಿಸಿ ಮುರಿದರು.

ಮೈಸೂರಲ್ಲಿ ವಿಜೃಂಭಣೆಯಿಂದ ನೆರವೇರಿದ ಕನ್ನಡ ನಾಡು-ನುಡಿ ಉತ್ಸವ







ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರಿಗೆ ಮಂಗಳವಾರ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ನೀಡಿ, ಸನ್ಮಾನಿಸಲಾಯಿತು.

ಮೈಸೂರು,ನ.2(ಎಂಟಿವೈ)- ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಎರಡು ವರ್ಷದ ಬಳಿಕ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿತು. ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಮಂಗಳವಾರ ನಡೆದ ವರ್ಣರಂಜಿತ ಕಾರ್ಯಕ್ರಮದಲ್ಲಿ ಕನ್ನಡಾಂಬೆ ಭುವನೇಶ್ವರಿಯ ಉತ್ಸವ ಮೂರ್ತಿ ಭವ್ಯ ಮೆರವಣಿಗೆ ಕಣ್ಮನ ಸೆಳೆಯಿತು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅರಮನೆ ಆವರಣದಲ್ಲಿರುವ ಶ್ರೀ ಭುವನೇಶ್ವರಿ ದೇವಿಗೆ ಪೂಜೆ ಸಲ್ಲಿಸುವ ಮೂಲಕ ಕನ್ನಡ ರಾಜ್ಯೋತ್ಸವಕ್ಕೆ ಚಾಲನೆ ನೀಡಿದರು. ಬಳಿಕ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಹಾಕಿದ್ದ ವೇದಿಕೆಯಲ್ಲಿ ಶ್ರೀ ಭುವನೇಶ್ವರಿ ದೇವಿ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿದರು. ರಾಷ್ಟ್ರಧ್ವಜ ಮತ್ತು ಕನ್ನಡ ಧ್ವಜಾರೋಹಣ ನೆರವೇರಿದ ಬಳಿಕ ಪೊಲೀಸ್ ಬ್ಯಾಂಡ್‌ನಿಂದ ರಾಷ್ಟ್ರಗೀತೆ ಮತ್ತು ನಾಡಗೀತೆ ಮೊಳಗಿದವು.

ಗಮನ ಸೆಳೆದ ಪಥಸಂಚಲನ: ಕನ್ನಡ ರಾಜ್ಯೋತ್ಸವದ ಅಂಗವಾಗಿ ಮಂಗಳವಾರ ಆಯೋಜಿಸಿದ್ದ ಪಥಸಂಚಲನದಲ್ಲಿ ಕರ್ನಾಟಕ ರಾಜ್ಯ ಸಶಸ್ತ್ರ ಮೀಸಲು ಪಡೆ, ನಗರ ಸಶಸ್ತ್ರ ಮೀಸಲು ಪಡೆ, ಜಿಲ್ಲಾ ಸಶಸ್ತ್ರ ಮೀಸಲು ಪಡೆ, ನಗರ ನಾಗರಿಕ ಪಡೆ, ಮಹಿಳಾ ಪೊಲೀಸ್ ಪಡೆ, ಅಶ್ವರೋಹಿ ದಳ, ಅಗ್ನಿಶಾಮಕ ದಳ, ಪೊಲೀಸ್ ಬ್ಯಾಂಡ್, ಸ್ಕೌಟ್ಸ್ ಮತ್ತು ಗೈಡ್ಸ್, ವಿವಿಧ ಶಾಲಾ ವಿದ್ಯಾರ್ಥಿಗಳು ಆಕರ್ಷಕ ಪಥ ಸಂಚಲನ ನಡೆಸಿ ಗಮನ ಸೆಳೆದರು. ಬಳಿಕ ಭುವನೇಶ್ವರಿಯ ಪುತ್ಥಳಿ ಮೆರವಣಿಗೆ ಆರಂಭವಾಗಿ ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ, ಅಶೋಕ ರಸ್ತೆ ಮೂಲಕ ಸಾಗಿ ಪುರಭವನ ಆವರಣ ತಲುಪಿತು. ಈ ವೇಳೆ ವಿವಿಧ ಕಲಾತಂಡಗಳ ಮೆರವಣಿಗೆ ಗಮನ ಸೆಳೆಯಿತು. ನಂದಿಧ್ವಜ, ಕಲಾತಂಡಗಳು ಮೆರುಗು ನೀಡಿದವು. ಮೆರವಣಿಗೆಯುದ್ದಕ್ಕೂ ಕನ್ನಡ ಬಾವುಟ ರಾರಾಜಿಸಿದವು.

ವಿದ್ಯಾರ್ಥಿಗಳಿಗೆ ಗೌರವ: ಕಾರ್ಯಕ್ರಮದಲ್ಲಿ 2021-22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಹೆಚ್ಚು ಅಂಕ ಪಡೆದು ತೇರ್ಗಡೆಯಾಗಿರುವ ಬನ್ನೂರು ಹೋಬಳಿಯ ಮೆಣಸಿಕ್ಯಾತನಹಳ್ಳಿ ಸರ್ಕಾರಿ ಶಾಲೆಯ ಜಿ.ಎಸ್.ಹರ್ಷಿತಾ, ಹುಣಸೂರು ತಾಲೂಕಿನ ಮನುಗನಹಳ್ಳಿ ಸರ್ಕಾರಿ ಶಾಲೆಯ ಸಿ.ಆರ್.ಆದಿತ್ಯ, ಪಿರಿಯಾಪಟ್ಟಣ ತಾಲೂಕಿನ ಮಾಕೋಡು ಸರ್ಕಾರಿ ಶಾಲೆಯ ಎಸ್.ಎಂ.ಸಿಂಚನಾ, ಇದೇ ಶಾಲೆಯ ಎಂ.ಕೆ.ಪ್ರಾರ್ಥನ, ನಂಜನಗೂಡು ತಾಲೂಕಿನ ಕಪ್ಪಸೋಗೆ ಸರ್ಕಾರಿ ಶಾಲೆಯ ರಮ್ಯ, ಅವರಿಗೆ ಲ್ಯಾಪ್‌ಟಾಪ್ ನೀಡಲಾಯಿತು.

ಕನ್ನಡ ಮಾಧ್ಯಮದಲ್ಲಿ ಅಧಿಕ ಅಂಕ ಪಡೆದ ನಂಜನಗೂಡು ತಾಲೂಕಿನ ಬಿದರಗುಂಡ ಸರ್ಕಾರಿ ಶಾಲೆಯ ಅರ್ಚನ, ಪಿರಿಯಾಪಟ್ಟಣ ತಾಲೂಕಿನ ಹಲಗನಹಳ್ಳಿ ಸರ್ಕಾರಿ ಶಾಲೆಯ ಪಿ.ಎಂ.ವರ್ಷಿಣಿ, ಹುಣಸೂರು ತಾಲೂಕಿನ ಹರವೆ ಸರ್ಕಾರಿ ಶಾಲೆಯ ಕೆ.ಜೆ.ಸ್ನೇಹ, ಮೈಸೂರು ತಾಲೂಕಿನ ಗುಂಗ್ರಾಲ್ ಛತ್ರ ಸರ್ಕಾರಿ ಶಾಲೆಯ ಮಹದೇವಮ್ಮ, ಹೆಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿ ಸರ್ಕಾರಿ ಶಾಲೆಯ ಎಸ್.ನಯನ್ ಅವರಿಗೆ ನಗದು ಬಹುಮಾನ ನೀಡಲಾಯಿತು.

ವಿವಿಧ ಕ್ಷೇತ್ರದಲ್ಲಿನ ಸಾಧಕರಿಗೆ ಸನ್ಮಾನ: ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ 48 ಮಂದಿಗೆ ಜಿಲ್ಲಾಡಳಿತದ ವತಿಯಿಂದ ಸನ್ಮಾನಿಸಲಾಯಿತು. ಕಲೆ, ಸಾಹಿತ್ಯ, ಪತ್ರಿಕೋದ್ಯಮ, ಸಂಘಟನೆ, ಹೋರಾಟ, ಧಾರ್ಮಿಕ ಕ್ಷೇತ್ರ, ಕ್ರೀಡೆ, ಸಮಾಜ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುತ್ತಿರುವವರಿಗೆ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಶಾಸಕರಾದ ಎಸ್.ಎ.ರಾಮದಾಸ್, ತನ್ವೀರ್ ಸೇಠ್, ಎಲ್.ನಾಗೇಂದ್ರ, ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ, ಉಪಮೇಯರ್ ಡಾ.ರೂಪಾ ಯೋಗೇಶ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಮೈಸೂರು ಮಹಾನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಎಸ್‌ಪಿ ಆರ್.ಚೇತನ್, ಜಿ.ಪಂ. ಸಿಇಓ ಬಿ.ಆರ್.ಪೂರ್ಣಿಮಾ ಹಾಗೂ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು, ನಗರಪಾಲಿಕೆ ಸದಸ್ಯರು, ಕನ್ನಡಪರ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

ವರ್ಣರಂಜಿತ ಭುವನೇಶ್ವರಿಯ ಭವ್ಯ ಮೆರವಣಿಗೆ



ತಾಯಿ ಭುವನೇಶ್ವರಿ ವಿಗ್ರಹದ ಮೆರವಣಿಗೆಗೆ ಚಾಲನೆ ನೀಡಿದ ಸಚಿವ ಎಸ್.ಟಿ.ಸೋಮಶೇಖರ್.

ಕರುನಾಡು ಎಲ್ಲಾ ಜಾತಿ-ಧರ್ಮದ ಸುಂದರ ತೋಟವಾಗಿಯೇ ಉಳಿಬೇಕು

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಭಿಮತ

ಮೈಸೂರು,ನ.2(ಎಂಟಿವೈ)-ಸರ್ವ ಜನಾಂಗದ ಶಾಂತಿಯ ತೋಟವಾಗಿ ಕಂಗೊಳಿಸಿದ ಕರುನಾಡು ಎಲ್ಲ ಜಾತಿ, ಧರ್ಮಗಳ ಜನರೂ ಸಾಮರಸ್ಯದಿಂದ ಬದುಕುವ ಒಂದು ಸುಂದರ ತೋಟವಾಗಿಯೇ ಉಳಿಯಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಆಶಿಸಿದರು.

ಜಿಲ್ಲಾಡಳಿತದ ವತಿಯಿಂದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಧರ್ಮ ಸಹಿಷ್ಣುತೆ, ಸಮನ್ವಯತೆ, ಸೌಹಾರ್ದತೆಯಿಂದ ಬದುಕುತ್ತಿರುವ ನಾಡು ನಮ್ಮದು. ಕನ್ನಡ ಭಾಷೆ ಅತ್ಯಂತ ಶ್ರೀಮಂತ ಸಾಹಿತ್ಯ ಹೊಂದಿದೆ. ಕನ್ನಡನಾಡು ವಿವಿಧ ಧರ್ಮ ಸಂಸ್ಕೃತಿಗಳ ಸಮಾಗಮವಾಗಿದೆ. ಸ್ವಾತಂತ್ರ್ಯ ಪೂರ್ವದಿಂದಲೂ ಕನ್ನಡ ನಾಡಿನ ಐಕ್ಯತೆಯ ಯತ್ನ ನಿರಂತರವಾಗಿ ನಡೆದಿದ್ದು, ಕರ್ನಾಟಕ ಏಕೀಕರಣದ ಚರಿತ್ರೆಯನ್ನು ಎಲ್ಲರೂ ತಿಳಿಯುವುದು ಅಗತ್ಯವಾಗಿದೆ. ಕರ್ನಾಟಕ ಏಕೀಕರಣ ಮತ್ತು ನಾಮಕರಣದ ಸುದೀರ್ಘ ಹೋರಾಟದ ಫಲವಾಗಿ 1956ರ ನವೆಂಬರ್ 1ರಂದು ಹೊಸ ರಾಜ್ಯ ಅಸ್ತಿತ್ವಕ್ಕೆ ಬಂದಿತು ಎಂದರು.

ಭಾರತೀಯ ಭಾಷೆ ಮತ್ತು ಸಾಹಿತ್ಯಗಳಲ್ಲಿ ಉನ್ನತ ಶ್ರೇಣಿಯಲ್ಲಿರುವ ಚೆಲುವ ಕನ್ನಡ ಭಾಷೆಗೆ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. ಕರ್ನಾಟಕದ ಸ್ಥಾನ ಇಂದು ಭಾರತದ ಅಭಿವೃದ್ಧಿ ನಕ್ಷೆಯಲ್ಲಿ ಅಗ್ರ ಪಂಕ್ತಿಯಲ್ಲಿದೆ. ಭಾರತದ ಒಟ್ಟಾರೆ ಆರ್ಥಿಕ ವರಮಾನದಲ್ಲಿ ಕರ್ನಾಟಕದ್ದೇ ಸಿಂಹಪಾಲು. ಮಾಹಿತಿ ತಂತ್ರಜ್ಞಾನದ ದಿಗ್ಗಜರು ನಾವು. ಶೈಕ್ಷಣಿಕವಾಗಿ ರಾಷ್ಟ್ರದಲ್ಲಿಯೇ ಮುಂಚೂಣಿಯಲ್ಲಿರುವ ನಾಡು ನಮ್ಮದು. ವಿಜ್ಞಾನಿಗಳ ಕರ್ಮಭೂಮಿ ನಮ್ಮ ಕರ್ನಾಟಕ ಎಂದು ಹೆಮ್ಮೆಯಿಂದ ಹೇಳಿದರು.

ನಮ್ಮ ಮಕ್ಕಳು ತಮ್ಮ ಭವಿಷ್ಯದ ಹಾದಿ ಕಂಡುಕೊಳ್ಳಲು ಭಾಷೆಗಳು ನೆರವಾಗಬೇಕು. ನಾವು ಕನ್ನಡದ ಅಸ್ಮಿತೆ ಉಳಿಸಿಕೊಳ್ಳುವುದರ ಜತೆಗೆ ಇತರ ಭಾಷೆ, ಸಂಸ್ಕೃತಿ ನಮ್ಮದಾಗಿಸಿಕೊಳ್ಳಬೇಕು. ಕರ್ನಾಟಕವೆಂದರೆ ಕೇವಲ ಗಡಿ ರೇಖೆಯ ಒಳಗೆ ಸೀಮಿತವಾದ ಒಂದು ಭೌಗೋಳಿಕ ಪ್ರದೇಶವಲ್ಲ. ಅದು ರಾಷ್ಟ್ರೀಯ ಸಂಸ್ಕೃತಿಯನ್ನು ಕನ್ನಡದ ಸ್ವಂತ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಪ್ರತಿಪಾದಿಸುವ ಅತ್ಯುನ್ನತವಾದ ಭಾವ. ಕರ್ನಾಟಕದ ಹಿರಿಮೆಗೆ ಕುಂದು ಬಾರದಂತೆ ನೋಡಿಕೊಳ್ಳಬೇಕಿದೆ ಎಂದು ಸಚಿವರು ಎಚ್ಚರಿಸಿದರು.

ಪ್ರಸ್ತುತ ಜಾಗತೀಕರಣದ ಹಿನ್ನೆಲೆಯಲ್ಲಿ ಇಂಗ್ಲಿಷ್ ಭಾಷಾ ಜ್ಞಾನ ಅವಶ್ಯಕವಾಗಿದೆ. ಆದಾಗಿಯೂ ಎಂದಿಗೂ ಮಾತೃ ಭಾಷೆ ಕನ್ನಡಕ್ಕೆ ಮೊದಲ ಆದ್ಯತೆ. ನಮ್ಮ ಶಿಕ್ಷಣ ನೀತಿಯೂ ಮಾತೃ ಭಾಷೆಗೆ ಹೆಚ್ಚಿನ ಒತ್ತು ನೀಡಿದ್ದರೂ ಕನ್ನಡ ಭಾಷೆಯನ್ನು ಉಳಿಸಿಕೊಳ್ಳುವಲ್ಲಿ ನಮ್ಮೆಲ್ಲರ ಜವಾಬ್ದಾರಿ ಇದೆ ಎಂದು ತಿಳಿಸಿದರು.

ಕನ್ನಡ ಮಾಧ್ಯಮ ಶಾಲೆ ಉಳಿಸಿ ಬೆಳೆಸುವ ಕಾರ್ಯವನ್ನು ಸರ್ಕಾರ ಕೈಗೊಂಡಿದ್ದು, ಕನ್ನಡ ಭಾಷೆಯ ಸೊಗಡನ್ನು ಉಳಿಸಿಕೊಂಡು ಅದನ್ನು ಇನ್ನೂ ಹೆಚ್ಚಿಸುವ ಕೆಲಸದಲ್ಲಿ ಎಲ್ಲರೂ ಕೈಜೋಡಿಸಬೇಕಾಗಿದೆ. ರಾಜ್ಯ ಅಭಿವೃದ್ಧಿಯ ಹೊಸ ಮನ್ವಂತರಕ್ಕೆ ತೆರೆದುಕೊಳ್ಳುತ್ತಿದೆ. ರಾಷ್ಟ್ರೀಯ ಶಿಕ್ಷಣ ನೀತಿ-2020 ಜಾರಿಗೆ ತಂದ ಮೊದಲ ರಾಜ್ಯ ಎಂಬ ಹೆಗ್ಗಳಿಕೆ ನಮ್ಮದು. ಸುಶಿಕ್ಷಿತ, ಸುಸಂಸ್ಕೃತ ಸಮಾಜವನ್ನು ಕಟ್ಟಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.



ಮೈಸೂರಿನ ಕೌಟಿಲ್ಯ ವಿದ್ಯಾಲಯದಲ್ಲಿ 67ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಸಾಹಿತಿ ಮತ್ತು ಸಂಶೋಧಕ ಡಾ.ಕಬ್ಬಿನಾಲೆ ವಸಂತ ಭಾರಧ್ವಾಜ್ ಆಗಮಿಸಿದ್ದರು. ಕೌಟಿಲ್ಯ ವಿದ್ಯಾಲಯದ ಟ್ರಸ್ಟಿ ನೀತು, ಕೌಟಿಲ್ಯ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ, ಶಾಲೆಯ ಎಲ್ಲಾ ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸಮೃದ್ಧಿ, ನಿರೀಕ್ಷಾ, ಯಮುನಾ ನಡೆಸಿಕೊಟ್ಟರು. ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು.



ಮೈಸೂರಿನ ಅಗ್ರಹಾರ ವೃತ್ತದಲ್ಲಿ ಕರ್ನಾಟಕ ಸೇನಾ ಪಡೆ ವತಿಯಿಂದ 67ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಸಂಸದ ಪ್ರತಾಪ ಸಿಂಹ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕನ್ನಡ ಬಾವುಟ ವಿತರಿಸಿದರು. ಡಾ.ಬಿ.ಆರ್.ನಟರಾಜ್ ಜೋಯ್ಸ್ ಸಾರ್ವಜನಿಕರಿಗೆ ಸಿಹಿ ವಿತರಣೆ ಮಾಡಿದರು. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಬಿ.ಆರ್.ನಂದೀಶ್‌ಕುಮಾರ್, ಗೋಲ್ಡ್ ಸುರೇಶ್, ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಸಿ.ಎಚ್.ಕೃಷ್ಣಯ್ಯ(ಕೃಷ್ಣಪ್ಪ), ಪ್ರಭಾಕರ, ಮೊಗಣ್ಣಾಚಾರ್, ವಿಜಯೇಂದ್ರ, ಕುಮಾರ್, ಅಂಬಾ ಅರಸ್, ಜ್ಯೋತಿ, ಮಹಾದೇವ, ಬಂಗಾರಪ್ಪ, ದರ್ಶನ್ ಗೌಡ, ದಿಲೀಪ್, ಸ್ವಾಮಿ, ಗೊರೂರು ಮಲ್ಲೇಶ್, ರಾಧಾಕೃಷ್ಣ, ಸಿದ್ದರಾಜು, ಗಣೇಶ್‌ಪ್ರಸಾದ್, ಗುಂಡ್ಲುಪೇಟೆ ಸಂತೋಷ್ ಇನ್ನಿತರರು ಉಪಸ್ಥಿತರಿದ್ದರು.



ದಸರಾ ವಸ್ತುಪ್ರದರ್ಶನ ಪ್ರಾಧಿಕಾರದಿಂದ ರಾಜ್ಯೋತ್ಸವ ಆಚರಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಪ್ರಾಧಿಕಾರದ ಆವರಣದಲ್ಲಿರುವ ರಾಜ್‌ಕುಮಾರ್ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿದರು. ಸಂಸದ ಪ್ರತಾಪ್ ಸಿಂಹ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ, ಮೇಯರ್ ಶಿವಕುಮಾರ್, ಉಪಮೇಯರ್ ರೂಪ, ವಕೀಲ ಶಿವರಾಜ ಇನ್ನಿತರರಿದ್ದರು.



ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಬೋಗಾದಿಯ ಶಾರದಾನಗರ ರೈಲ್ವೆ ಬಡಾವಣೆಯ ಶರಣು ಕುಟೀರದಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ, ಮೈಸೂರು ಜಿಲ್ಲಾ ಶರಣು ವಿಶ್ವವಚನ ಫೌಂಡೇಷನ್ ಅಧ್ಯಕ್ಷ ಅನಿಲ್‌ಕುಮಾರ್ ವಾಜಂತ್ರಿ, ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ, ಕೇಂದ್ರೀಯ ಸಂಚಾಲಕ ವಿ.ಲಿಂಗಣ್ಣ, ಸಮವಸ್ತ್ರ ದಾಸೋಹಿಗಳಾದ ಶಿವಪುರ ಉಮಾಪತಿ, ವಚನ, ಗಿರಿಜೇಶ್, ನಿಜಗುಣ, ಮಂಜುಳ, ಕಾವ್ಯ, ಸಾಧನ, ಚಂದ್ರು, ಬಿ.ಆರ್.ಕಾವ್ಯ ಉಪಸ್ಥಿತರಿದ್ದರು.



ಮೈಸೂರು ನಗರದ ವಿಜಯನಗರ 4ನೇ ಹಂತದಲ್ಲಿರುವ ಸಮರ್ಥನಂ ವಿಕಲಚೇತನ (ಬುದ್ಧಿಮಾಂದ್ಯ) ವಿಶೇಷ ಮಕ್ಕಳ ಶಾಲೆಯಲ್ಲಿ ಮಂಗಳವಾರ 67ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಶಾಲೆಯ ಮುಖ್ಯೋಪಾಧ್ಯಾಯಿನಿ ಭ್ರಮರಾಂಬ, ಶಿಕ್ಷಕಿಯರಾದ ಹೆಚ್.ವಿದ್ಯಾವತಿ, ಮಾನಸ, ಸಿಬ್ಬಂದಿಗಳಾದ ಪವಿತ್ರ, ರಾಘವೇಂದ್ರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ವಿಜಯನಗರ ಎರಡನೇ ಹಂತದ ಹಿರಿಯ ನಾಗರಿಕರ ಹಿತರಕ್ಷಣಾ ಸಮಿತಿ ವತಿಯಿಂದ ರಾಜ್ಯೋತ್ಸವ ಆಚರಿಸಲಾಯಿತು. ಅಧ್ಯಕ್ಷರಾದ ಶ್ರೀಕಾಂತ ಬಡಿಗೇರ ಮತ್ತು ಸಮಿತಿ ಸದಸ್ಯರು ಹಾಗೂ ಬಡಾವಣೆ ನಿವಾಸಿಗಳೊಂದಿಗೆ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಿದರು.



ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ 67ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಸದಾನಂದ್ ಧ್ವಜಾರೋಹಣ ನೆರವೇರಿಸಿದರು. ಚಿತ್ರದಲ್ಲಿ ವೈದ್ಯರಾದ ಡಾ.ಹೇಮಾರವೀಶ್, ಡಾ.ನಂಜಪ್ಪ, ಡಾ. ಶ್ರೀನಿಧಿ ಹೆಗ್ಗಡೆ, ಆರ್‌ಎಂಓ. ಪಶುಪತಿ, ನರ್ಸಿಂಗ್ ಅಧೀಕ್ಷಕ ಹರೀಶ್‌ಕುಮಾರ್, ಪಿಆರ್‌ಓ ವಾಣಿಮೋಹನ್, ಚಂಪಕಮಾಲ, ಸಿದ್ದರಾಮು, ಸಯ್ಯದ್ ಇನ್ನಿತರರನ್ನು ಕಾಣಬಹುದು.



ಮೈಸೂರಿನ ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ನಾಗರಿಕ ವೇದಿಕೆ ಪೂರ್ಣಪ್ರಜ್ಞ ವಿದ್ಯಾ ಕೇಂದ್ರ ಶಾಲೆಯಲ್ಲಿ 67ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ವೇದಿಕೆ ಅಧ್ಯಕ್ಷ ಬಿ.ಪಿ.ಪುಟ್ಟಸ್ವಾಮಿ, ಉಪಾಧ್ಯಕ್ಷ ಪಿ.ರಮೇಶ್, ಕಾರ್ಯದರ್ಶಿ ಕುಳ್ಳೇಗೌಡ, ಶಾಲಾ ಸಮಿತಿ ಅಧ್ಯಕ್ಷ ಜೆ.ಲೋಕೇಶ್, ನಿರ್ದೇಶಕರಾದ ಎಚ್.ಅರವಿಂದ್, ಎಚ್.ಕೆ. ಅಪ್ಪಾಜಿಗೌಡ, ಮುಖ್ಯ ಶಿಕ್ಷಕಿ ಶ್ಯಾಮಲಾ ದೇವಿ ಇತರರು ಉಪಸ್ಥಿತರಿದ್ದರು.

ಹೆಚ್ಚು ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಸಮೃದ್ಧ ಭಾಷೆ ಕನ್ನಡ: ಡಾ.ಸಿಪಿಕೆ

ಮೈಸೂರು,ನ.2-ಮೈಸೂರು ಕಂಠೀರವ ನರಸಿಂಹರಾಜ ಕ್ರೀಡಾ ಸಂಕೀರ್ಣದಲ್ಲಿ ನಡೆದ ರೋಟರಿ ಮೈಸೂರು ಆಗ್ನೇಯದ ಕನ್ನಡ ರಾಜ್ಯೋತ್ಸವ ಹಾಗೂ ರೋಟರಿ ಕುಟುಂಬ ಸಮ್ಮಿಲನ ಕಾರ್ಯಕ್ರಮದಲ್ಲಿ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಬಗ್ಗೆ ಮಾತನಾಡಿದ ಸಿಪಿಕೆಯವರು ಕನ್ನಡ ಭಾಷೆಯನ್ನು ಪಠ್ಯದಲ್ಲಿ ಪ್ರಾಥಮಿಕ ಹಂತದಲ್ಲೇ ಅಳವಡಿಸಲು ಕರೆಯಿತ್ತರು. ಕನ್ನಡ ಸುಂದರವಾದ ಭಾಷೆ, ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ತಂದುಕೊಟ್ಟ ಸಮೃದ್ಧ ಭಾಷೆ, ಇದನ್ನು ಉಳಿಸಿ ಬೆಳಸಬೇಕಾದ ಅಗತ್ಯತೆ ಈಗ ಸಮಾಜದ ಮುಂದಿದೆ. ಪರಭಾಷೆಯಿಂದ ಕ್ಷೀಣಿಸುತ್ತಿರುವ ನಮ್ಮ ಕನ್ನಡವನ್ನು ಉಳಿಸಲು ಕಲಿಕೆಯಲ್ಲಿ ಪ್ರಾಥಮಿಕ ಹಂತದಿಂದಲೇ ಕನ್ನಡವನ್ನು ಕಡ್ಡಾಯವಾಗಿಸಲಿ ಎಂದು ಆಶಿಸಿದರು.



ಬಳಿಕ ರೋಟರಿ ಕನ್ನಡ ಮಾಸಪತ್ರಿಕೆ 'ಸಂಗಮ'ವನ್ನು ಬಿಡುಗಡೆ ಗೊಳಿಸಿದರು. ವೇದಿಕೆಯಲ್ಲಿ ರೋಟರಿ ಮೈಸೂರು ಆಗ್ನೇಯ ಸಂಸ್ಥೆಯ ಅಧ್ಯಕ್ಷ ರೋ. ಮೋಹನ್ ಎಂ, ಕಾರ್ಯದರ್ಶಿ ರೋ. ಮುರಳೀಧರ ಕೆ.ಎನ್., ರೋಟರಿ ಜಿಲ್ಲೆ 3181 ವಲಯ 8ರ ಸಹಾಯಕ ಗವರ್ನರ್ ರೋ.ವಾಸುದೇವನ್, ವಲಯ ಸೇನಾನಿ ರೋ. ರವೀಂದ್ರ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ರೋ.ನವೀನ್‌ಕುಮಾರ್ ಪಿ.ಬಿ ಮತ್ತು ರೋ.ಸತ್ಯಾನಂದ ಶ್ರೀನಿವಾಸ್ ಸಂಸ್ಥೆಗೆ ನೂತನ ಸದಸ್ಯರಾಗಿ ಸೇರ್ಪಡೆಗೊಂಡರು. ಕನ್ನಡ ರಾಜ್ಯೋತ್ಸವದ ಆಚರಣೆಯನ್ನು ಕುಟುಂಬ ಸಮ್ಮಿಲನದ ಕಾರ್ಯಕ್ರಮವಾಗಿ ಹಮ್ಮಿಕೊಂಡು ಪಾರಂಪರಿಕ ಉಡುಗೆಗಳಿಂದ ಆಗಮಿಸಿದ್ದ ಸದಸ್ಯರಿಗೆ ಸ್ಪರ್ಧೆಗಳನ್ನು ಸಂಸ್ಥೆ ಏರ್ಪಡಿಸಿತ್ತು. ಅತ್ಯುತಮ ಉಡುಗೆ ತೊಟ್ಟ ದಂಪತಿಗಳನ್ನು ಆಯ್ಕೆಮಾಡಿ ಬಹುಮಾನ ವಿತರಿಸಲಾಯಿತು.



ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಹಿರಿಯ ವಿಜ್ಞಾನಿ ಡಾ.ಮಹದೇವಯ್ಯ ಅವರನ್ನು ಸನ್ಮಾನಿಸಲಾಯಿತು. ಗಾಂಧಿ ಭವನದ ಮಾಜಿ ನಿರ್ದೇಶಕ ಪ್ರೊ.ಶಿವರಾಜಪ್ಪ, ಸಹಾಯಕ ಪೊಲೀಸ್ ಆಯುಕ್ತ ಗಂಗಾಧರಸ್ವಾಮಿ, ನಗರಪಾಲಿಕೆ ಸದಸ್ಯ ಕೊಪ್ಪಲ್ ಶಿವಕುಮಾರ್, ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ನೀ.ಗಿರಿಗೌಡ, ಜೈನ ಸಂಘದ ಮುಖಂಡ ಅಶೋಕ್, ಚನ್ನೇಗೌಡ, ಎಪಿಎನ್ ಪ್ರಾಪರ್ಟೀಸ್ ಪಾಲುದಾರ ಎ.ಪಿ.ನಾಗೇಶ್, ಪ್ರೊ.ಮುತಾಲಿಕ್ ಪಾಟೀಲ್, ಪ್ರೊ.ನಾಗರಾಜಪ್ಪ, ಮೂಗಿ ಬೋರಪ್ಪ, ಬಸಪ್ಪ, ಆರ್.ಬಸಪ್ಪ, ಕೆ.ನಾಗೇಂದ್ರ, ದೇವು(ಪ್ರದೀಪ್) ರಾಕಿ, ಭೂಕನಕೆರೆ ವಿಜಯೇಂದ್ರ, ಲಕ್ಷ್ಮಣ್, ಫಾಲ್ಕನ್ ರಾಜಣ್ಣ, ಅರವಿಂದನಗರ ರಾಜಣ್ಣ, ಮೇರವೇಗೌಡ, ಶ್ರೀನಿವಾಸ್ ಸೋಂಬಣ್ಣ, ಚೆಲುವರಾಜ್, ಕೆ.ಪಿ.ಮಾದೇವ, ಮಾದಪ್ಪ, ಉಮಾಪತಿ, ಕಜ್ಜಪ್ಪ, ಕೃಷ್ಣಪ್ಪ, ಪಟೇಲ್ ರಂಗಸ್ವಾಮಿ, ಎಳನೀರು ರಾಮಣ್ಣ, ಸೊಸೈಟಿ ರಾಜಪ್ಪ, ರವಿ ಪೊನ್ನಪ್ಪ ನಾಗರಾಜು, ಪೈಲ್ವಾನ್ ಪುಟ್ಟಸ್ವಾಮಿ, ರಾಜಕುಮಾರ್, ಬೋರಲಿಂಗೇಗೌಡ, ರಾಮಣ್ಣ, ಕೆ-ಬ್ಲಾಕ್‌ನ ಲೋಕೇಶ್, ದಿಲೀಪ್, ಬೆಳಗೊಳ ಗೋವಿಂದೇಗೌಡ ಇನ್ನಿತರರಿದ್ದಾರೆ.



ಮಿನಿ ದಸರಾ ನೆನಪಿಸಿದ ಹುಣಸೂರು ಕನ್ನಡ ಹಬ್ಬ

ಕಲಾತಂಡಗಳು, ಸ್ತಬ್ಧಚಿತ್ರಗಳ ವಿಜೃಂಭಣೆಯ ಮೆರವಣಿಗೆ

ಹುಣಸೂರು, ನ.2– ಹುಣಸೂರು ನಗರದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ಕನ್ನಡ ಸಂಸ್ಕೃತಿ ಪ್ರತಿಬಿಂಭಿಸುವ ಸಾಂಸ್ಕೃತಿಕ ಕಲಾತಂಡಗಳ ಮೆರವಣಿಗೆ ಮಿನಿ ದಸರಾ ಮಾದರಿಯಲ್ಲಿ ವಿಜೃಂಭಿಸಿತು.

ನಗರದ ರಂಗನಾಥ ಬಡಾವಣೆಯಿಂದ ಹೊರಟ ರಾಜ್ಯೋತ್ಸವದ ಮೆರವಣಿಗೆಗೆ ಶಾಸಕ ಎಚ್.ಪಿ.ಮಂಜುನಾಥ್, ನಗರಸಭೆ ಅಧ್ಯಕ್ಷೆ ಗೀತಾ, ಉಪಾಧ್ಯಕ್ಷೆ ಆಶಾ, ಸ್ಥಾಯಿಸಮಿತಿ ಅಧ್ಯಕ್ಷೆ ಶ್ವೇತಾ, ಉಪವಿಭಾಗಾಕಾರಿ ವರ್ಣಿತ್‌ನೇಗಿ, ತಹಸೀಲ್ದಾರ್ ಡಾ.ಅಶೋಕ್, ತಾ.ಪಂ. ಇ.ಓ.ಮನು ಅವರುಗಳು ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಿ ನಂದಿ ಕಂಬಕ್ಕೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು. ಇದಕ್ಕೂ ಮುನ್ನ ಪುನಿತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ವಿವಿಧ ಶಾಲಾ ಮಕ್ಕಳ ಆಕರ್ಷಕ ಬ್ಯಾಂಡ್‌ಸೆಟ್, ವಿದ್ಯಾರ್ಥಿಗಳ ಪಥಸಂಚಲನ, ಮಂಗಳವಾದ್ಯ, ಸ್ಯಾಕ್ಸೋಫೋನ್ ಸಂಗೀತದೊಂದಿಗೆ ಆರಂಭಗೊಂಡ ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ನಗಾರಿ, ಡೊಲಾಕ್ ಬ್ಯಾಂಡ್ ಸೆಟ್, ಕಟ್ಟೆಮಳಲವಾಡಿಯ ಅಂಬೇಡ್ಕರ್ ಕಲಾಸಂಘದ ಕೋಲಾಟ, ಸಿಡಿಯಮ್ಮ ಮಹಿಳಾ ಕಲಾತಂಡ, ಅಲಂಕೃತ ಜೋಡೆತ್ತು, ಜೋಡಿ ಟಗರುಗಳು ಸೇರಿದಂತೆ ವಿವಿಧ ಸಂಘ ಸಂಸ್ಥೆ, ಶಾಲೆಗಳು ಹಾಗೂ ಸರಕಾರಿ ಇಲಾಖೆಗಳ ನಾಡು–ನುಡಿ ಪ್ರತಿಬಿಂಬಿಸುವ ಆಕರ್ಷಕ ಸ್ತಬ್ದ ಚಿತ್ರಗಳ ಮೆರವಣಿಗೆಯ ಕೊನೆಯಲ್ಲಿ ಅಲಂಕೃತ ಬೆಳ್ಳಿ ಸಾರೋಟಿನಲ್ಲಿ ಕುಳ್ಳರಿಸಿದ್ದ ಭುವನೇಶ್ವರಿ ದೇವಿಯ ಕಂಚಿನ ವಿಗ್ರಹದೊಂದಿಗೆ ಸಾಗಿಬಂತು.

ವಿವಿಧ ವೃತ್ತಗಳ ಆಟೋ ಸಂಘಗಳವರು, ಕಾರು–ಲಾರಿ ಚಾಲಕರು ತಮ್ಮ ನಿಲ್ದಾಣಗಳಲ್ಲಿ ಕನ್ನಡ ಸಂಸ್ಕೃತಿ ಬಿಂಬಿಸುವ ವೈವಿಧ್ಯಮಯ ಪ್ರಕಾರಗಳನ್ನು ಅಲಂಕಾರಗೊಳಿಸಿದ್ದರು. ಸುಮಾರು ಒಂದೂವರೆ ಕಿ.ಮೀ ಉದ್ದದ ಮೆರವಣಿಗೆಯನ್ನು ರಸ್ತೆಯ ಇಕ್ಕೆಲಗಳಲ್ಲಿ ನಿಂತ ನಾಗರಿಕರು ಕಣ್ತುಂಬಿಕೊಂಡರು. ರಸ್ತೆಯುದ್ದಕ್ಕೂ ಕನ್ನಡ ಭಾವುಟಗಳು ರಾರಾಜಿಸುತ್ತಿದ್ದವು. ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಪ್ರತ್ಯೇಕವಾಗಿ ತಮ್ಮ ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ಕನ್ನಡತನ ಮೆರೆದ ಸ್ಥಬ್ದಚಿತ್ರಗಳು: ಮೆರವಣಿಗೆಯಲ್ಲಿ ಸಾಗಿ ಬಂದ ಸ್ಥಬ್ದಚಿತ್ರಗಳ ಪೈಕಿ ಸಂತಜೋಸೆಫರ ಪದವಿ ಕಾಲೇಜಿನ ವಿಜಯನಗರ ವೈಭವ, ಶಾಸ್ತ್ರೀ ವಿದ್ಯಾಸಂಸ್ಥೆಯ ಕನ್ನಡದ ಸಾಹಿತ್ಯ ಲೋಕದ ಕಣ್ಮಣಿಗಳು, ಕ್ರೈಸ್ಟ್ ಸ್ಕೂಲ್‌ನ ಗದ್ದಿಗೆಯ ಕೆಂಡಗಣ್ಣೇಶ್ವರಸ್ವಾಮಿ ಪ್ರತಿಮೆ, ಬ್ರಿಲಿಯನ್ಸ್ ಶಾಲೆಯ ಮೈಸೂರು ದಸರಾ ವೈಭವ ಮತ್ತು ಸಂಸ್ಕೃತಿ ಪ್ರತಿಬಿಂಬಿಸುವ ಕನ್ನಡ ಸಾಹಿತಿಗಳ ಹಾಗೂ ಹೋರಾಟಗಾರರ ಪೋಷಾಕು ಧರಿಸಿದ್ದ ವಿದ್ಯಾರ್ಥಿಗಳು, ಸಂತಜೋಸೆಫರ ಪ್ರೌಢಶಾಲೆಯ ಚಿತ್ರದುರ್ಗದ ಕೋಟೆ, ರೋಟರಿ ವಿದ್ಯಾಸಂಸ್ಥೆಯ ಮೈಸೂರು ಮಹಾರಾಜದ ಕೊಡುಗೆಗಳು, ಎಂಆರ್‌ಎನ್‌ವಿ ವಿದ್ಯಾಸಂಸ್ಥೆಯ ಹಾರಂಗಿ ಜಲಾಶಯ, ಕಾವೇರಿ ವಿದ್ಯಾಸಂಸ್ಥೆಯ ತಲ ಕಾವೇರಿಯ ಸ್ಥಬ್ದಚಿತ್ರಗಳು ಗಮನ ಸೆಳೆದವು. ಮೆರವಣಿಗೆಯು ನಗರದ ಕಲ್ಕುಣಿಕೆ, ಶ್ರೀರಾಮ ವೃತ್ತ, ಹಳೇಸೇತುವೆ, ರೋಟರಿ ವೃತ್ತ, ಅಕ್ಷಯಭಂಡಾರ್, ಕಲ್ಪತರು ವೃತ್ತ, ಬಜಾರ್ ರಸ್ತೆ, ವಿಶ್ವೇಶ್ವರಯ್ಯ ವೃತ್ತ, ಜೆಎಲ್‌ಬಿ ರಸ್ತೆ ಎಸ್.ಜೆ. ರಸ್ತೆ ಮೂಲಕ ಸಾಗಿ ಬಂದು ಮುನೇಶ್ವರ ಕಾವಲ್ ಮೈದಾನದಲ್ಲಿ ಸಮಾವೇಶಗೊಂಡಿತು. ರಸ್ತೆಯ ಇಕ್ಕೆಲ ಗಳಲ್ಲಿ ನಿಂತ ನಾಗರೀಕರು ಮೆರವಣಿಗೆಯನ್ನು ಕಣ್ತುಂಬಿಕೊಂಡರು.


ಧ್ವಜಾರೋಹಣ: ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಬೆಳಗ್ಗೆ ಉಪವಿಭಾಗಾಕಾರಿ ವರ್ಣಿತ್ ನೇಗಿ ರಾಷ್ಟ್ರಧ್ವಜ ಹಾಗೂ ಶಾಸಕ ಎಚ್.ಪಿ.ಮಂಜುನಾಥ್ ಕನ್ನಡ ಧ್ವಜಾರೋಹಣ ನೆರವೇರಿಸಿ ಶುಭ ಕೋರಿದರು.

ಈ ವೇಳೆ ತಹಸೀಲ್ದಾರ್ ಡಾ.ಅಶೋಕ್, ಡಿವೈಎಸ್‌ಪಿ ರವಿಪ್ರಸಾದ್, ನಗರಸಭೆ ಅಧ್ಯಕ್ಷೆ ಗೀತಾ, ಉಪಾಧ್ಯಕ್ಷೆ ಆಶಾ, ಪೌರಾಯುಕ್ತರಾದ ರೂಪಾ, ಬಿ.ಇ.ಓ.ರೇವಣ್ಣ, ಸಮಾಜಕಲ್ಯಾಣಾಧಿಕಾರಿ ಮೋಹನ್ ಕುಮಾರ್, ಕ್ಷೇತ್ರ ಸಮನ್ವಯಾಧಿಕಾರಿ ಸಂತೋಷ್ ಕುಮಾರ್, ಕೃಷಿ ಸಹಾಯಕ ನಿರ್ದೇಶಕ ವೆಂಕಟೇಶ್, ಎಇಇ ಬೋಜರಾಜ್, ಸಿ.ಡಿ.ಪಿ.ಓ. ರಶ್ಮಿ, ಕಸಾಪ ತಾಲೂಕು ಅಧ್ಯಕ್ಷ ಹರವೆ ಮಹದೇವ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.



ಕನ್ನಡ ಹಬ್ಬದಲ್ಲೂ ರಾಜಕೀಯ ರಂಗು

ಮೆರವಣಿಗೆಯಲ್ಲಿ ಮಂಜುನಾಥ್, ಹರೀಶ್‌ಗೌಡರ ಪ್ರತ್ಯೇಕ ಹೆಜ್ಜೆ



ಇದು ಚುನಾವಣಾ ವರ್ಷವಾದ್ದರಿಂದ ಮತದಾರರ ಮನಗೆಲ್ಲಲು ರಾಜ್ಯೋತ್ಸವದಲ್ಲೂ ರಾಜಕಾರಣಿಗಳು ಪೈಪೋಟಿಗಿಳಿ ದಿದ್ದು ಕಂಡು ಬಂತು. ಮುಂದಿನ ಚುನಾವಣೆಯ ಎದುರಾಳಿಗಳೆಂದೇ ಬಿಂಬಿತವಾಗಿರುವ ಶಾಸಕ ಎಚ್.ಪಿ.ಮಂಜುನಾಥ್ ಹಾಗೂ ನಿಯೋಜಿತ ಜೆಡಿಎಸ್ ಅಭ್ಯರ್ಥಿ ಹರೀಶ್ ಗೌಡರು ತಮ್ಮ ಅಪಾರ ಬೆಂಬಲಿಗರೊಂದಿಗೆ ಪ್ರತ್ಯೇಕವಾಗಿ ಮೆರವಣಿಗೆಯಲ್ಲಿ ಭಾಗಿಯಾಗಿದ್ದಲ್ಲದೆ, ವಿವಿಧೆಡೆ ಆಟೋ–ಕಾರು ಚಾಲಕರು ಆಯೋಜಿಸಿದ್ದ ಕನ್ನಡ ಹಬ್ಬದ ಅಲಂಕೃತ ವೃತ್ತಗಳಿಗೆ ಭೇಟಿ ನೀಡಿದ್ದು ವಿಶೇಷ. ವೃತ್ತಗಳಲ್ಲಿ ಇಬ್ಬರಿಗೂ ಸನ್ಮಾನಿಸಲಾಯಿತು. ಇಬ್ಬರಿಗೂ ಅವರವರ ಅಭಿಮಾನಿಗಳು ಜೈಕಾರ ಹಾಕಿದ್ದು ಕಂಡುಬಂತು. ಇನ್ನು ವಿಶ್ವೇಶ್ವರಯ್ಯ ವೃತ್ತದಲ್ಲಂತೂ ಭಾರೀ ಪೈಪೋಟಿ ಕಂಡುಬಂತು. ಶಾಸಕ ಮಂಜುನಾಥ್, ಮಾಜಿ ಶಾಸಕ ಚಿಕ್ಕಮಾದು ಪುತ್ರಿ ಮಮತ ಹಾಗೂ ನಗರಸಭೆ ಅಧ್ಯಕ್ಷರು, ಬೆಂಬಲಿತ ಸದಸ್ಯರಿಗೆ ಪುಷ್ಪವೃಷ್ಟಿಗೈದರಲ್ಲದೆ ಜೆಸಿಬಿ ಯಂತ್ರದ ಮೂಲಕ ಬಾದಾಮಿಯ ಬೃಹತ್ ಹಾರ ಹಾಕಿ ಜೈಕಾರ ಕೂಗಿ, ಹೆಗಲ ಮೇಲೆ ಹೊತ್ತು ಕುಣಿದರೆ, ಇದಕ್ಕೂ ಮೊದಲೇ ಭೇಟಿ ನೀಡಿದ್ದ ಜಿ.ಡಿ.ಹರೀಶ್ ಗೌಡರನ್ನು ಎತ್ತಿನಗಾಡಿಯಲ್ಲಿ ಮೆರವಣಿಗೆಯಲ್ಲಿ ಕರೆತಂದು ಪುಷ್ಪವೃಷ್ಟಿಗೈದು, ಜೆಸಿಬಿ ಮೂಲಕ ಸೇಬಿನ ಬೃಹತ್ ಹಾರವನ್ನು ಹಾಕಿ ಹೆಗಲ ಮೇಲೆ ಹೊತ್ತು ಸಂಭ್ರಮಿಸಿದರು. ಇನ್ನು ಸೇಬು–ಬಾದಾಮಿ ಕಿತ್ತುಕೊಳ್ಳಲು ಅಭಿಮಾನಿಗಳು ಪೈಪೋಟಿ ಗಿಳಿದಿದ್ದು ಕಂಡು ಬಂತು. ಹುಡಾ ಅಧ್ಯಕ್ಷ ಗಣೇಶ್‌ಕುಮಾರಸ್ವಾಮಿ ನೇತೃತ್ವದಲ್ಲಿ ಬಿಜೆಪಿಯ ಹಲವಾರು ಮುಖಂಡರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಮೆರವಣಿಗೆಗೆ ಸಂಗೊಳ್ಳಿರಾಯಣ್ಣ ಸಂಘದವರು ಅಲಂಕೃತ ಜೋಡಿ ಟಗರುಗಳು ಕಳೆಗಟ್ಟಿತ್ತು.

ಅಹೋರಾತ್ರಿ ಧರಣಿ ಕೈಬಿಟ್ಟ ನೆರೆ ಸಂತ್ರಸ್ತರು

ಸರಗೂರು, ನ.2– ಪಟ್ಟಣದ ತಾಲೂಕು ಕಚೇರಿ ಎದುರು ನೆರೆ ಸಂತ್ರಸ್ತರು ಕಳೆದ 7 ದಿನಗಳಿಂದ ನಡೆಸುತ್ತಿದ್ದ ಅಹೋರಾತ್ರಿ ಧರಣಿಯನ್ನು ಕೈಬಿಟ್ಟಿದ್ದಾರೆ.

ಧರಣಿ ಸ್ಥಳಕ್ಕೆ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರು ಭೇಟಿ ನೀಡಿ, ಕಾನೂನು ಚೌಕಟ್ಟಿನೊಳಗೆ ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಡುವೆ ಎಂದು ಭರವಸೆ ನೀಡಿದ ಹಿನ್ನೆಲೆಯಲ್ಲಿ ಧರಣಿಯನ್ನು ಕೈಬಿಟ್ಟು ಶಾಸಕ ಅನಿಲ್ ಚಿಕ್ಕಮಾದು ಅವರ ನೇತೃತ್ವದಲ್ಲಿ ಜಿಲ್ಲಾ ವಿಭಾಗೀಯ ಆಯುಕ್ತರನ್ನು ಭೇಟಿ ಮಾಡಲು ನಿರ್ಧರಿಸಲಾಯಿತು.

ಧರಣಿ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ತಾವು ಹಳೆದ ವರದಿ ನೋಡಿ ಸತ್ಯಾಸತ್ಯತೆ ಯನ್ನು ಪರಿಶೀಲನೆ ನಡೆಸುತ್ತೇನೆ. ಇಲ್ಲಿ ಹಠ ಮಾಡುವುದನ್ನು ಬಿಟ್ಟು ಅಧಿಕಾರಿಗಳಿಗೆ ಎಲ್ಲರೂ ಸಹಕಾರ ನೀಡಬೇಕು. ನಾನು ಯಾವುದೇ ಧರಣಿ ಸ್ಥಳಕ್ಕೆ ಭೇಟಿ ನೀಡುವುದಿಲ್ಲ. ಅನ್ಯ ಕೆಲಸದ ನಿಮಿತ್ತ ಈ ದಾರಿಯಲ್ಲಿ ಬಂದ ಕಾರಣ ಇಲ್ಲಿಗೆ ಭೇಟಿ ನೀಡಿದ್ದು, ನ್ಯಾಯಯುತವಾಗಿ ಮತ್ತು ಕಾನೂನಾತ್ಮಕವಾಗಿ ನಿಮ್ಮ ಸಮಸ್ಯೆ ಬಗೆಹರಿಸಿಕೊಡುವೆ ಎಂದು ಭರವಸೆ ನೀಡಿದರು.

ಉಪ ವಿಭಾಗಾಧಿಕಾರಿ ರುಚಿ ಬಿಂದಲ್, ಮಾಜಿ ಶಾಸಕ ಚಿಕ್ಕಣ್ಣ ಮಾತನಾಡಿದರು. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕೆ.ಚಿಕ್ಕವೀರನಾಯಕ, ಭಾಗ್ಯಲಕ್ಷ್ಮೀ, ಪಂಚಾಯತಿ ಸದಸ್ಯ ಎಸ್.ಎಲ್. ರಾಜಣ್ಣ, ಜೀವಿಕ ಬಸವರಾಜು, ಮರಿದೇವಯ್ಯ, ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಸಂವಿಧಾನ ಸಂರಕ್ಷಣಾ ಸಮಿತಿ ಅಧ್ಯಕ್ಷ ಬೀರ್ವಾಳ್ ಬಸವರಾಜು, ಕಾರ್ಯದರ್ಶಿ ಬೆಟ್ಟಸ್ವಾಮಿ, ಚನ್ನೀಪುರ ಮಲ್ಲೇಶ್, ಹಂಚೀಪುರ ಬಸವಣ್ಣ, ಗ್ರಾಮೀಣ ಮಹೇಶ್, ಸಮಾಜಸೇವಕ ದೇವದತ್ತ, ತಾಲೂಕು ಜೆಡಿಎಸ್ ಅಧ್ಯಕ್ಷ ಜಿ.ಗೋಪಾಲಸ್ವಾಮಿ, ಹಳಿಯೂರು ಚಿನ್ನಣ್ಣ, ಯಶವಂತಪುರ ಶ್ರೀನಿವಾಸ್, ಶಿವಲಿಂಗಯ್ಯ, ನಾಗರಾಜು, ಪುಟ್ಟು, ವಿವಿಧ ಪಕ್ಷದ ಮುಖಂಡರುಗಳು ನೆರೆ ಸಂತ್ರಸ್ತ ಮಹಿಳೆಯರು ಧರಣಿಯಲ್ಲಿ ಭಾಗವಹಿಸಿದ್ದರು.



ಪಿರಿಯಾಪಟ್ಟಣ ತಾಲೂಕು ಕುರುಬ ಸಮಾಜದ ಅಧ್ಯಕ್ಷ ಹಾಗೂ ಕೆಪಿಸಿಸಿ ಮಾಜಿ ಸದಸ್ಯರಾದ ಎಚ್ ಡಿ ಗಣೇಶ್ ಅವರ ಹುಟ್ಟುಹಬ್ಬವನ್ನು ವೇದಾಕ್ಷಿ ಗಣೇಶ್ ಎಜುಕೇಷನ್ ಇನ್‌ಸ್ಟಿಟ್ಯೂಷನ್‌ನಲ್ಲಿ ಸಾವಿರ ದೀಪಗಳನ್ನು ಹಚ್ಚಿ ನೂರು ಕೆಜಿ ತೂಕದ ಸೇಬಿನ ಹಾರವನ್ನು ಹಾಕುವುದರ ಮೂಲಕ ಅವರ ಅಭಿಮಾನಿಗಳು ಆಚರಿಸಿದರು. ಈ ಸಂದರ್ಭದಲ್ಲಿ ಅವರ ಪತ್ನಿ ಶ್ರೀಮತಿ ವೇದಾಕ್ಷಿ, ಮುಖಂಡರುಗಳಾದ ರೈಲ್ವೆ ಬಸವರಾಜ್, ಕೋಟೆಹುಂಡಿ ಸಿದ್ದಪ್ಪ, ಸಂಜು, ಉದಯಕುಮಾರ್, ಕೆ.ಎಂ. ಅನುರಾಜ್, ಮಾದೇಗೌಡ, ಶಿವಣ್ಣ ಸೇರಿದಂತೆ ಹಲವು ಅಭಿಮಾನಿಗಳು ಹಾಜರಿದ್ದರು.

ಕನ್ನಡ ಭಾಷೆ ತುಳಿದು ಬದುಕುವುದಲ್ಲ, ತಿಳಿದು ಬದುಕುವುದು

ಹೆಚ್.ಡಿ.ಕೋಟೆಯಲ್ಲಿ ಕನ್ನಡ ರಾಜ್ಯೋತ್ಸವ ಸಂಭ್ರಮ



ಹೆಚ್.ಡಿ.ಕೋಟೆ, ನ.2– ಕನ್ನಡ ಭಾಷೆ ತುಳಿದು ಬದುಕುವುದಲ್ಲ ತಿಳಿದು ಬದುಕುವುದು ಎಂದು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ಪಿ ಪ್ರಸನ್ನ ಕುಮಾರ್ ತಿಳಿಸಿದರು.

ಪಟ್ಟಣದ ಡಾ. ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಮಂಗಳವಾರ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ 67ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಆಗಮಿಸಿ ಅವರು ಮಾತನಾಡಿದರು. ಕನ್ನಡ ಭಾಷೆಗೆ ತನ್ನದೇ ಆದ ಸಾಹಿತ್ಯ, ಸಂಸ್ಕೃತಿ, ಪರಂಪರೆಯ ಶ್ರೀಮಂತಿಕೆಯನ್ನು ಹೊಂದಿದೆ. ಕವಿರಾಜ ಮಾರ್ಗದಲ್ಲಿ ಕಾವೇರಿಯಿಂದ ಗೋದಾವರಿಗೆ ಇದ್ದ ಕನ್ನಡ ನಾಡನ್ನು ಕವಿ ವರ್ಣಿಸಿದ್ದಾನೆ. ಹಾಗೇ ಎಲ್ಲರೂ ಹಿಂದೆ ತಿರುಳುಗನ್ನಡದಲ್ಲಿ ಮಾತನಾಡುತ್ತಿದ್ದರು ಮತ್ತು ಶಿಕ್ಷಿತರಲ್ಲದಿದ್ದರು ಕೂಡ ಕಾವ್ಯವನ್ನು ರಚಿಸುವಷ್ಟು ಕನ್ನಡಿಗರು ನೈಪುಣ್ಯತೆಯನ್ನು ಹೊಂದಿದ್ದರೂ, ಭಾಷೆ ಬರಿ ಭಾಷೆಯಲ್ಲ ಸ್ವಾಭೀಮಾನದ ಬದುಕುವ ಕ್ರಮ ಎಂದು ತಿಳಿಸಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಪ್ರತಿಯೊಬ್ಬರೂ ನಾಡು,ನುಡಿ, ಭಾಷೆಯ ಬಗ್ಗೆ ಅಭಿಮಾನ ಬೆಳಸಿ ಕೊಳ್ಳಬೇಕು, ದಿನನಿತ್ಯದ ಚಟುವಟಿಕೆಗಳಲ್ಲಿ ಕನ್ನಡ ಭಾಷೆಯನ್ನು ಬಳಸಿದಾಗ ಮಾತ್ರ ಭಾಷೆ ಉಳಿಯಲು ಸಾಧ್ಯ ಎಂದರು.

ಪ್ರತಿಯೊಂದು ಅಂಗಡಿ ಮುಂಗಟ್ಟುಗಳಲ್ಲಿ ಪ್ರಧಾನವಾಗಿ ಕನ್ನಡದಲ್ಲಿ ನಾಮ ಫಲಕಗಳನ್ನು ಹಾಕಬೇಕು, ಈ ಬಗ್ಗೆ ಅಧಿಕಾರಿಗಳು ಕ್ರಮ ವಹಿಸುವಂತೆ ಸೂಚನೆ ನೀಡಿದರು.

ಬೆಳಿಗ್ಗೆ ತಾಲೂಕು ಆಡಳಿತ ಸೌಧದಲ್ಲಿ ರಾಷ್ಟ್ರಧ್ವಜವನ್ನು ತಹಸೀಲ್ದಾರ್ ಸಣ್ಣರಾಮಪ್ಪ ಹಾಗೂ ನಾಡ ಧ್ವಜವನ್ನು ಶಾಸಕ ಅನಿಲ್ ಚಿಕ್ಕಮಾದು ನೆರವೇರಿಸಿದರು.

ನಂತರ ಪಟ್ಟಣದ ವರದರಾಜ ಸ್ವಾಮಿ ದೇವಸ್ಥಾನದ ಆವರಣದಿಂದ ಭುವನೇಶ್ವರಿ ಭಾವಚಿತ್ರವನ್ನು ಹೂವಿನಿಂದ ಅಲಂಕರಿಸಿ, ಬೆಳ್ಳಿರಥದ ಮೂಲಕ ನಾದಸ್ವರ, ವೀರಗಾಸೆ, ಬೀಸು ಕಂಸಾಳೆ, ವಿವಿಧ ಶಾಲೆಗಳಿಂದ ನಾಡು ನುಡಿ ಸಂಸ್ಕೃತಿ ಬಿಂಬಿಸುವ ಸ್ಥಬ್ದಚಿತ್ರಗಳೊಂದಿಗೆ ಮೆರವಣಿಗೆ ನಡೆಯಿತು.

ವೇದಿಕೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಹತ್ತನೇ ತರಗತಿಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ಪ್ರಿಯಾಂಕ ಎ, ನಯನ ಎಸ್, ರಕ್ಷಿತ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಗಿರಿಜನ ಹೋರಾಟಗಾರ ಮೊದಲಿ ಮಾದಯ್ಯ ಮತ್ತು ವಾಲಿಬಾಲ್ ಕ್ರೀಡೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾದ ಬೀಚನಹಳ್ಳಿ ಪ್ರೌಢಶಾಲಾ ಮಕ್ಕಳನ್ನು ಹಾಗೂ ವಾಲಿಬಾಲ್ ಕ್ರೀಡೆಯಲ್ಲಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾದ ಕೆ.ಎಡತೊರೆ ಸುಶಾಂತ್ ಅವರನ್ನು ಅಭಿನಂದಿಸಲಾಯಿತು.

ಪಟ್ಟಣದ ಜೈಭೀಮ್ ಆಟೋ ಚಾಲಕರ ಸಂಘದವರು ವಿಶೇಷವಾಗಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ಮಹಿಳಾ ಸಾಧಕಿಯರು, ಹಿರಿಯ ಚಲನಚಿತ್ರ ನಟರ ಭಾವಚಿತ್ರ ಹಾಗೂ ಕನ್ನಡ ಬಾವುಟಗಳನ್ನು ಅಳವಡಿಸಿ ಜನರಲ್ಲಿ ಅಭಿಮಾನ ಮೂಡುವಂತೆ ರಾಜ್ಯೋತ್ಸವ ಆಚರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಚಿಕ್ಕವೀರನಾಯ್ಕ, ಪುರಸಭಾ ಅಧ್ಯಕ್ಷೆ ಅನಿತಾ ನಿಂಗನಾಯಕ, ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್, ಇಓ ರಾಜೇಶ್ ಜೆರಾಲ್ಡ್, ಬಿಇಓ ಉದಯಕುಮಾರ್, ನಾರಾಯಣ ಸ್ವಾಮಿ, ಬಸ್ ಘಟಕ ವ್ಯವಸ್ಥಾಪಕ ತ್ಯಾಗರಾಜು, ಪುರಸಭಾ ಸದಸ್ಯರುಗಳಾದ ಹೆಚ್.ಸಿ. ನರಸಿಂಹಮೂರ್ತಿ, ಸುಹಾಸಿನಿ, ಮುಖಂಡರಾಗಳಾದ ಶಂಭುಲಿಂಗ ನಾಯಕ, ಸೋಮೇಶ್, ಪರಶಿವ ಮೂರ್ತಿ, ಅಧಿಕಾರಿಗಳಾದ ಮಹೇಶ್, ಆಶಾ, ರಾಮಸ್ವಾಮಿ, ರೇಣುಕಾ ಸ್ವಾಮಿ, ಶಶಿಕಲಾ, ರಂಗಸ್ವಾಮಿ, ಬೋರಯ್ಯ, ಗೋವಿಂದ ನಾಯಕ ಇದ್ದರು.

ಬೈಕ್‌ಗೆ ಟೆಂಪೋ ಡಿಕ್ಕಿ: ಸವಾರ ಸಾವು



ಹುಲ್ಲಹಳ್ಳಿ, ನ.2– ಸಮೀಪದ ಕಂಬದಕೊಲ್ಲಿ ಬಳಿ ಹತ್ತಿರ ಬೈಕ್ ಮತ್ತು ಟೆಂಪೋ ನಡುವೆ ಸಂಭವಿಸಿದ ಡಿಕ್ಕಿಯಿಂದ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ವರದಿಯಾಗಿದೆ.

ಹೆಗ್ಗಡಹಳ್ಳಿಯ ಕೃಷ್ಣಶೆಟ್ಟಿ ಅವರ ಮಗ ಮಧು (25) ಸಾವನ್ನಪ್ಪಿದವರು. ಇವರು ರಾತ್ರಿ ಹುಲ್ಲಹಳ್ಳಿಯ ಶಿವಕುಮಾರ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿದ್ದ ಮದುವೆಯ ಆರತಕ್ಷತೆಯಲ್ಲಿ ಭಾಗವಹಿಸಿ ಹೆಗ್ಗಡಹಳ್ಳಿ ಗ್ರಾಮಕ್ಕೆ ಹಿಂದಿರುಗುತ್ತಿದ್ದಾಗ ಟೆಂಪೋ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಹುಲ್ಲಹಳ್ಳಿಯ ಪೊಲೀಸ್ ಠಾಣೆಯ ಪಿಎಸ್‌ಐ ಕೃಷ್ಣಕಾಂತ್ ಕೋಳಿವಾಡಿ ಪ್ರಕರಣ ದಾಖಲಿಸಿಕೊಂಡು ಟೆಂಪೋ ಮತ್ತು ಬೈಕ್‌ಗಳನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅಭಿಮಾನವಿದ್ದರೆ ನಾಡು–ನುಡಿ ಅಭಿವೃದ್ಧಿ ಸಾಧ್ಯ: ಅಶ್ವಿನ್

ತಿ.ನರಸೀಪುರದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ



ತಿ. ನರಸೀಪುರ, ನ.2– ಕನ್ನಡಿಗರಾದ ನಾವು ಕನ್ನಡ ಭಾಷೆ, ನೆಲ, ಜಲದ ಬಗ್ಗೆ ಸದಾ ಕಾಲ ಅಭಿಮಾನ ಹೊಂದಿದರೆ ಮಾತ್ರ ನಾಡು, ನುಡಿಯನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಸಾಧ್ಯ ಎಂದು ಶಾಸಕ ಎಂ. ಅಶ್ವಿನ್ ಕುಮಾರ್ ಹೇಳಿದರು.

ಪಟ್ಟಣದ ತಾಲೂಕು ಕಚೇರಿ ಮುಂಭಾಗದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ನಡೆದ 67 ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಕನ್ನಡ ನಾಡಿನ ಸಾಹಿತ್ಯ ಪರಂಪರೆಯನ್ನು ನಮ್ಮ ಕನ್ನಡಿಗರು ಎತ್ತಿ ಹಿಡಿದಿದ್ದಾರೆ. ಕುವೆಂಪು ಅವರು ನೀಡಿರುವ ನಾಡಗೀತೆಯ ಮೂಲಕ ನಮ್ಮ ನಾಡಿನ ಹಿರಿಮೆಯನ್ನು ಪ್ರತಿಬಿಂಬಿಸಿ ಕನ್ನಡತೆಯ ಸಂದೇಶ ಸಾರಿದ್ದಾರೆ. ನಾಡಿನ ಸಾಹಿತ್ಯ ನಮ್ಮ ಹೆಮ್ಮೆ. ಕನ್ನಡಿಗರಾದ ನಾವು ನಮ್ಮ ಭಾಷೆಯ ಮೇಲೆ ಅಪಾರವಾದ ಅಭಿಮಾನವನ್ನು ಬೆಳೆಸಿಕೊಂಡು ಭಾಷೆಯನ್ನು ನಿರಂತರವಾಗಿ ಬಳಸಿದಾಗ ಮಾತ್ರ ಕನ್ನಡ ಬೆಳೆಯಲು ಸಾಧ್ಯ. ಕನ್ನಡ ನವಂಬರ್‌ಗೆ ಸೀಮಿತವಾಗದೆ ನಿರಂತರವಾಗಬೇಕು ಎಂದು ಅಭಿಪ್ರಾಯಪಟ್ಟರು

ಧ್ವಜಾರೋಹಣದ ಬಳಿಕ ನಡೆದ ವೇದಿಕೆ ಕಾರ್ಯಕ್ರಮವನ್ನು ತಹಶೀಲ್ದಾರ್ ಸಿ. ಜಿ. ಗೀತಾ ಉದ್ಘಾಟಿಸಿ ತಾಲೂಕಿನ ಜನತೆಗೆ ರಾಜ್ಯೋತ್ಸವದ ಶುಭಾಶಯಗಳನ್ನು ಕೋರಿದರು. ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ರಂಗಭೂಮಿಯ ಮುಸುವಿನಕೊಪ್ಪಲು ಪ್ರಕಾಶ್, ಗಾಯಕ ಯಾಚೇನಹಳ್ಳಿ ಜಿ.ಮಹದೇವ್, ಬಂಡಿಪುರ ಹಾಗೂ ಬೆಂಗಳೂರು ಕನ್ನಡ ಫಾಂಟ್ ವಿನ್ಯಾಸಗೊಳಿಸಿದ ಆರ್. ಮಂಜುನಾಥ್, ಸಾಹಿತ್ಯ ಪರಿಷತ್‌ನ ಕನ್ನಡ ಪುಟ್ಟಸ್ವಾಮಿ, ಸೇರಿದಂತೆ ಇತರೆ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಲಿಂಗಪ್ಪ, ಶ್ರೀನಿವಾಸ, ಪದ್ಮ, ಸಿ.ಬಿ. ಹುಂಡಿ ಪ್ರಕಾಶ್, ರೋಜಾ ಎಂಬುವರನ್ನು ಸನ್ಮಾನಿಸಲಾಯಿತು. ಇದಕ್ಕೂ ಮುನ್ನಾ ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಾಲಯದ ಮುಂಭಾಗದಿಂದ ರಾಜ್ಯೋತ್ಸವ ಮೆರವಣಿಗೆ ಉತ್ಸವಕ್ಕೆ ಚಾಲನೆ ನೀಡಲಾಯಿತು. ಮೆರವಣಿಗೆ ಕಲಾ ತಂಡಗಳು ಹಾಗೂ ಶಾಲಾ ಮಕ್ಕಳೊಡನೆ ತಾಲೂಕು ಕಚೇರಿಯವರೆಗೆ ಸಾಗಿತು.

ನಂತರ ಪಟ್ಟಣದ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಕನ್ನಡ ನಾಡು, ನುಡಿ, ಜಲ ಅಭಿಮಾನ ಕುರಿತ ಗೀತೆಗಳಿಗೆ ಸಾಮೂಹಿಕ ನೃತ್ಯ ಪ್ರದರ್ಶನ ನೀಡಿ ಮನ ರಂಜಿಸಿದರು. ಇದೇ ವೇಳೆ ಪುನೀತ್ ರಾಜಕುಮಾರ್ ಕುರಿತ ಕವನ ವಾಚನ ನಡೆಯಿತು.

ತಾ.ಪಂ ಕಾರ್ಯ ನಿರ್ವಹಣಾಧಿಕಾರಿ ಕೃಷ್ಣ, ಗ್ರೇಡ್–2 ತಹಶೀಲ್ದಾರ್ ರಾಜಣ್ಣ, ಬಿಇಓ ಮರಿಸ್ವಾಮಿ, ಶಿರಸ್ತೇದಾರ್ ಪ್ರಭುರಾಜ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಮದ್ದಾನಪ್ಪ, ಸಮಾಜ ಕಲ್ಯಾಣ ಇಲಾಖೆಯ ರಾಮೇಗೌಡ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ. ಶಿವಶಂಕರಮೂರ್ತಿ, ಕೆ.ಎನ್. ಪ್ರಭುಸ್ವಾಮಿ, ಕೆ.ಆರ್. ಷಣ್ಮುಖಸ್ವಾಮಿ, ಸೋಸಲೆ ಮಹದೇವಶೆಟ್ಟಿ, ತುಂಬಲ ಮಹೇಶ್, ಕಸಾಪ ಪದಾಧಿಕಾರಿಗಳಾದ ಜ್ಞಾನೇಂದ್ರ ಮೂರ್ತಿ, ಮೂಗೂರು ಕುಮಾರಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ತು ಸಂಚಾಲಕ ಚೌಹಳ್ಳಿ ಮಲ್ಲೇಶ್, ಮಹದೇವಮ್ಮ, ಜಯಲಕ್ಷ್ಮಿ, ನಾಗರತ್ನಮ್ಮ, ಜಾನಕಮ್ಮ, ಕೃಷ್ಣಮೂರ್ತಿ, ಹೆಳವರಹುಂಡಿ ನಾಗೇಂದ್ರ ಮತ್ತಿತರರು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಗಂಧದಗುಡಿ (ಕ):** ಬೆ.6.20ಕ್ಕೆ, ಬೆ.8.20ಕ್ಕೆ, ರಾ.10.10ಕ್ಕೆ, **ಕಾಂತಾರ (ಕ):** ಬೆ.10.30ಕ್ಕೆ, ಮ.1.25ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ.
ಸ್ಕ್ರೀನ್ 2	**ಗಂಧದಗುಡಿ (ಕ):** ಬೆ.6.20ಕ್ಕೆ, ಬೆ.8.25ಕ್ಕೆ, **ಹೆಡ್ ಬುಷ್(ಕ):** 10.40ಕ್ಕೆ, ಮ.1.25ಕ್ಕೆ, **ಕಾಂತಾರ (ಕ):** ಸಂ.4.10ಕ್ಕೆ, 9.50ಕ್ಕೆ, **ರಾಮ್ ಸೇತು (ಹಿಂ):** ರಾ.7ಕ್ಕೆ.
ಸ್ಕ್ರೀನ್ 3	**ಗಂಧದಗುಡಿ (ಕ):** ಬೆ.6.20ಕ್ಕೆ, ಬೆ.8.35ಕ್ಕೆ, ಮ.1.20ಕ್ಕೆ, ಮ.3.25ಕ್ಕೆ, ಸಂ.5.30ಕ್ಕೆ, ರಾ.7.35ಕ್ಕೆ, **ಬ್ಲ್ಯಾಕ್ ಆಡಮ್ (ಇಂ):** ಬೆ.10.45ಕ್ಕೆ, **ಕಾಂತಾರ (ಕ):** ರಾ.9.55ಕ್ಕೆ.
ಸ್ಕ್ರೀನ್ 4	**ಗಂಧದಗುಡಿ (ಕ):** ಬೆ.6.20ಕ್ಕೆ, ಬೆ.8.20ಕ್ಕೆ, ಬೆ.10.15ಕ್ಕೆ, ಮ.12.15ಕ್ಕೆ, ಮ.2.15ಕ್ಕೆ, ಸಂ.4.15ಕ್ಕೆ, ಸಂ.6.15ಕ್ಕೆ, ರಾ.8.15ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ರಾಮ್‌ಸೇತು (ಹಿಂ):** ಬೆ.9.20ಕ್ಕೆ, **ಕಾಂತಾರ (ಕ):** ಮ.12.15ಕ್ಕೆ, ಮ.3.20ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	**ಗಂಧದಗುಡಿ (ಕ):** ಬೆ.9ಕ್ಕೆ, ಬೆ.11.05ಕ್ಕೆ, ಮ.1.10ಕ್ಕೆ, ಮ.3.20ಕ್ಕೆ, ರಾ.8.20ಕ್ಕೆ, ರಾ.10.30ಕ್ಕೆ, **ಹೆಡ್ ಬುಷ್ (ಕ):** ಸಂ.5.30ಕ್ಕೆ.
ಸ್ಕ್ರೀನ್ 3	**ಕಾಂತಾರ (ಕ):** ಬೆ.10ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ, **ಥ್ಯಾಂಕ್ ಗಾಡ್ (ಹಿಂ):** ಮ.1.10ಕ್ಕೆ.
ಸ್ಕ್ರೀನ್ 4	**ಕಾಂತಾರ (ಕ):** ಬೆ.10.45ಕ್ಕೆ, **ಹೆಡ್ ಬುಷ್ (ಕ):** ಮ.1.45ಕ್ಕೆ, **ರಾಮ್ ಸೇತು (ಹಿಂ):** ಸಂ.4.35ಕ್ಕೆ, ರಾ.10.10ಕ್ಕೆ, **ಥ್ಯಾಂಕ್ ಗಾಡ್ (ಹಿಂ):** ರಾ.7.35ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	**ಭೂ ನಾಟಕ ಮಂಡಳಿ(ಕ):** ಬೆ.10.20ಕ್ಕೆ, **ಸರ್ದಾರ್ (ತ):** ಮ.12.40ಕ್ಕೆ, **ಪ್ರಿನ್ಸ್ (ತ):** ಮ.3.50ಕ್ಕೆ, ಸಂ. 6.40ಕ್ಕೆ **ಮಾನ್ಸ್ಟರ್ (ಮ):** ರಾ.9.30ಕ್ಕೆ
ಸ್ಕ್ರೀನ್ 2	**ಕಾಂತಾರ (ಕ):** ಬೆ.10.15ಕ್ಕೆ, **ಸಂ. 4ಕ್ಕೆ, ಹೆಡ್ ಬುಷ್ (ಕ):** ಮ.1.10ಕ್ಕೆ, ಸಂ.7ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	**ಹೆಡ್ ಬುಷ್ (ಕ):** ಬೆ.10ಕ್ಕೆ, ಮ.3.55ಕ್ಕೆ, **ಕಾಂತಾರ (ಕ):** ಮ.1ಕ್ಕೆ, ಸ.6.40ಕ್ಕೆ, 9.45ಕ್ಕೆ
ಸ್ಕ್ರೀನ್ 4	**ಕಥಾನಾಯಕ (ಕ):** ಬೆ.10.15ಕ್ಕೆ, **ಪ್ರಿನ್ಸ್ (ತ):** ಮ.1ಕ್ಕೆ, **ಸರ್ದಾರ್ (ತ):** ಮ. 3.55ಕ್ಕೆ, **ಮಾನ್ಸ್ಟರ್ (ಮ):** ಸಂ.7.05ಕ್ಕೆ, **ಸರ್ದಾರ್ (ತ):** ರಾ. 9.45ಕ್ಕೆ

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139


ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, **ದಿ ಬ್ಲ್ಯಾಕ್ ಆಡಮ್ (ಇ):** ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, **ಪ್ರಿನ್ಸ್ (ತ):** ಮ.12.40ಕ್ಕೆ, ರಾ.7.10ಕ್ಕೆ **ಸರ್ದಾರ್ (ತ):** ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಗಂಧದಗುಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಾಂತಾರ (ತ)	4 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	5 ಪ್ರದರ್ಶನಗಳು
ಲಿಡೋ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಮ್ ಸೇತು (ಹಿಂ)	4 ಪ್ರದರ್ಶನಗಳು
ಪ್ರಭಾ	
ತೋತಾಪುರಿ (ಕ)	4 ಪ್ರದರ್ಶನಗಳು

ಗಣಪತಿ ದೇವಸ್ಥಾನದ ಅರ್ಚಕ ಕುಮಾರ್ ಆರಾಧ್ಯ ನಿಧನ



ಹುಲ್ಲಹಳ್ಳಿ, ನ.2– ಗಣಪತಿ ದೇವಸ್ಥಾನದ ಅರ್ಚಕರಾದ ಕುಮಾರ ಆರಾಧ್ಯ (57) ಅವರು ಅನಾರೋಗ್ಯದಿಂದ ನಿಧನ ಹೊಂದಿದ್ದಾರೆ. ಶ್ರೀಯುತರು ಪ್ರಸನ್ನ ಗಣಪತಿ ದೇವಸ್ಥಾನದ ಪೂಜಾರಿಯಾಗಿದ್ದು, ಇವರು ಜ್ಯೋತಿಷ್ಯಶಾಸ್ತ್ರದಲ್ಲಿ ಹೆಸರುಗಳಿಸಿದ್ದರು. ಮೃತರು ಪತ್ನಿ ಪ್ರೇಮ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಕಪಿಲಾ ನದಿಯ ವೀರಶೈವ ರುದ್ರಭೂಮಿಯಲ್ಲಿ ನಡೆಯಿತು.

ಅಕ್ಕಯ್ಯಮ್ಮ



ಹನಗೋಡು, ನ.2– ಸಮೀಪದ ಬಿ.ಆರ್.ಕಾವಲು ಗ್ರಾಮದ ಅಕ್ಕಯ್ಯಮ್ಮ (90) ಅವರು ಬುಧವಾರ ಮಧ್ಯಾಹ್ನ ನಿಧನರಾಗಿದ್ದಾರೆ.

ಮೃತರು ನೇರಳಕುಪ್ಪೆ ಗ್ರಾಪಂ ಮಾಜಿ ಅಧ್ಯಕ್ಷೆ ನಾಗಮ್ಮ ಬಿ.ಟಿ. ಶ್ರೀನಿವಾಸ್ ಮತ್ತು ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಕೃಷ್ಣೇಗೌಡ ಸೇರಿದಂತೆ ಮೂವರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮಾಜಿ ಸಚಿವ ಜಿ.ಟಿ.ದೇವೇಗೌಡ, ಶಾಸಕ ಹೆಚ್.ಪಿ.ಮಂಜುನಾಥ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹರೀಶ್‌ಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ರವಿಗೌಡ, ಸುಭಾಷ್, ಬಸವರಾಜ್, ಗ್ರಾಪಂ ಮಾಜಿ ಅಧ್ಯಕ್ಷ ದಾ.ರಾ.ಮಹೇಶ್, ಹನಗೋಡು ಹೋಬಳಿ ಒಕ್ಕಲಿಗರ ಸಂಘದ ಅಧ್ಯಕ್ಷ ಪ್ರಭಾಕರ್ ಸೇರಿದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಅವರ ಸ್ವಗ್ರಾಮ ಬಿ.ಆರ್.ಕಾವಲ್‌ನಲ್ಲಿ ಬೆಳಗ್ಗೆ 10 ಗಂಟೆಗೆ ನೇರವೇರಿಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಪತ್ರಕರ್ತ ಸ್ವಾಮಿ ಮುತ್ತೂರ್



ಪಿರಿಯಾಪಟ್ಟಣ, ನ.2– ಪಿರಿಯಾಪಟ್ಟಣದಲ್ಲಿ ಹಲೋ ದೊರೆ ಪತ್ರಿಕೆಯ ಸಂಪಾದಕರಾಗಿ ಪತ್ರಿಕೋದ್ಯಮಕ್ಕೆ ಕಾಲಿರಿಸಿ ನಂತರ ಕ್ರೈಂ ಸ್ಟೋರಿ, ಎಫ್‌ಐಆರ್ ಹಾಗೂ ವಿವಿಧ ದೃಶ್ಯ ಮಾಧ್ಯಮಗಳ ಕಾರ್ಯಕ್ರಮಗಳನ್ನೂ ನಡೆಸಿಕೊಡುತ್ತಿದ್ದ ಪತ್ರಕರ್ತ ಸ್ವಾಮಿ ಮುತ್ತೂರ್ (48) ಮಂಗಳವಾರ ಸಂಜೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ತಾಲೂಕಿನ ಮುತ್ತೂರು ಗ್ರಾಮದ ವಾಸಿಯಾಗಿರುವ ಡಿ ಮಣಿಯಯ್ಯ ಅವರ ಹಿರಿಯ ಮಗನಾಗಿದ್ದ ಇವರು ಪತ್ನಿ, ಓರ್ವ ಪುತ್ರ ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ ಇವರ ಅಂತ್ಯಕ್ರಿಯೆ ಸ್ವಗ್ರಾಮ ಮುತ್ತೂರಿನಲ್ಲಿ ಬುಧವಾರ ಮಧ್ಯಾಹ್ನ ನಡೆಯಿತು ಎಂದು ಕುಟುಂಬ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ತಾಲೂಕು ಪತ್ರಕರ್ತರ ಸಂಘ ಸಂತಾಪ ವ್ಯಕ್ತಪಡಿಸಿದೆ.

ರಾಮರಾವ್



ಹುಣಸೂರು, ನ.2– ನಗರದ 26ನೆ ವಾರ್ಡಿನ ಹೊಸಮಾರುತಿ ಬಡಾವಣೆಯಲ್ಲಿ ವಾಸವಾಗಿದ್ದ ಶಿವಾಜಿ ಮರಾಠಿ ಸಮಾಜದ ಹಿರಿಯ ಮುಖಂಡರಾದ ರಾಮರಾವ್ (83) ನಿಧನರಾಗಿದ್ದಾರೆ.

ದಿವಂಗತರು ಪತ್ನಿ, ಐವರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಗರದ ಹೊರವಲಯದ ಜಮೀನಿನಲ್ಲಿ ನೆರವೇರಿಸಿದರು. ಮೃತರ ನಿವಾಸಕ್ಕೆ ಭೇಟಿ ನೀಡಿ ಶಾಸಕ ಹೆಚ್.ಪಿ.ಮಂಜುನಾಥ್, ಬಿಜೆಪಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ವಕೀಲ ಯೋಗಾನಂದ್, ನಗರಸಭೆ ಸದಸ್ಯ ಗಣೇಶ್ ಕುಮಾರ್, ಸ್ವಾಮಿ, ರಮೇಶ್ ಸಂತಾಪ ಸೂಚಿಸಿದ್ದಾರೆ.